08 September 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ದಿನದ ಸಣ್ಣ , ಸಣ್ಣ ಭಿನ್ನಾಭಿಪ್ರಾಯವೇ
ಕೂಡು ಕುಟುಂಬದಲ್ಲಿ
ಕಿಚ್ಚನ್ನು ಹಚ್ಚುವುದು!

-ಸ್ನೇಹಾ ಆನಂದ್

info.varthaman@gmail.com




ಪ್ರಜಾಸೇವೆಯಡಿ ಅವಳಿ ತಾಲೂಕಿನಲ್ಲಿ 79 ಅರ್ಜಿಗಳು — ಪುಟ ಸಂ. 2



ಧಮ್ಮ ಪಯಣ: ಶಾಂತಿ, ಶಿಸ್ತಿನಿಂದ ಬರಮಾಡಿಕೊಳ್ಳಿ: ಶಾಸಕ — ಪುಟ ಸಂ. 3




ದಸರಾ: ಆಹಾರ ಮೇಳ ಮಳಿಗೆ: ಲಾಟರಿ ಆಯ್ಕೆಗೆ ವಿರೋಧ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 264 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## ಕನ್ನಾಳೆ ಕಪಟ ನಾಟಕ!

### ಕೆಆರ್‌ಎಸ್ ಪಾಲಾಯ್ತಾ ಹಗರಣದ ಫೈಲ್?



**ಬೆಂಗಳೂರು:** ಕೆಪಿಎಸ್‌ಸಿ ನೇಮಕಾತಿ ಹಗರಣದಲ್ಲಿ ದಿನಕ್ಕೊಂದು ಮಾಹಿತಿ ಹೊರಬೀಳುತ್ತಿವೆ. ಮಧ್ಯವರ್ತಿ ಬಸವರಾಜ್ ಕನ್ನಾಳೆ ಸಿಐಡಿ ಮುಂದೆ ಹೊಸ ನಾಟಕ ಶುರು ಮಾಡಿದ್ದಾನೆ. ಹುದ್ದೆಗಾಗಿ ಲಂಚ ಪಡೆದ ಸಾಕ್ಷ್ಯಾಧಾರಗಳ ಫೈಲನ್ನು ಕಾವೇರಿ ನದಿಗೆ ಬಿಸಾಕಿದ್ದೇನೆಂದು ನಾಟಕ ಮಾಡಿದ್ದಾನೆ.

ಶ್ರೀರಂಗಪಟ್ಟಣದ ಬಳಿ ಕಾವೇರಿ ನದಿಗೆ ಮೊಬೈಲ್, ಲ್ಯಾಪ್‌ಟಾಪ್ ಸೇರಿದಂತೆ ಎಲ್ಲವನ್ನೂ ಎಸೆದಿರುವುದಾಗಿ ತಿಳಿಸಿದ್ದಾನೆ. ಇದರ ಬೆನ್ನಲ್ಲೇ ಸಿಐಡಿ ಟೆಕ್ನಿಕಲ್ ಎವಿಡೆನ್ಸ್‌ಗಿ ಹುಡುಕಾಟ ನಡೆಸಿದೆ.

ಸಿಐಡಿ ಅಧಿಕಾರಿಗಳ ಮುಂದೆ ತಪ್ಪೊಪ್ಪಿಗೆ ಸಂದರ್ಭದಲ್ಲಿ ಬಸವರಾಜ್ ಹಾಗೂ ಗ್ಯಾನೇಂದ್ರ ಗಲಾಟೆ ಮಾಡಿಕೊಂಡಿದ್ದಾರೆ. ನಾನು ಅಕ್ರಮ ಮಾಡಿದ ಹಣದಲ್ಲಿ ಗ್ಯಾನೇಂದ್ರಗೆ ಪಾಲು ನೀಡಿದ್ದೇನೆ ಎಂದು ಕನ್ನಾಳೆ ಹೇಳಿದ್ದಾನೆ. ಆದರೆ, ಗ್ಯಾನೇಂದ್ರ ಪಶುವೈದ್ಯಾಧಿಕಾರಿ ನೇಮಕಾತಿ ಸಂದರ್ಭದಲ್ಲಿ ಹಣ ಪಡೆದೇ ಇಲ್ಲ ಅಂತಿದ್ದಾರೆ. ಇಬ್ಬರೂ ಕಳೆದ 5 ವರ್ಷಗಳಿಂದ ಸ್ನೇಹಿತರಾಗಿದ್ದರು. ಆದರೀಗ ಹಣದ ವಿಚಾರಕ್ಕೆ ಕಚ್ಚಾಡುತ್ತಿದ್ದಾರೆ.

ಅಭ್ಯರ್ಥಿಗಳಿಗೆ ಟ್ರೈನಿಂಗ್ ಕೊಟ್ಟಿದ್ದ ರೆಸಾರ್ಟ್ನ ಕೂಗಳತೆ ದೂರದಲ್ಲಿ ಗ್ಯಾನೇಂದ್ರ ಫ್ಲಾಟ್ ಇರುವುದು ಪತ್ತೆಯಾಗಿದೆ. ಅಭ್ಯರ್ಥಿಗಳಿಗೆ ತರಬೇತಿ ಕೊಡುತ್ತಿದ್ದ ಸಮಯದಲ್ಲಿ ಗ್ಯಾನೇಂದ್ರ ಅಲ್ಲಿಯೇ ಇರುತ್ತಿದ್ದ. ಸಿಐಡಿ ಅಧಿಕರಿಗಳು ಗ್ಯಾನೇಂದ್ರನ ಫ್ಲಾಟ್ ಮಹಜರು ಮಾಡಿದ್ದಾರೆ.

# ಸಚಿವ ಬೈರತಿ–ಎಚ್‌ಸಿಎಂ ತಿಕ್ಕಾಟ

## ಸಚಿವ ಸ್ಥಾನ ಕಳೆದು ಕೊಂಡರೂ ಬಂಗಲೆ ಬಿಡದ ಮಹಾದೇವಪ್ಪ



**ಬೆಂಗಳೂರು:** ಸಚಿವ ಸ್ಥಾನ ಕಳೆದುಕೊಂಡು ಮೂರು ತಿಂಗಳಾದರೂ ಇನ್ನೂ ಸರ್ಕಾರಿ ಬಂಗಲೆ ಬಿಡದ ಡಾ.ಎಚ್.ಸಿ.ಮಹದೇವಪ್ಪ ಮತ್ತು ಸಚಿವ ಬೈರತಿ ಸುರೇಶ್ ನಡುವಿನ ಗುದ್ದಾಟಕ್ಕೆ ತಾರಕಕ್ಕೇರಿದೆ.

ನಗರದ ಪ್ರತಿಷ್ಠಿತ ಕ್ರೆಸೆಂಟ್ ರಸ್ತೆಯಲ್ಲಿರುವ ಸರ್ಕಾರಿ ನಿವಾಸಕ್ಕಾಗಿ ಕಾಂಗ್ರೆಸ್ ಹಾಲಿ ಹಾಗೂ ಮಾಜಿ ಸಚಿವರ ನಡುವೆ ತೀವ್ರ ತಿಕ್ಕಾಟ ನಡೆಯುತ್ತಿದೆ. ಕ್ರೆಸೆಂಟ್ ರಸ್ತೆಯ ನಂ.2 ಸರ್ಕಾರಿ ಬಂಗಲೆಯನ್ನು ತಮ್ಮ ವಶಕ್ಕೆ ಪಡೆಯಲು ಸಾರಿಗೆ ಸಚಿವ ಬೈರತಿ ಸುರೇಶ್ ಮುಂದಾಗಿದ್ದಾರೆ. ಆದರೆ, ಮಾಜಿ ಸಚಿ ಮಹದೇವಪ್ಪ ಸರ್ಕಾರಿ ನಿವಾಸಿ ತೆರವುಗೊಳಿಸದಿರುವುದು ಕಿತ್ತಾಟಕ್ಕೆ ಕಾರಣವಾಗಿದೆ.

ಸಚಿವರಾಗಿದ್ದಾಗ ಡಾ.ಎಚ್.ಸಿ.ಮಹದೇವಪ್ಪ ಇದೇ ಬಂಗಲೆಯಲ್ಲಿ ವಾಸ್ತವ್ಯ ಹೂಡಿದ್ದರು. ಈಗ ಈ ನಿವಾಸವನ್ನು ತಮ್ಮ ಸುಪರ್ದಿಗೆ ಪಡೆಯಲು ಮುಂದಾಗಿರುವ ಸಚಿವ ಬೈರತಿ ಸುರೇಶ್ ಮಹದೇವಪ್ಪ ಅವರು ಬಂಗಲೆಯಲ್ಲೇ ಇರುವಾಗಲೇ ಏಕಾಏಕಿ ನವೀಕರಣ ಕಾಮಗಾರಿ ಶುರುಮಾಡಿಸಿದ್ದಾರೆ.

ಸಚಿವರಿಗೆ ಮನೆ ಖಾಲಿ ಮಾಡಲು 90 ದಿನಗಳ ಕಾಲಾವಕಾಶವಿದೆ. ಈಗ ಮಹದೇವಪ್ಪ ಅವರು ಮನೆಯಲ್ಲಿ ಇರುವಾಗಲೇ ಬಂಗಲೆಯ ಆವರಣಕ್ಕೆ ಜೆಸಿಬಿ ತರಿಸಿ ಅಲ್ಲಿದ್ದ ಮೀಟಿಂಗ್ ಹಾಲ್ ಅನ್ನು ನೆಲಸಮ ಮಾಡಿಸಲಾಗಿದೆ. ಅಷ್ಟೇ ಅಲ್ಲದೆ ಬೈರತಿ ಸುರೇಶ್ ಸೂಚನೆಯ ಮೇರೆಗೆ ಬಂಗಲೆಗೆ ಪೇಂಟಿಂಗ್ ಹಾಗೂ ನವೀಕರಣ ಕಾರ್ಯ ಭರದಿಂದ ಸಾಗುತ್ತಿವೆ. ಎಚ್.ಸಿ. ಮಹದೇವಪ್ಪ ಮನೆಯಲ್ಲಿದ್ದರೂ ಬೈರತಿ ಸುರೇಶ್ ಅವರನ್ನು ಭೇಟಿ ಮಾಡಿ ಮತನಾಡಿಸಿಲ್ಲ ಎನ್ನಲಾಗಿದೆ. ಎರಡೇ ದಿನಗಳಲ್ಲಿ ಖಾಲಿ ಮಾಡುವಂತೆ ಸಚಿವ ಬೈರತಿ ಸುರೇಶ್ ಹಾಗೂ ಅವರ ಬೆಂಬಲಿಗರು ಮಹದೇವಪ್ಪ ಅವರ ಮನೆ

ಪುಟ 2ಕ್ಕೆ

### ಬಾಡಿಗೆ ಮನೆ ಸಿಕ್ಕಿದ ತಕ್ಷಣ ಖಾಲಿ: ಎಚ್‌ಸಿಎಂ

**ಬೆಂಗಳೂರು:** ನನಗೆ ಬಾಡಿಗೆ ಮನೆ ಸಿಕ್ಕಿದ ತಕ್ಷಣ ಸರ್ಕಾರಿ ಬಂಗಲೆ ಖಾಲಿ ಮಾಡು ತ್ತೇನೆ ಎಂದು ಮಾಜಿ ಸಚಿವ ಮಹದೇವಪ್ಪ ತಿಳಿಸಿದ್ದಾರೆ.

ನಗರದ ಕ್ರೆಸೆಂಟ್ ರಸ್ತೆಯ ಬಂಗಲೆ ಈಗ ಬೈರತಿ ಸುರೇಶ್ ಅವರಿಗೆ ಹಂಚಿಕೆಯಾಗಿದೆ. ಹೀಗಾಗಿ ಖಾಲಿ ಮಾಡುವಂತೆ ಅವರು ಕೇಳಿದ್ದಾರೆ. ಇದರಲ್ಲಿ ಅವರ ತಪ್ಪೇನೂ ಇಲ್ಲ. ಇಲ್ಲಿ ಹಿರಿಯ–ಕಿರಿಯ ಎಂಬ ಪ್ರಶ್ನೆಯೇ ಬರುವುದಿಲ್ಲ. ಅವರು ಹಾಲಿ ಸಚಿವರು. ಅವರ ದೈನಂದಿನ ಕಾರ್ಯ ಚಟುವಟಿಕೆಗೆ ಅಡ್ಡಿಯಾಗಬಾರದು. ಹೀಗಾಗಿ ಶೀಘ್ರವೇ ಖಾಲಿ ಮಾಡುತ್ತೇನೆ ಎಂದು ಎಚ್.ಸಿ.ಮಹದೇವಪ್ಪ ತಿಳಿಸಿದರು.

# ಎಲ್ಲಾ ಕ್ಷೇತ್ರಗಳು ಬರಪೀಡತ

## ಶಾಸಕರು ಆತಂಕ ಪಡುವ ಅಗತ್ಯವಿಲ್ಲ: ಡಿಕೆಶಿ ಭರವಸೆ





**ಬೆಂಗಳೂರು:** ಬರ ತೀವ್ರ ಇರುವ ಎಲ್ಲಾ ಕ್ಷೇತ್ರಗಳನ್ನು ಬರಪೀಡಿತ ಪಟ್ಟಿಗೆ ಸೇರಿಸಲು ಕ್ರಮಕೈಗೊಳ್ಳಲಾಗುವುದು. ಸದ್ಯವೇ ಪ್ರಕ್ರಿಯೆ ನಡೆಯಲಿದೆ. ಯಾವುದೇ ಶಾಸಕರು ಆತಂಕ ಪಡುವ ಅಗತ್ಯವಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು.

ಮಾಧ್ಯಮಗಳ ಪ್ರಶ್ನೆಗಳಿಗೆ ಸೋಮವಾರ ಸಿಎಂ ಶಿವಕುಮಾರ್ ಪ್ರತಿಕ್ರಿಯೆ ನೀಡಿದರು. ರಾಜ್ಯದಲ್ಲಿ ಭೀಕರ ಬರದ ಪರಿಸ್ಥಿತಿ ನಿರ್ಮಾಣವಾಗಿದೆ. ಬರ ಘೋಷಣೆ ವಿಚಾರದಲ್ಲಿ ವೈಜ್ಞಾನಿಕ ಹಾಗೂ ತಾಂತ್ರಿಕ ವರದಿಗಳನ್ನು ಆಧರಿಸಿ 2–3 ಹಂತಗಳಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಹಾಗೂ ಇನ್ನೂ ಹಲವು ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗುವುದು ಎಂದು ಹೇಳಿದರು.

ಹಲವು ತಾಲ್ಲೂಕಿನ ಬರದ ವರದಿಗಳು ಬರುತ್ತಿವೆ. ಇನ್ನೂ ಬಹಳ ತಾಲೂಕುಗಳು ಘೋಷಣೆಯಾಗುತ್ತವೆ. ಬಹಳ ಕಡೆ ಭೀಕರ ಬರ ಇದೆ. 21 ದಿನ ಮಳೆಯಾಗದ ಸ್ಥಳಗಳನ್ನು ಗುರುತಿಸಿ ತಾಂತ್ರಿಕ ವರದಿ ಆಧರಿಸಿ ತೀರ್ಮಾನ ಮಾಡಲಾಗುವುದು ಎಂದರು.

ಪುಟ 2ಕ್ಕೆ

### ಬರ ಚರ್ಚೆಗೆ ಅಧಿವೇಶನ

ರಾಜ್ಯದಲ್ಲಿ ಭೀಕರ ಬರಗಾಲ ಎದುರಾಗಿರುವ ಹಿನ್ನೆಲೆಯಲ್ಲಿ ರೈತರ ಸಮಸ್ಯೆಗಳ ಕುರಿತು ಚರ್ಚಿಸಲು ವಿಶೇಷ ವಿಧಾನಸಭೆ ಅಧಿವೇಶನ ಕರೆಯಲಾಗಿದೆ. ಬರಪೀಡಿತ ಪ್ರದೇಶಗಳ ವಾಸ್ತವ ಸ್ಥಿತಿಯನ್ನು ವೈಜ್ಞಾನಿಕವಾಗಿ ಪರಿಶೀಲಿಸಿ, ರೈತರಿಗೆ ಅಗತ್ಯ ನೆರವು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು. ರೈತರು ಆಸ್ತಿ ಕಳೆದುಕೊಂಡಿರುವ ಹಿನ್ನೆಲೆಯಲ್ಲಿ ಅವರನ್ನು ರಕ್ಷಿಸುವುದು ಸರ್ಕಾರದ ಜವಾಬ್ದಾರಿ. ಹಿಂದಿನ ಸರ್ಕಾರಗಳು ಒಪ್ಪಂದಗಳಿಗೆ

ಪುಟ 2ಕ್ಕೆ

### ಕಾನೂನು ಹೋರಾಟ ಮಾಡಲಿ

ನೈಸ್ ಯೋಜನೆ ವಿಚಾರವಾಗಿ ರಾಜ್ಯ ಸರ್ಕಾರ ಕಾನೂನು ಉಲ್ಲಂಘಿಸಿ ಸಂಪುಟ ತೀರ್ಮಾನ ಕೈಗೊಂಡಿದೆ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಬಹಿರಂಗ ಪತ್ರ ಬರೆದಿರುವ ಬಗ್ಗೆ ಗಮನ ಸೆಳೆದಾಗ, ನಾವು ಏನು ಮಾಡಿದರೂ ಕಾನೂನು ಚೌಕಟ್ಟಿನಲ್ಲೇ ಮಾಡುತ್ತೇವೆ. ಕಾನೂನು ಅಭಿಪ್ರಾಯ ಪಡೆದುಕೊಳ್ಳುತ್ತೇವೆ. ಎಲ್ಲವನ್ನೂ ಮರುಪರಿಶೀಲನೆ ಮಾಡುತ್ತಿದ್ದೇವೆ. ಕಾನೂನು ಉಲ್ಲಂಘನೆಯಾಗಿದ್ದರೆ ಕೋರ್ಟ್ ಇದೆ. ಹೋರಾಟ ಮಾಡಲಿ ಎಂದು ತೀಕ್ಷ್ಣವಾಗಿ ತಿರುಗೇಟು ನೀಡಿದರು.



## ಗಜಪಡೆಗೆ ಅಂಬಾರಿ ಹೊರುವ ತಾಲೀಮು

**ಮೈಸೂರು:** ಮೈಸೂರು ದಸರಾ ಮಹೋತ್ಸವದ ಜಂಬೂಸವಾರಿಗೆ ಸಜ್ಜಾಗುತ್ತಿರುವ ಗಜಪಡೆಗೆ ಮರಳಿನ ಮೂಟೆ ಹೊರಿಸಿ ಅಂಬಾರಿ ಹೊರುವ ತೂಕದ ತಾಲೀಮನ್ನು ಆರಂಭಿಸಲಾಗಿದೆ.

ಮೊದಲ ದಿನದ ತಾಲೀಮಿನಲ್ಲಿ ಮಹೇಂದ್ರ ಆನೆಗೆ ಒಟ್ಟು 700 ಕೆಜಿ ತೂಕ ಹೊರಿಸಿ ಅಭ್ಯಾಸ ಮಾಡಿಸಲಾಯಿತು. ಇದರಲ್ಲಿ 350 ಕೆಜಿ ಮರಳಿನ ಮೂಟೆ ಹಾಗೂ 350 ಕೆಜಿ ತೂಕದ ನಮ್ದಾ, ಗಾದಿ, ಚಾಪು ಮತ್ತು ಕಬ್ಬಿಣದ ತೊಟ್ಟಿಲು ಸೇರಿವೆ. ಭಾರ ಹೊತ್ತು ಗಾಂಭೀರ್ಯದಿಂದ ಹೆಜ್ಜೆ ಹಾಕಿದ ಮಹೇಂದ್ರನಿಗೆ ಲಕ್ಷ್ಮೀ ಮತ್ತು ಕಾವೇರಿ ಆನೆಗಳು ಸಾಥ್ ನೀಡಿದವು. ಅಂಬಾರಿ ಹೊರುವ ರೇಸ್ ನಲ್ಲಿ

ವಿವರ ಪುಟ–02

# ನಮ್ಮಪ್ಪನ ಕಾರ್ಯಕ್ರಮ ಅಲ್ಲ!

## ಕರೆಯೋದು ಬಿಡೋದು ಆಯೋಜಕರಿಗೆ ಸೇರಿದ್ದು: ಯತೀಂದ್ರ

**ರಾಯಚೂರು:** ಬೆಂಗಳೂರಿನಲ್ಲಿ ನಡೆದಿದ್ದು ಅಹಿಂದ ಸಭೆ ಅಲ್ಲ. ಹಿಂದುಳಿದ ಸಂಘಟನೆಗಳ ಒಕ್ಕೂಟದ ಕಾರ್ಯಕ್ರಮ. ಇದು ನಮ್ಮಪ್ಪ ಮಾಡಿದ ಕಾರ್ಯಕ್ರಮ ಅಲ್ಲ ಎಂದು ನಗರಾಭಿವೃದ್ಧಿ ಸಚಿವ ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಮಾಧ್ಯಮಗಳ ಜೊತೆ ಸೋಮವಾರ ಮಾತನಾಡಿದ ಅವರು, ಹಿಂದುಳಿದ ಒಕ್ಕೂಟ ಸಮಾವೇಶಕ್ಕೆ ಸಚಿವ ಸತೀಶ್ ಜಾರಕಿಹೊಳಿಗೆ ಆಹ್ವಾನ ನೀಡದ ವಿಚಾರಕ್ಕೆ ಪ್ರತಿಕ್ರಿಯಿಸಿದರು. ಅಹಿಂದ ಯಾರ ಸ್ವತ್ತು ಅಲ್ಲ ನಿಜ. ಇದು ಯಾವುದೇ ರಾಜಕೀಯ ಕಾರ್ಯಕ್ರಮ ಅಲ್ಲ. ಕರೆಯೋದು, ಬಿಡೋದು ಆಯೋಜಕರಿಗೆ ಬಿಟ್ಟಿದ್ದು. ಇಂತವರನ್ನೇ ಕರೆಯಿರಿ, ಇವರನ್ನೇ ಬಿಡಿ ಎಂದು ಹೇಳೋಕೆ ಬರಲ್ಲ ಎಂದು ಸತೀಶ್ ಜಾರಕಿಹೊಳಿ ಹೇಳಿಕೆಗೆ ತಿರಗೇಟು ನೀಡಿದರು.

ಸಿದ್ದರಾಮಯ್ಯ ಹಾಗೂ ಸತೀಶ್ ಜಾರಕಿಹೊಳಿ ಇತ್ತೀಚೆಗೆ ಅಂತರ ಕಾಯ್ದುಕೊಳ್ಳುತ್ತಿದ್ದಾರಾ ಅನ್ನುವ ವಿಚಾರಕ್ಕೆ ನನಗೆ ಗೊತ್ತಿರುವಂತೆ ಅಂತಹದ್ದೇನು ಇಲ್ಲ ಎಂದು ಹೇಳಿದರು.

### ಕೂತು ಸೋಮಾರಿಗಳು!



ಬಿಜೆಪಿ ಬಳ್ಳಾರಿ ಚಲೋ ಪಾದಯಾತ್ರೆ ವಿಚಾರವಾಗಿ ಮಾತನಾಡಿ, ಬಿಜೆಪಿಯವರು ಕೂತು ಕೂತು ಸೋಮಾರಿಗಳಾಗಿದ್ದರು. ಸ್ವತಃ ಕ್ರಿಯಾಶೀಲರಾಗಬೇಕು ಅಂತ ಪಾದಯಾತ್ರೆ ಮಾಡುತ್ತಿದ್ದಾರೆ. ಯಾವ ಉದ್ದೇಶದಿಂದ ಪಾದಯಾತ್ರೆ

ಪುಟ 2ಕ್ಕೆ

### ಅಹಿಂದ ಯಾರದೇ ಆಸ್ತಿ ಅಲ್ಲ

ಅಹಿಂದ ಎನ್ನುವುದು ಯಾರದೇ ಒಬ್ಬರ ಆಸ್ತಿ ಅಲ್ಲ. ಯಾರು ಬೇಕಾದರೂ ಕ್ಲೈಮ್ ಮಾಡಬಹುದು. ಹಿಂದುಳಿದ ಜಾತಿಗಳ ಒಕ್ಕೂಟದ ರಜತ ಮಹೋತ್ಸವ ಕಾರ್ಯಕ್ರಮಕ್ಕೆ ನನ್ನನ್ನು ಕರೆದಿಲ್ಲ. ಹೀಗಾಗಿ ಹೋಗಿಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಪುಟ 2ಕ್ಕೆ

## ಮತ್ತೆ ಇಡಿಯಿಂದ ನಾಗೇಂದ್ರ ವಿಚಾರಣೆ

**ಬೆಂಗಳೂರು:** ವಾಲ್ಮೀಕಿ ಅಭಿವೃದ್ಧಿ ನಿಗಮದ ಬಹುಕೋಟಿ ಹಗರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಬಿ.ನಾಗೇಂದ್ರ ಅವರಿಗೆ ಜಾರಿ ನಿರ್ದೇಶನಾಲಯ ಮತ್ತೆ ಶಾಕ್ ನೀಡಿದೆ.



ನಾಗೇಂದ್ರ ಅವರನ್ನು ಸೋಮವಾರ ಇಡಿ ಮತ್ತೊಮ್ಮೆ ವಿಚಾರಣೆ ನಡೆಸಿದೆ.

ವಿಚಾರಣೆಗೆ ಹಾಜರಾಗುವಂತೆ ನಾಗೇಂದ್ರ ಅವರಿಗೆ ಇಡಿ ಸಮನ್ಸ್ ನೀಡಿತ್ತು. ಈ ಹಿನ್ನೆಲೆಯಲ್ಲಿ ನಾಗೇಂದ್ರ ಅವರು ಬೆಂಗಳೂರಿನ ಜಾಲಹಳ್ಳಿಯ ಇಡಿ ಕಚೇರಿಗೆ ವಿಚಾರಣೆಗಾಗಿ ಹಾಜರಾಗಿದ್ದರು.

ಪುಟ 2ಕ್ಕೆ

## ಭೀಕರ ಅಪಘಾತ: ಮೂವರು ಮಹಿಳೆಯರು ಸಾವು

**ಚಿಕ್ಕಬಳ್ಳಾಪುರ:** ಓಮ್ನಿ ಕಾರು ಹಾಗೂ ಮಿನಿ ಗೂಡ್ಸ್ ವಾಹನದ ನಡುವೆ ಭೀಕರ ಅಪಘಾತ ಸಂಭವಿಸಿದ ಪರಿಣಾಮ ಮೂವರು ಮಹಿಳೆಯರು ದಾರುಣವಾಗಿ ಮೃತಪಟ್ಟಿರುವ ಘಟನೆ ಶಿಡ್ಲಘಟ್ಟ ತಾಲೂಕಿನ ಕೊತ್ತನೂರು ಗೇಟ್ ಬಳಿ ನಡೆದಿದೆ.

ಶಿಡ್ಲಘಟ್ಟ– ಚಿಂತಾಮಣಿ ಮಾರ್ಗದ ಕೊತ್ತನೂರು ಗೇಟ್ ಸಮೀಪ ಈ ದುರ್ಘಟನೆ ನಡೆದಿದೆ. ಚಿಂತಾಮಣಿ ತಾಲೂಕಿನ ಮಲ್ಲಿಕಾರ್ಜುನಪುರ ಗ್ರಾಮದ ರೂಪಾ (30), ರತ್ನಮ್ಮ (45) ಹಾಗೂ ಮುನಿಚೆನ್ನಮ್ಮ (40) ಮೃತಪಟ್ಟಿರುವ ದುರ್ದೈವಿಗಳು. ಮಲ್ಲಿಕಾರ್ಜುನಪುರ ಗ್ರಾಮದಿಂದ ಹುಜುಗೂರು ಗ್ರಾಮಕ್ಕೆ ಹೂ ಕಟಾವು ಕೆಲಸಕ್ಕೆ ತೆರಳುತ್ತಿದ್ದ ವೇಳೆ ಅಪಘಾತ ಸಂಭವಿಸಿದೆ. ಓಮ್ನಿ ಕಾರಿನಲ್ಲಿ ಸುಮಾರು 10 ಮಂದಿ ಕೂಲಿ ಕಾರ್ಮಿಕರು ಇದ್ದರು. ಓಮ್ನಿ ಕಾರಿನ ಚಾಲಕ ಮನೋಜ್ ಸೇರಿದಂತೆ ಹಲವರಿಗೆ ಗಾಯಗಳಾಗಿವೆ. ಶಿಡ್ಲಘಟ್ಟ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಡಿವೈಡರ್‌ಗೆ ಕಾರು ಡಿಕ್ಕಿ: ನಾಲ್ವರು ಸಾವು

**ಕೋಲಾರ:** ಟೊಯೋಟಾ ರಿಯಾನ್ ಕಾರು ಡಿವೈಡರ್‌ಗೆ ಡಿಕ್ಕಿಯಾದ ಪರಿಣಾಮ ನಾಲ್ವರು ಸಾವನ್ನಪ್ಪಿದ ಘಟನೆ ಕೋಲಾರದ ಕೆಜಿಎಫ್ ತಾಲ್ಲೂಕಿನ ದೊಡ್ಡಕಾರಿ ಬಳಿ ನಡೆದಿದೆ.

ಬೆಂಗಳೂರಿನ ವಿದ್ಯಾರಣ್ಯಪುರ ಮೂಲದ ಶಾರದಮ್ಮ (70), ದೀಕ್ಷಿತ (25), ದೇವೆಂದ್ರ ಕುಮಾರ್, (41) ಜಿಷ್ಣು (13) ಮೃತರು. ಕುಟುಂಬಸ್ಥರು ತಿರುಪತಿಗೆ ತೆರಳಿದ್ದರು. ತಿಮ್ಮಪ್ಪನ ದರ್ಶನ ಪಡೆದು ಬೆಂಗಳೂರಿಗೆ

ಪುಟ 2ಕ್ಕೆ



## ಜಿಪಂ ಸಿಇಒಗಳಿಗೆ ಗ್ರಾಮ ಭೇಟಿ ಕಡ್ಡಾಯ

### ವಾರಕ್ಕೆ 2 ದಿನ ಹಳ್ಳಿಗೆ ಹೋಗಿ: ಸಚಿವ ಖಂಡ್ರೆ ಸೂಚನೆ



**ಬೆಂಗಳೂರು:** ರಾಜ್ಯದ ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (ಸಿಇಒ) ವಾರದಲ್ಲಿ 2 ದಿನ ಕನಿಷ್ಠ 4–5 ಗ್ರಾಮಗಳಿಗಾದರೂ ದಿಢೀರ್ ಭೇಟಿ ನೀಡಿ ಪರಿಶೀಲಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಖಂಡ್ರೆ ಸೂಚನೆ ನೀಡಿದ್ದಾರೆ.

ಗ್ರಾಮೀಣಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಅವರಿಗೆ ಲಿಖಿತ ಸೂಚನೆ ನೀಡಿರುವ ಸಚಿವರು, ಸಿಇಓಗಳು ಗ್ರಾಮ ಪಂಚಾಯತಿಗಳಿಗೆ ಪೂರ್ವ ಸೂಚನೆ ನೀಡಿದೆ ಭೇಟಿ ನೀಡಬೇಕು. ಹಾಜರಾತಿ, ಪಿಡಿಓ ಮತ್ತು ತಾಲೂಕು ಕಾರ್ಯನಿರ್ವಹಣಾಧಿಕಾರಿಗಳ ಕಾರ್ಯವೈಖರಿ ಪರಶೀಲಿಸುವ ಜೊತೆಗೆ, ಜನರ ಆಹವಾಲು ಆಲಿಸಿ ಸ್ಥಳದಲ್ಲೇ ಕೆಲವು ಸಮಸ್ಯೆಗಳನ್ನಾದರೂ ಪರಿಹರಿಸಬೇಕು ಎಂದು ತಿಳಿಸಿದ್ದಾರೆ.

### ಗ್ರಾಮೀಣರ ವಲಸೆ ತಪ್ಪಿಸಿ

ರಾಜ್ಯದಲ್ಲಿ 5900ಕ್ಕೂ ಅಧಿಕ ಗ್ರಾಮ ಪಂಚಾಯತಿಗಳಿವೆ. 26,589 ಹಳ್ಳಿಗಳಲ್ಲಿ 4.45 ಕೋಟಿ ಜನರು ವಾಸುತ್ತಿದ್ದಾರೆ. ಅಂದರೆ ರಾಜ್ಯದ ಮುಕ್ಕಾಲು ಭಾಗ ಜನಸಂಖ್ಯೆ ಇರುವುದೇ ಗ್ರಾಮೀಣ ಪ್ರದೇಶಗಳಲ್ಲಿ ಹೀಗಾಗಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಗ್ರಾಮಾಭಿವೃದ್ಧಿಗೆ ಗಮನ ಹರಿಸಬೇಕು ಎಂದು ಸಚಿವ ಈಶ್ವರ್ ಖಂಡ್ರೆ ಸೂಚಿಸಿದ್ದಾರೆ.

ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರು, ಉತ್ತಮ ರಸ್ತೆ, ನೈರ್ಮಲ್ಯ, ವಿಬಿಜಿ ರಾಮ್ ಜಿ ಅಡಿ ಸ್ಥಳದಲ್ಲೇ ಉದ್ಯೋಗ ನೀಡುವ ಬಗ್ಗೆ ಹೆಚ್ಚಿನ ಗಮನ ಹರಿಸಿದರೆ ಗ್ರಾಮಗಳಿಂದ ಜನರು ನಗರಕ್ಕೆ ವಲಸೆ ಹೋಗುವುದು ತಪ್ಪಲಿದೆ. ನಗರಗಳ ಮೇಲಿನ ಒತ್ತಡವನ್ನೂ ತಗ್ಗಿಸುತ್ತದೆ. ಜೊತೆಗೆ ಗ್ರಾಮಗಳ ಅಭಿವೃದ್ಧಿಯೂ ಆಗುತ್ತದೆ ಎಂದು ಸಚಿವರು ಸೂಚಿಸಿದ್ದಾರೆ.

# ಅಹಿಂದಕ್ಕೆ ಸಿದ್ದು ಕೊಡುಗೆ ಏನು?

## ಸಿದ್ದರಾಮಯ್ಯಗೆ ಎಚ್.ಡಿ.ದೇವೇಗೌಡರ ತಿರುಗೇಟು



**ಬೆಂಗಳೂರು:** ಸಿದ್ದರಾಮಯ್ಯ 16 ವರ್ಷ ಬಜೆಟ್ ಮಂಡನೆ ಮಾಡಿದ್ದಾರೆ. ಅದರಿಂದ ಅಹಿಂದ ವರ್ಗಕ್ಕೆ ಎಷ್ಟು ಪ್ರಯೋಜನ ಆಗಿದೆ ಎಂದು ಸಿದ್ದರಾಮಯ್ಯ ಅವರೇ ಹೇಳಲಿ. ಇವರು ಸಿಎಂ ಆಗಿ ಯಾವ ಯಾವ ಜಾತಿಗೆ ಅನುಕೂಲ ಆಗಿದೆ ಹೇಳಲಿ ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ತಿರುಗೇಟು ನೀಡಿದರು.

ಅಹಿಂದ ಸಮುದಾಯಕ್ಕೆ ಮೀಸಲಾತಿ ಪ್ರಮಾಣವನ್ನು ಶೇ. 75 ಹೆಚ್ಚಳ ಮಾಡಬೇಕು ಎಂಬ ಮಾಜಿ ಸಿಎಂ ಸಿದ್ದರಾಮಯ್ಯ ಹೇಳಿಕೆ ಹಿನ್ನೆಲೆಯಲ್ಲಿ ಜೆಡಿಎಸ್ ಕಚೇರಿಯಲ್ಲಿ ಸೋಮವಾರ ಅವರು ಮಾತನಾಡಿದರು.

ಅಹಿಂದ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ನಾನು ರಾಜಕೀಯದಿಂದ ನಿವೃತ್ತಿ ಆಗಲ್ಲ. ಚುನಾವಣೆಗೆ ನಿಲ್ಲಲ್ಲ ಅಂದರು. ಅಹಿಂದಕ್ಕೆ 75% ಮೀಸಲಾತಿ ಕೊಡಬೇಕು ಅಂದರು. ಸಿದ್ದರಾಮಯ್ಯ ಹೇಳಲಿ ಯಾರು ಯಾರಿಗೆ ಅನುಕೂಲ ಮಾಡಿದರು. ಜಮೀರ್‌ನ ಶಾಸಕ ಮಾಡಿದ್ದು ಯಾರು? ರೋಷನ್ ಬೇಗ್ ಮಂತ್ರಿ ಮಾಡಿದ್ದು ಯಾರು? ಸಿಎಂ ಇಬ್ರಾಹಿಂನನ್ನು ಕೇಂದ್ರ ಮಂತ್ರಿ ಮಾಡಿದ್ದು ಯಾರು? 7–8 ಮುಸ್ಲಿಂಮರನ್ನು ಎಂಎಲ್‌ಸಿ ಮಾಡಿದ್ದೇ ನಾನು. ಸಿದ್ದರಾಮಯ್ಯ ಏನು ಮಾಡಿದ್ದಾರೆಂದು ವಾಗ್ದಾಳಿ ನಡೆಸಿದರು.

# ಹೊತ್ತಿ ಉರಿಯುತ್ತಿದೆ ಕರುನಾಡು

## ಹಳೇ ಮೈಸೂರು ಪ್ರದೇಶದಲ್ಲಿ ಬಿರುಬಿಸಿಲಿನ ವಾತಾವರಣ




**ಬೆಂಗಳೂರು:** ಕಳೆದ ಮೂರು ದಿನದಿಂದ ರಾಜ್ಯದ ಹಲವು ಜಿಲ್ಲೆಗಳಲ್ಲಿ ಉಷ್ಣಾಂಶದ ಪ್ರಮಾಣದಲ್ಲಿ ಗಣನೀಯ ಏರಿಕೆಯಾಗಿದೆ. ಸೋಮವಾರವೂ ಬಿರುಬಿಸಿಲಿನ ವಾತಾವರಣ ಮುಂದುವರಿದಿದೆ.

ಬೆಂಗಳೂರು, ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ ಉಷ್ಣಾಂಶದ ಪ್ರಮಾಣ ಸಾಮಾನ್ಯಕ್ಕಿಂತ ಸುಮಾರು 4 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಳವಾಗಿದೆ.

ಕರ್ನಾಟಕದಲ್ಲಿ ಅತಿ ಹೆಚ್ಚು ಉಷ್ಣಾಂಶ ಹಾಗೂ ಸಾಮಾನ್ಯಕ್ಕಿಂತ ಅಧಿಕ ಬಿಸಿಲು ಇರುವುದು ಮೈಸೂರಿನಲ್ಲಿಯೇ. ಸದ್ಯ 34 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದ್ದು, ಸುಮಾರು 5 ಡಿಗ್ರಿ ಸೆಲ್ಸಿಯಸ್ ಹೆಚ್ಚಿದೆ.

ಮಂಡ್ಯದಲ್ಲೂ 34 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಇಲ್ಲಿಯೂ 4.2 ಡಿಗ್ರಿ ಸೆಲ್ಸಿಯಸ್ ಸಾಮಾನ್ಯಕ್ಕಿಂತ ಹೆಚ್ಚಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಕಲ್ಯಾಣ ಕರ್ನಾಟಕದ ಕಲಬುರಗಿ, ರಾಯಚೂರು ಜಿಲ್ಲೆಗಳಲ್ಲೂ ಬಿಸಿಲಿನ ಝಳ ಎರಡು ದಿನದಿಂದ ಹೆಚ್ಚಾಗಿದೆ. ರಾಜ್ಯದಾದ್ಯಂತ ಮುಂದಿನ 7 ದಿನಗಳ ಕಾಲ ಒಣಹವೆ ಇರಲಿದೆ. ಒಳನಾಡು ಜಿಲ್ಲೆಗಳ ಕೆಲವು ಭಾಗಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ತಾಪಮಾನ ಮುಂದುವರಿಯುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮಧ್ಯ ಕರ್ನಾಟಕದ ದಾವಣಗೆರೆಯಲ್ಲಿ 32 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಕಂಡು ಬಂದಿದೆ. ಇದು

ಪುಟ 2ಕ್ಕೆ



# ಒಬಿಸಿಗೆ ರಾಜಕೀಯ ಮೀಸಲಾತಿ ನೀಡಿ: ಲಾಡ್

**ಬೆಂಗಳೂರು:** ದೇಶದ ಎಲ್ಲಾ ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ನೀಡಬೇಕು ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಆಗ್ರಹಿಸಿದ್ದಾರೆ.

ದೇಶಾದ್ಯಂತ ಹಿಂದುಳಿದ ವರ್ಗಗಳ ಜನಸಂಖ್ಯೆ ಸುಮಾರು 65 ಕೋಟಿಗೂ ಹೆಚ್ಚಾಗಿದೆ. ಇದು ದೇಶದ ಒಟ್ಟು ಜನಸಂಖ್ಯೆಯ ಶೇಕಡಾ 50ರಷ್ಟಾಗಿದೆ. ಜನಸಂಖ್ಯಾ ಪ್ರಮಾಣವನ್ನು ಆಧರಿಸಿ ಸ್ಥಳೀಯ ಸಂಸ್ಥೆಗಳಲ್ಲಿ ನೀಡಲಾಗಿರುವ ರಾಜಕೀಯ ಪ್ರಾತಿನಿಧ್ಯವನ್ನು ವಿಧಾನ

# ದಸರಾ: ಜನಜಾತ್ರೆ ನಡುವೆ ತಾಲೀಮಿನ ಹೆಜ್ಜೆ ಹಾಕಿದ ಮಹೇಂದ್ರ

ಮೈಸೂರು: ನಾಡಹಬ್ಬ ದಸರಾದ ಜಂಬೂಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿ ಹೊರುವ ಆನೆಯ ಆಯ್ಕೆಯ ಪ್ರಕ್ರಿಯೆ ಆರಂಭವಾಗಿದ್ದು, ಜನಜಾತ್ರೆಯ ನಡುವೆ ಹೆಜ್ಜೆ ಹಾಕಿದ ಮಹೇಂದ್ರ ಆನೆಗೆ ಮರಳು ಮೂಟೆ ಹೊರಿಸಿ ಭಾರದ ತಾಲೀಮನ್ನು ನಡೆಸಲಾಯಿತು.

ಅ.11 ರಿಂದ ಅ.21ರವರೆಗೆ ನವರಾತ್ರಿಯ ಕಾರ್ಯಕ್ರಮಗಳು ನಡೆಯಲಿದ್ದು, ಅ.21 ರಂದು ವಿಶ್ವವಿಖ್ಯಾತ ಜಂಬೂಸವಾರಿ ಮೆರವಣಿಗೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಭಾನುವಾರ ಸಂಜೆ ದಸರಾ ಆನೆ ಮಹೇಂದ್ರಗೆ ಮರಳು ಮೂಟೆ ಹೊರಿಸಿ ಭಾರ ಹೊರುವ ತಾಲೀಮು ಮಾಡಿಸಲಾಯಿತು. ಮಹೇಂದ್ರ ಆನೆಗೆ ಹೆಣ್ಣಾನೆಗಳಾದ ಲಕ್ಷ್ಮೀ ಹಾಗೂ ಕಾವೇರಿ ಸಾಥ್ ನೀಡಿದವು. ಬನ್ನಿಮಂಟಪದವರೆಗಿನ ಸುಮಾರು 5 ಕಿಲೋಮೀಟರ್ ದೂರವನ್ನು 2 ಗಂಟೆಯಲ್ಲಿ ಕ್ರಮಿಸಿದ ಮಹೇಂದ್ರ ತಾನು ಚಿನ್ನದ ಅಂಬಾರಿ ಹೊರಲು ಸಿದ್ಧ ಎಂಬುದನ್ನು ನಿರೂಪಿಸಿದ.

**ಸಾಂಪ್ರದಾಯಿಕ ಪೂಜೆ**

ಭಾರ ಹೊರುವ ತಾಲೀಮನ್ನು ನಡೆಸುವ ಮುನ್ನ ಗಜಪಡೆಯ ಶೆಡ್ನ ಆವರಣದಲ್ಲಿರುವ ಕೋಡಿ ಸೋಮೇಶ್ವರ ದೇವಾಲಯದ ಮುಂಭಾಗದಲ್ಲಿ ಪೂಜೆ ಸಲ್ಲಿಸಿದ


ಚಿತ್ರ: ಎ.ಕೃಷ್ಣೋಜಿರಾವ್

ಬಳಿಕ ಮಹೇಂದ್ರ ಆನೆಯ ಬೆನ್ನಿನ ಮೇಲೆ ಗಾದಿ, ನಮ್ದಾ ಕಟ್ಟಿ ಸೇರಿ ಒಟ್ಟು 600 ಕೆ.ಜಿ ತೂಕದ 6 ಮರಳು ಮೂಟೆಗಳನ್ನು ಕಟ್ಟಲಾಯಿತು. ಎಡ ಭಾಗಕ್ಕೆ ಲಕ್ಷ್ಮೀ, ಬಲ ಭಾಗಕ್ಕೆ ಕಾವೇರಿ ಆನೆಯನ್ನು ಕುಮ್ಕಿ ಆನೆಗಳಾಗಿ ನಿಲ್ಲಿಸಿ ಚಿನ್ನದ ಅಂಬಾರಿ ಕಟ್ಟುವ ಸ್ಥಳವನ್ನು ಪರಿಚಯಿಸಿದ ನಂತರ ಅರಮನೆಯ ಬಲರಾಮ ದ್ವಾರದಿಂದ ಕೆ.ಆರ್.ವೃತ್ತ ಸಯ್ಯಾಜಿರಾವ್ ರಸ್ತೆ, ಆಯುರ್ವೇದಿಕ್ ವೃತ್ತದ ಮೂಲಕ ಬನ್ನಿಮಂಟಪದ ವರೆಗೆ ತಾಮೀಮು ನಡೆಯಿತು. ಗಜಪಡೆ ಸಾಗುವ ಮಾರ್ಗದ ಎರಡೂ ಬದಿಯಲ್ಲೂ ಜನಸಾಗರವೇ ಸೇರಿದ್ದು, ಗಜಪಡೆಗಳಿಗೆ ಹೂವನ್ನು ಎಸೆದು ಭಕ್ತಿಯನ್ನು ತೋರುತ್ತಿರುವುದು ಕಂಡುಬಂತು.




ಡಿಸಿಎಫ್ ಪ್ರಭುಗೌಡ ಮಾತನಾಡಿ, ಕಳೆದ ಬಾರಿ ಚಿನ್ನದ ಅಂಬಾರಿಯನ್ನು ಹೊತ್ತಿದ್ದ ಅಭಿಮನ್ಯು ಆನೆ ನಿವೃತ್ತಿಯಾದ ನಂತರ ಈ ಬಾರಿ ಅಂಬಾರಿ ಹೊರುವ ಆನೆಯನ್ನು ಆಯ್ಕೆ ಮಾಡಿಲ್ಲ. ಇದರಿಂದ ಈ ಬಾರಿ ಯಾವ ಆನೆ ಜಂಬೂಸವಾರಿ ಕ್ಯಾಪ್ಟನ್ ಆಗಿ ಆಯ್ಕೆ ಮಾಡಬೇಕು ಎಂಬ ಪ್ರಕ್ರಿಯೆಯ ಮೊದಲ ಹಂತವಾಗಿ ಗಜಪಡೆಗಳಿಗೆ ಭಾರ ಹೊರುವ ತಾಲೀಮನ್ನು ನಡೆಸಲಾಗುತ್ತಿದ್ದು, ಇದರ ಅಂಗವಾಗಿ ಮಹೇಂದ್ರ ಆನೆಗೆ ಭಾರ ಹೊರುವ ತಾಲೀಮನ್ನು ನಡೆಸಲಾಗಿದೆ. ಮುಂದಿನ ದಿನಗಳಲ್ಲಿ ಪ್ರಶಾಂತ ಹಾಗೂ ಧನಂಜಯ ಆನೆಗಳಿಗೂ ಭಾರ ಹೊರುವ ತಾಲೀಮನ್ನು ನಡೆಸಲಾಗುತ್ತದೆ. ಆ ಮೂಲಕ ಅಂಬಾರಿ ಹೊರುವ ಆನೆಯನ್ನು ಆಯ್ಕೆ ಮಾಡಲಾಗುವುದು ಎಂದು ತಿಳಿಸಿದರು. ದಸರಾ ಜಂಬೂಸವಾರಿ ಮೆರವಣಿಗೆಯನ್ನು ನೋಡಲು ಪಾಸು ಇಲ್ಲದೆ ಜನರು ನಿರಾಸೆ ವ್ಯಕ್ತಪಡಿಸುತ್ತಿದ್ದು, ಆದರೆ, ಮೈಸೂರಿಗೆ ಬರುವ ಪ್ರವಾಸಿಗರು ಹಾಗೂ ಸ್ಥಳೀಯರು ಪ್ರತಿದಿನ ಅರಮನೆಯಿಂದ ಬನ್ನಿಮಂಟಪದವರೆಗೆ ಸಾಗುವ ಗಜಪಡೆಗಳನ್ನು ನೋಡಲು ಜನಸಾಗರವೇ ಹರಿದು ಬರುತ್ತಿರುವುದು ಮಿನಿ ದಸರಾದಂತೆ ಭಾಸವಾಗುತ್ತಿರುವುದು ವಿಶೇಷ.

# ಶಿಲ್ಪ ದಸರಾ ಕ್ರೀಡಾಕೂಟ ಉದ್ಘಾಟಿಸಲಿ

## ನಾಮಧಾರಿಗೌಡ ಸಮಾಜದ ಸನ್ಮಾನ ಕಾರ್ಯಕ್ರಮದಲ್ಲಿ ಒಕ್ಕೊರಲ ಒತ್ತಾಯ

ಮೈಸೂರು: ಕಾಮನ್ ವೆಲ್ತ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ಪಡೆದು ದೇಶಕ್ಕೆ ಹೆಮ್ಮೆ ತಂದಿರುವ ಸಾಧಕಿ ಕುಮಾರಿ ಕೆ.ಎಸ್. ಶಿಲ್ಪ ಅವರಿಗೆ ಮುಂಬರುವ ದಸರಾ ಕ್ರೀಡಾಕೂಟದ ಉದ್ಘಾಟನೆಯ ಅವಕಾಶ ಮಾಡಿಕೊಡಲು ಜಿಲ್ಲಾಡಳಿತ ಮುಂದಾಗ ಬೇಕೆಂದು ಅಖಿಲ ನಾಮಧಾರಿ ಗೌಡ ಸಮಾಜದ ವತಿಯಿಂದ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಒಕ್ಕೊರಲ ಒತ್ತಾಯ ಕೇಳಿಬಂದಿತು.

ಅಖಿಲ ನಾಮಧಾರಿಗೌಡ ಸಂಘ ಹಾಗೂ ಸಮಾಜದ ವಿವಿಧ ವಲಯಗಳ ಆಶ್ರಯದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಕ್ರೀಡಾ ಸಾಧಕಿ ಶಿಲ್ಪಾ ಅವರನ್ನು ಅಭಿನಂದಿಸಿ ಮಾತನಾಡಿದ ಗಣ್ಯರು ಮೇಲ್ಕಂಡ ಒತ್ತಾಯ ಮಾಡಿದರು

ಸಂಘದ ಮಾಜಿ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣ ಸಂಸ್ಥೆಯ ಮಾಜಿ ಅಧ್ಯಕ್ಷರಾದ ಡಿ. ಸುಂದರದಾಸ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಶಿಲ್ಪ ತಮ್ಮ ಅದ್ವಿತೀಯ ಸಾಧನೆ ಮೂಲಕ ಎಲ್ಲರೂ ನಮ್ಮ ಸಮಾಜವನ್ನು ಗುರ್ತಿಸುವ ಹಾಗೆ ಮಾಡಿದ್ದಾರೆ. ಗುರಿ ಇಟ್ಟು ಕೊಂಡು ಮುಂದೆ ಸಾಗಿದರೆ ಸಾಧಿಸಬಹುದು ಎಂಬುದನ್ನು ಈಕೆ ತೋರಿಸಿದ್ದಾರೆ. ಈಕೆಯ ಸಾಧನೆಯನ್ನು ಪರಿಗಣಿಸಿ ರಾಜ್ಯ ಸರ್ಕಾರ ದಸರಾ ಕ್ರೀಡಾಕೂಟದ ಉದ್ಘಾಟನೆಯ ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.

ಮುಖ್ಯ ಅತಿಥಿಯಾಗಿದ್ದ ಕರಾಮುವಿ ನಿಲಯದ ಅಕಾಡೆಮಿಕ್ ಡೀನ್ ಪ್ರೊ.ಎನ್.ರಾಮನಾಥಂನಾಯ್ಡು ಮಾತನಾಡಿ ಶಿಲ್ಪ ಅವರ ಮುಂದಿನ ಕ್ರೀಡಾ ಸಾಧನೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಮುಕ್ತ ವಿವಿಯಿಂದ 10 ಲಕ್ಷ ರೂ ನೆರವು ನೀಡುವಂತೆ ನಾಮಧಾರಿಗೌಡ ಸಮಾಜದ ಮುಖಂಡರು ಮಾಡಿಕೊಂಡ ಮನವಿಗೆ ಪ್ರತಿಕ್ರಿಯಿಸಿದ ಪ್ರೊ.ಎನ್.ರಾಮನಾಥಂ ಅವರು, ಕುಲಪತಿ ಅವರ ಜೊತೆ ಮಾತನಾಡಿ ಸೂಕ್ತ ಕ್ರಮ



ಕೈಗೊಳ್ಳುವುದಾಗಿ ಭರವಸೆ ನೀಡಿದರು. ಸನ್ಮಾನ ಸ್ವೀಕರಿಸಿದ ಕೆ.ಎಸ್.ಶಿಲ್ಪಾ ಅವರು ಮಾತನಾಡಿ, ಅಂತಾರಾಷ್ಟ್ರೀಯ ಕ್ರೀಡಾಕೂಟದಲ್ಲಿ ಗೆದ್ದಾಗ ಆಗಿದ್ದ ಸಂತಸಕ್ಕಿಂತ ಜನ ನನ್ನನ್ನ ಗುರುತಿಸಿ ಸನ್ಮಾನಿಸುವಾಗ ಇನ್ನೂ ಹೆಚ್ಚಿನ ಸಂತಸ ಆಗುತ್ತಿದೆ. ಎಂದರು. ವೇದಿಕೆ ಯಲ್ಲಿ ಶಿಲ್ಪಾ ಅವರ ತಂದೆ– ತಾಯಿಗಳಾದ ಶೈಲ–ಶಾಂತಾ ಹಾಗೂ ತರಬೇತುದಾರರಾದ ರಾಘವೇಂದ್ರ ಅವರನ್ನ ಸನ್ಮಾನಿಸಲಾಯಿತು ಮೈಸೂರು ನಗರ ವಲಯದ ಅಧ್ಯಕ್ಷ ಎಂ.ಎನ್. ಸೋಮಶೇಖರ್ ಪ್ರಾಸ್ತಾವಿಕ ಭಾಷಣ ಮಾಡಿ, ಶಿಲ್ಪ ಅವರಿಗೆ ಈ ಬಾರಿಯ ದಸರಾ ಕ್ರೀಡಾಕೂಟ ಉದ್ಘಾಟನೆಗೆ ಅವಕಾಶ ನೀಡಬೇಕು ಎಂದು ಮನವಿ ಮಾಡಿದರು. ಕೇಂದ್ರ ವಲಯದ ಉಪಾಧ್ಯಕ್ಷರಾದ ನಿವೃತ್ತ ಉಪನ್ಯಾಸಕ ಎಚ್.ಎಚ್.ಸುಂದರ್ ಅವರು ಶಿಲ್ಪ ಕುರಿತು ಕವನ ವಾಚನ ಮಾಡಿದರು. ಕೇಂದ್ರ ವಲಯದ ಅಧ್ಯಕ್ಷರಾದ ಕೆ.ಟಿ.ಗೋವಿಂದರಾಜು ಅಧ್ಯಕ್ಷತೆ ವಹಿಸಿದ್ದರು. ಸಮಾಜದ ಓಬಿಸಿ ವಿಭಾಗದ ಅಧ್ಯಕ್ಷ ಎಂ.ಎನ್.ನಟರಾಜ್, ಸಿ.ಜಿ.ನಾಗರಾಜ್, ಮೈಸೂರು ಜಿಪಂ ಮಾಜಿ ಅಧ್ಯಕ್ಷೆ ಪರಿಮಳಾ ಶ್ಯಾಮ್ ಸುಂದರ್, ಕೊಡಗು ಜಿಪಂ ಮಾಜಿ ಅಧ್ಯಕ್ಷ ಅಶೋಕ್, ಮಲ್ಲಿಕಾರ್ಜುನ್, ಗಿರೀಶ್, ರಾಧಾಕೃಷ್ಣ, ಸಣ್ಣಸ್ವಾಮಿಗೌಡ ಮತ್ತಿತರರು ಹಾಜರಿದ್ದರು.

### ಸಾರೋಟಿನ ಮೆರವಣಿಗೆ

**ಕುಮಾರಿ ಕೆ ಎಸ್ ಶಿಲ್ಪಾ ಅವರನ್ನು ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಹುಣಸೂರು ರಸ್ತೆಯ ಕೆವಿಸ್‌ಓಯು ಮುಖ್ಯದ್ವಾರದಲ್ಲಿ ತೆರೆದ ಸಾರೋಟಿನ ಮೇಲೆ ಕೂರಿಸಲಾಯಿತು. ಇವರ ಜೊತೆ ತಂದೆ ತಾಯಿಯಾದ ಶೈಲಾ ಮತ್ತು ಶಾಂತ ಅವರನ್ನು ಸಾರೋಟಿನಲ್ಲಿ ಕೂರಿಸಿ, ಪುಷ್ಪವೃಷ್ಟಿ ಮಾಡಿ ಜಯ ಘೋಷ ಕೂಗಲಾಯಿತು. ಚಂಡೆ ವಾದ್ಯದೊಂದಿಗೆ ಮೆರವಣಿಗೆಯಲ್ಲಿ ವೇದಿಕೆ ಕಾರ್ಯಕ್ರಮ ನಡೆಯುವ ಕಾವೇರಿ ಸಭಾಂಗಣದವರಿಗೆ ಕರೆತರಲಾಯಿತು. ನೂರಾರು ಜನ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.**

### ಶಿಲ್ಪರಿಗೆ ಆರ್ಥಿಕ ನೆರವು, ಅಭಿನಂದನೆ

**ಕಾರ್ಯಕ್ರಮದಲ್ಲಿ ಸಮಾಜದ ಕೇಂದ್ರ ಸಮಿತಿ ವತಿಯಿಂದ ಶಿಲ್ಪ ಅವರ ಭವಿಷ್ಯದ ಕ್ರೀಡಾ ಸಾಧನೆಗೆ ನೆರವಾಗುವ ನಿಟ್ಟಿನಲ್ಲಿ 1.5 ಲಕ್ಷ ರೂ ಚೆಕ್ ಅನ್ನು ಅಧ್ಯಕ್ಷ ಕೆ.ಟಿ.ಗೋವಿಂದ ರಾಜು ನೀಡಿದರು. ಮೈಸೂರು ನಗರ ವಲಯದಿಂದ ರೂ.1 ಲಕ್ಷ, ಎಚ್.ಡಿ. ಕೋಟೆ ಹಾಗೂ ಸರಗೂರು ವಲಯದಿಂದ 1 ಲಕ್ಷ. ರೂ ಘೋಷಿಸಲಾಯಿತು. ಹೆಬ್ಬಾಲೆ, ಶಿರಂಗಾಲ, ಕುಶಾಲನಗರ, ಪಿರಿಯಾಪಟ್ಟಣ, ರಾಮನಾಥಪುರ, ಹಾಸನ, ಹೊಳೆನರಸೀಪುರ, ಕೇರಳದ ವಯನಾಡು ವಲಯಗಳ ವತಿಯಿಂದ ಶಿಲ್ಪ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.**

# ಪ್ರಜಾಸೇವೆಯಡಿ ಅವಳಿ ತಾಲೂಕಿನಲ್ಲಿ 79 ಅರ್ಜಿಗಳು

## ಕಂದಾಯ ಇಲಾಖೆಗೆ ಹೆಚ್ಚಿನ ಅರ್ಜಿ

ಸರಗೂರು/ಎಚ್.ಡಿ.ಕೋಟೆ: ಸಾಮಾನ್ಯ ನಾಗರಿಕರು, ಬಡವರು, ರೈತರು ಸರ್ಕಾರದ ವಿವಿಧ ಸೇವೆಗಳಿಗಾಗಿ ದಿನನಿತ್ಯ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸುವ ಉದ್ದೇಶದಿಂದ, ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ ಎಂಬ ಧ್ಯೇಯ ವಾಕ್ಯದೊಂದಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜಾರಿಗೆ ತಂದಿರುವ ಪ್ರಜಾ ಸೇವೆಯಡಿ ಸರಗೂರು ತಾಲೂಕಿನಲ್ಲಿ 56 ಅರ್ಜಿಗಳು ಸಲ್ಲಿಕೆಯಾಗಿ, ಜಿಲ್ಲೆಗೆ ಎರಡನೆ ಸ್ಥಾನದಲ್ಲಿದ್ದರೆ, ಹೆಚ್.ಡಿ. ಕೋಟೆ ತಾಲೂಕಿನಲ್ಲಿ 23 ಅರ್ಜಿಗಳೊಂದಿಗೆ ಒಟ್ಟು 79 ಅರ್ಜಿಗಳು ಸಲ್ಲಿಕೆಯಾಗಿವೆ.




ನೂತನವಾಗಿ ರಚನೆಯಾಗಿರುವ ಸರಗೂರು ತಾಲೂಕಿನಲ್ಲಿ ಕಂದಾಯ ಇಲಾಖೆಗೆ–22, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ–23, ಅರಣ್ಯ–5, ಶಿಕ್ಷಣ–2, ಆಹಾರ ಮತ್ತು ನಾಗರಿಕ ಸರಬರಾಜು–2, ಸಾರಿಗೆ–1 ಸೇರಿದಂತೆ ಇಂಧನ ಇಲಾಖೆಗೆ–1 ಅರ್ಜಿಗಳು ಸ್ವೀಕೃತಗೊಂಡಿವೆ.

ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಗ್ರಾಮೀಣ ಮತ್ತು ಕುಡಿಯುವ ನೀರು ನೈರ್ಮಲ್ಯ ಇಲಾಖೆಗೆ–1, ಕೃಷಿ–2, ಅರಣ್ಯ–1, ಸಣ್ಣ ನೀರಾವರಿ ಇಲಾಖೆಗೆ–5 ಅರ್ಜಿಗಳು ಸಲ್ಲಿಕೆಯಾದರೆ, ತಾ.ಪಂಗೆ–3, ಭೂದಾಖಲೆಗಳ ಸಹಾಯಕ ನಿರ್ದೇಶಕರಿಗೆ–1 ಸೇರಿದಂತೆ ಕಂದಾಯ ಇಲಾಖೆಗೆ–10 ಅರ್ಜಿಗಳು ಸಲ್ಲಿಕೆಯಾಗಿವೆ.

ಗ್ರಾಮೀಣ ಜನತೆ ತಾಲೂಕು ಹಾಗೂ ಜಿಲ್ಲಾ ಕಚೇರಿಗಳಿಗೆ ತೆರಳಿ ಸಮಸ್ಯೆ ಪರಿಹಾರಕ್ಕೆ ಅರ್ಜಿ ಸಲ್ಲಿಸುವುದನ್ನು ತಪ್ಪಿಸಲು, ತಮ್ಮ ಮನೆ ಹತ್ತಿರದ ನಾಡ ಕಚೇರಿ ಅಥವಾ ಸರ್ಕಾರಿ ಕಚೇರಿಗಳಲ್ಲಿ ಪರಿಹಾರ ಕಂಡುಕೊಳ್ಳಲು ತಾಲೂಕು ಆಡಳಿತ ಕಚೇರಿಗೆ ಅರ್ಜಿ ಸಲ್ಲಿಸುವ ವ್ಯವಸ್ಥೆ ಜಾರಿಗೆ ತರಲಾಗಿದೆ. ಸಾರ್ವಜನಿಕರು ನೀಡುವ ಅರ್ಜಿಗಳು ಮತ್ತು ದೂರುಗಳನ್ನು ತಕ್ಷಣವೇ ಸಂಬಂಧಪಟ್ಟ ಇಲಾಖೆಗಳಿಗೆ ತಲುಪಿಸಿ ನಿಗದಿತ ಸಮಯದಲ್ಲಿ ಪರಿಹಾರ ದೊರಕಿಸುವ ಉದ್ದೇಶದಿಂದ ಮೊದಲ ಹಾಗೂ 3ನೆ ಶನಿವಾರಗಳಂದು ಅಧಿಕಾರಿಗಳು ಜನರ ಮಧ್ಯದಲ್ಲಿದ್ದು, ಕೆಲಸ ಮಾಡಲಿದ್ದಾರೆ.

ಸ್ವೀಕೃತ ಅರ್ಜಿಗಳನ್ನು ಪ್ರತಿ ಬುಧವಾರ ತಾಲೂಕು, ಉಪವಿಭಾಗ ಹಾಗೂ ಜಿಲ್ಲಾ ಮಟ್ಟದಲ್ಲಿ 3 ಹಂತಗಳಲ್ಲಿ ಪರಿಶೀಲನೆ ನಡೆಸಲಾಗುತ್ತದೆ. 15 ದಿನಕ್ಕೊಮ್ಮೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಜಿಲ್ಲೆಗೆ ಭೇಟಿ ನೀಡಿ, ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅರ್ಜಿ ವಿಲೇವಾರಿ, ಪರಿಹಾರಕ್ಕೆ ಸೂಚನೆ ನೀಡಲಿದ್ದರೆ, ರಾಜ್ಯಮಟ್ಟದಲ್ಲಿ ತಿಂಗಳಿಗೊಮ್ಮೆ ಸಿಎಂ ಅಧ್ಯಕ್ಷತೆಯಲ್ಲಿ ಪ್ರಗತಿ ಪರಿಶೀಲನೆ ಸಭೆ ನಡೆಯಲಿದೆ.



**ಪ್ರಜಾಸೇವೆಯಡಿ 23 ಅರ್ಜಿಗಳು ಸಲ್ಲಿಕೆಯಾಗಿವೆ. ಪರಿಶೀಲಿಸಿ ಇಲಾಖಾವಾರು ಅಧಿಕಾರಿಗಳಿಗೆ ಪತ್ರ ಬರೆಯಲಾಗುತ್ತಿದೆ. ತಾಲೂಕು ಮಟ್ಟದ ಪರಿಹಾರಕ್ಕೆ ಕ್ರಮ ವಹಿಸಲಾಗುವುದು. ಸರ್ಕಾರದ ಮಾರ್ಗ ಸೂಚಿ ಅನ್ವಯ ಮುಂದುವರೆಯಲಾಗುತ್ತದೆ.**

**ಶ್ರೀನಿವಾಸ್** ತಹಶೀಲ್ದಾರ್
ಎಚ್.ಡಿ.ಕೋಟೆ

ಮೊದಲ ಪುಟದಿಂದ

### ಸಚಿವ ಬೈರತಿ–ಎಚ್‌ಸಿಎಂ ತಿಕ್ಕಾಟ

ಸಿಬ್ಬಂದಿಗೆ ಬೆದರಿಕೆ ಹಾಕಿದ್ದಾರೆ ಎನ್ನಲಾಗಿದೆ. ಮಾಜಿ ಸಚಿವರು ನಿಯಮಬದ್ಧವಾಗಿ ತೆರವು ಮಾಡುವ ಮೊದಲೇ ಈ ರೀತಿ ಕಾಮಗಾರಿ ಆರಂಭಿಸಿರುವುದು ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

### ಕೂತು ಸೋಮಾರಿಗಳು!

**ಮಾಡಬೇಕು ಅನ್ಕೊಂಡಿದ್ದರೋ ಆ ಉದ್ದೇಶ ಈಡೇರಿದೆ. ಈಗ ಪಾದಯಾತ್ರೆಯಿಂದ ಏನೂ ಪ್ರಯೋಜನ ಇಲ್ಲ ಎಂದು ಯತೀಂದ್ರ ಹೇಳಿದರು.**

### ಅಹಿಂದ ಯಾರದೇ ಆಸ್ತಿ ಅಲ್ಲ:

ಸುದ್ದಿಗಾರರ ಜತೆ ಮಾತನಾಡಿದ ಅವರು, ಕರೆಯದೇ ಇದ್ದಾಗ ಹೇಗೆ ಹೋಗಲಿ? ಆಯೋಜಕರು ಕರೆದಿದ್ದರೆ ಹೋಗುತ್ತಿದ್ದೆ ಎಂದರು.

**ಮೈಸೂರು ಅರಮನೆ ಮಂಡಳಿ, ಮೈಸೂರು**
**ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿ, ಮೈಸೂರು**
Phone: 0821-2421051, Fax: 2434425, e-mail: ddmysorepalace@gmail.com

ಸಂ.: ಕಾನಿಅ/ಮೈಅಮಂ/ಉನಿ/ಸಿವಿಲ್/ಟೆಂಡರ್–04/2026–27 ದಿನಾಂಕ: 04.09.2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ಇವರಿಂದ ಮೈಸೂರು ಅರಮನೆಯ ಆವರಣದಲ್ಲಿ ಸಿವಿಲ್ ವಿಭಾಗದಿಂದ ಒಟ್ಟು 04 ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಒಟ್ಟು ರೂ. 96.34 ಲಕ್ಷ + ಜಿ.ಎಸ್.ಟಿ ಗಳ (ಕನಿಷ್ಠ ರೂ. 13.14 ಲಕ್ಷ + ಜಿ.ಎಸ್.ಟಿ ಮತ್ತು ಗರಿಷ್ಠ ರೂ. 29.87 ಲಕ್ಷ + ಜಿ.ಎಸ್.ಟಿ ಗಳು) ಕೆಲಸಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿರುವ ಹಾಗೂ ಮೈಸೂರು ಅರಮನೆ ಮಂಡಳಿ ಅಥವಾ ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ ಅಥವಾ ಕೇಂದ್ರ ಪ್ರಾಚ್ಯವಸ್ತು ಇಲಾಖೆಯಲ್ಲಿ ಕಾಮಗಾರಿಗಳನ್ನು ನಿರ್ವಹಿಸಿ ಹಾಗೂ ಸದರಿ ಕೆಲಸದಲ್ಲಿ ಅನುಭವವಿರುವ ಅರ್ಹ ಗುತ್ತಿಗೆದಾರರು/ ಏಜೆನ್ಸಿ/ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿವುಳ್ಳ ಅರ್ಜಿದಾರರು 1) ವಿದ್ಯುನ್ಮಾನ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್) ವ್ಯವಸ್ಥೆ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **11.09.2026 ಸಂಜೆ 17:30 ಗಂಟೆಯವರೆಗೆ. 2)** ಟೆಂಡರ್ ತೆರೆಯುವ **ದಿನಾಂಕ ಮತ್ತು ಸಮಯ: 13.09.2026 ಬೆಳಿಗ್ಗೆ 10:15 ಗಂಟೆಗೆ.** ಮೈಸೂರು ಅರಮನೆ ಮಂಡಳಿ/ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ/ಕೇಂದ್ರ ಪ್ರಾಚ್ಯವಸ್ತು ಇಲಾಖೆಯಲ್ಲಿ ಕಾಮಗಾರಿಗಳನ್ನು ನಿರ್ವಹಿಸಿ ಹಾಗೂ ಸದರಿ ಕೆಲಸದಲ್ಲಿ ಅನುಭವವಿರುವ ಗುತ್ತಿಗೆದಾರರಿಗೆ ಮಾತ್ರ ಸಂಬಂಧಿಸಿದ ಕಾಮಗಾರಿಯ ಟೆಂಡರ್ ಫಾರಂ ನೀಡಲಾಗುವುದು. ಹೆಚ್ಚಿನ ವಿವರಗಳಿಗೆ **http://www.kppp.karnataka.gov.in** ಅಂತರ್ಜಾಲದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು.

ಸಹಿ/–
**ಉಪ ನಿರ್ದೇಶಕರು**
ಮೈಸೂರು ಅರಮನೆ ಮಂಡಳಿ, ಮೈಸೂರು.

DIPR/MYS/672/SA/2026-27

**ಮೋತಿಲಾಲ ಕೃಷ್ಣ ಲಮಾಣಿ**

# ಪ್ರವಾಸಿಗರಿಗೆ ತಪ್ಪು ಇತಿಹಾಸ ಹೇಳಬಾರದು

ಮೈಸೂರು: ಸ್ಥಳೀಯ ಇತಿಹಾಸ, ಸ್ಥಳಗಳ ಬಗ್ಗೆ ಅಧ್ಯಯನ ಮಾಡುವುದಕ್ಕಾಗಿಯೇ ಪ್ರವಾಸಕ್ಕೆಂದು ಬರುವ ಪ್ರವಾಸಿಗರಿಗೆ ಮಾರ್ಗದರ್ಶಕರು ತಪ್ಪು ಇತಿ ಹಾಸವನ್ನು ಕಲಿಸಬಾರದು ಎಂದು ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕ ಮೋತಿಲಾಲ ಕೃಷ್ಣ ಲಮಾಣಿ ಹೇಳಿದರು.

ನಗರದ ಮಾನಸ ಗಂಗೋತ್ರಿಯ ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ಸಭಾಂಗಣದಲ್ಲಿ ಪ್ರವಾಸೋದ್ಯಮ ಇಲಾಖೆಯ ಸಹಯೋಗದೊಂದಿಗೆ ಸೋಮವಾರ ನಡೆದ ವಿದೇಶಿ ಭಾಷೆಗಳ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಪ್ರವಾಸಿಗರಿಗೆ ಸರಿಯಾದ ನಿಟ್ಟಿನಲ್ಲಿ, ಸರಿಯಾದ ಮಾರ್ಗದರ್ಶನ ಮಾಡಬೇಕು. ಒಮ್ಮೆ ತಪ್ಪು ಇತಿ ಹಾಸ ಕಲಿಸಲು ಶುರು ಮಾಡಿದರೆ ಮೌಖಿಕವಾಗಿ ಹಾಗೂ ಪಾರಂಪರಿಕವಾಗಿ ಅದೇ ತಪ್ಪು ಇತಿಹಾಸ ಮುನ್ನಲೆಗೆ ಬರುತ್ತದೆ. ಹೀಗಾಗಿ ಬಂದಂತಹ ಪ್ರವಾಸಿ ಗರಿಗೆ ನಿಖರ ಹಾಗೂ ನೈಜ ಮಾಹಿತಿ



ನೀಡಬೇಕು ಎಂದು ತಿಳಿಸಿದರು. ದೇಶದಲ್ಲಿ ಪ್ರತಿವರ್ಷ ಅಂದಾಜು 30 ಕೋಟಿ ಪ್ರವಾಸಿಗರು ಬೇರೆ ಬೇರೆ ಸ್ಥಳಗಳಲ್ಲಿ ಪ್ರವಾಸ ಮಾಡುತ್ತಾರೆ ಎಂಬ ಅಂಕಿಅಂಶಗಳು ಹೇಳುತ್ತದೆ. ಅಷ್ಟೆ ಅಲ್ಲದೆ ಟ್ರಿಲಿಯನ್ ಡಾಲರ್‌ನಷ್ಟು ಈ ಪ್ರವಾಸೋದ್ಯಮದಿಂದ ಪ್ರತ್ಯೇಕ್ಷವಾಗಿ ಹಾಗೂ ಪರೋಕ್ಷವಾಗಿ ಸರ್ಕಾರಕ್ಕೆ ಆದಾಯ ಬರುತ್ತಿದೆ ಎಂದರು.

ಇದಕ್ಕೆ ಎಲ್ಲಾ ಇಲಾಖೆಗಳ, ಅsಕಾರಗಳ ಹಾಗೂ ಜನರ ಪ್ರಯತ್ನವೂ ಸಹ ಕಾರಣವಾಗುತ್ತದೆ. ಪ್ರವಾಸಿ ಗರು ಬೇರೆ ಬೇರೆ ಸ್ಥಳಗಳಿಗೆ ಬಂದಾಗ ಸ್ವಾಗತ ಕೋರಿ ಆ ಪ್ರವಾಸಿ ಸ್ಥಳದ ಇತಿಹಾಸ, ಕಲೆ, ಸಂಸ್ಕೃತಿ ಹಾಗೂ ಪರಂಪರೆಯನ್ನು ತಿಳಿಸುವ ಜವಾಬ್ದಾರಿ ಪ್ರವಾಸಿ ಮಾರ್ಗದರ್ಶಿಗಳ ಮೇಲೆ ಇರುತ್ತದೆ ಎಂದರು.

ಕರ್ನಾಟಕದ ತುಂಬೆಲ್ಲಾ ದೈವಿಕ ದತ್ತವಾದ ಪ್ರವಾಸೋದ್ಯಮ ಹರಡಿಕೊಂಡಿದೆ. ಉಡುಪಿ, ಮಂಗಳೂರಿನಲ್ಲಿ ಮೈಸೂರು ಸೇರಿ ರಾಜ್ಯದ ಹಲವಾರು ಭಾಗದಲ್ಲಿ ಇಕೋ, ಮಾನೋಮೆಂಟ್ಸ್ (ಸ್ಮಾರಕ) ಟೂರಿಸಂ ಇದೆ. ಆದ್ದರಿಂದ ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಗೈಡ್‌ಗಳ ಪಾತ್ರ ಬಹಳ ದೊಡ್ಡದು ಎಂದು ತಿಳಿಸಿದರು. ಪ್ರವಾಸೋದ್ಯಮ ಇಲಾಖೆಯ ಎ.ಎಂ.ಪ್ರಭುಸ್ವಾಮಿ ಮಾತನಾಡಿ, ನಮ್ಮ ದೇಶದಲ್ಲಿ ಅತಿಥಿ ದೇವೋ ಭವ ಎಂಬ ಕಲ್ಪನೆ ಇದೆ. ಈ ಒಂದು ನಿಟ್ಟಿನಲ್ಲಿ ಬಂದಂತಹ ಪ್ರವಾಸಿಗರಿಗೆ ಅವರ ಮುಖದಲ್ಲಿ ಎಷ್ಟು ನಗು ತಿರಿಸುತ್ತೀವಿ, ಸರಿಯಾದ ಮಾಹಿತಿಯೊಂದಿಗೆ ಅವರ ಮಸ್ಸಿಗೆ ಎಷ್ಟು ಖುಷಿ ನೀಡುತ್ತೇವೆ ಎಂಬುದು ಬಹಳ ಮುಖ್ಯ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮಾಳವೀಯ ಮಿಷನ್ ಶಿಕ್ಷಕರ ಕೇಂದ್ರದ ನಿರ್ದೇಶಕಿ ಪ್ರೊ.ಹೆಚ್.ಪಿ.ಜ್ಯೋತಿ, ಎಸ್‌ಸಿ, ಎಸ್‌ಟಿ ವಿಶೇಷ ಘಟಕದ ಸಹಾಯಕ ಕುಲಸಚಿವೆ ಕಮಲಮ್ಮ, ಶೈಕ್ಷಣಿಕ ಬಹು ಮಾಧ್ಯಮ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಬಿ.ಶ್ರೀಕಂಠಾಚಾರ್, ಕರ್ನಾಟಕ ರಾಜ್ಯ ಪ್ರವಾಸಿ ಮಾರ್ಗದರ್ಶಿಗಳ ಸಂಘದ ಅಧ್ಯಕ್ಷ ಎಸ್.ಜೆ.ಅಶೋಕ ಉಪಸ್ಥಿತರಿದ್ದರು

ಮೊದಲ ಪುಟದಿಂದ

### ಎಲ್ಲಾ ಕ್ಷೇತ್ರಗಳು ಬರಪೀಡತ

ಶಾಸಕರು ಯಾರೂ ಆತಂಕ ಪಡಬೇಡಿ. ಎಲ್ಲೆಲ್ಲಿ ಬರ ಇದೆ ಎಂಬುದನ್ನು ವೈಜ್ಞಾನಿಕವಾಗಿ ನಿರ್ಧರಿಸಬೇಕು. ಉಪಮುಖ್ಯಮಂತ್ರಿ ವರದಿ ಪಡೆಯಲಿದ್ದಾರೆ. ಒಂದೇ ಸಲ ಎಲ್ಲವನ್ನೂ ಮಾಡಲು ಆಗುವುದಿಲ್ಲ. ಹಲವು ಹಂತಗಳಲ್ಲಿ ಪ್ರಕ್ರಿಯೆ ನಡೆಯುತ್ತಿದೆ ಎಂದು ಹೇಳಿದರು.

### ಬರ ಚರ್ಚೆಗೆ ಅಧಿವೇಶನ

ಸಹಿ ಮಾಡಿ ಕೊಟ್ಟಿವೆ. ರೈತರು ಆಸ್ತಿ ಕಳೆದುಕೊಂಡಿದ್ದಾರೆ. ನನಗೂ ಪ್ರಜ್ಞೆ ಇದೆ ಎಂದು ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದರು.

### ಹೊತ್ತಿ ಉರಿಯುತ್ತಿದೆ ಕರುನಾಡು

ಸಾಮಾನ್ಯಕ್ಕಿಂತ 3.1 ಡಿಗ್ರಿ ಸೆಲ್ಸಿಯಸ್. ಜಿಲ್ಲೆಯ ಹಲವು ಭಾಗಗಳಲ್ಲಿ ಬೇಸಿಗೆಯಂತಹ ಬಿಸಿಲಿನ ಅನುಭವವಾಗುತ್ತಿದೆ.

ಬೆಂಗಳೂರು ನಗರದಲ್ಲೂ ಬಿಸಿಲಿನ ಪ್ರಖರತೆ ಜೋರಾಗಿದೆ. ಸಾಮಾನ್ಯಕ್ಕಿಂತ 4 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದೆ. ಹಾಸನದಲ್ಲಿ ಉಷ್ಣಾಂಶದ ಪ್ರಮಾಣ 29.5 ಡಿಗ್ರಿ ಸೆಲ್ಸಿಯಸ್, ಆಗುಂಬೆಯಲ್ಲಿ 28.7 ಡಿಗ್ರಿ ಸೆಲ್ಸಿಯಸ್ ದಾಖಲಾಗಿರುವುದು ಕಡಿಮೆ.

### ಕಾರು ಡಿಕ್ಕಿ: ನಾಲ್ವರು ಸಾವು

ವಾಪಸ್ಸಾಗುತ್ತಿದ್ದಾಗ ಈ ಅಪಘಾತ ಸಂಭವಿಸಿದೆ. ವಿಕಾಸ್, ನೀತು, ಆದ್ವಿಕ ಗಾಯಗೊಂಡಿದ್ದಾರೆ. ಬೇತಮಂಗಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

### ಮತ್ತೆ ಇಡಿಯಿಂದ ನಾಗೇಂದ್ರ ವಿಚಾರಣೆ

ಚಾರ್ಜ್‌ಶೀಟ್ ಬಳಿಕ ಮತ್ತಷ್ಟು ಮಾಹಿತಿ ಪಡೆಯಲು ವಿಚಾರಣೆಗೆ ಹಾಜರಾಗುವಂತೆ ನಾಗೇಂದ್ರ ಅವರಿಗೆ ಇಡಿ ಸಮನ್ಸ್ ನೀಡಿತ್ತು. ಪ್ರಕರಣ ಸಂಬಂಧ ಮಾಜಿ ಸಚಿವ ಬಿ.ನಾಗೇಂದ್ರ ವಿರುದ್ಧ ಸಿಬಿಐ ಸಹ ಚಾರ್ಜ್‌ಶೀಟ್ ಸಲ್ಲಿಸಿದೆ. ಅಲ್ಲದೆ ಜಾರಿ ನಿರ್ದೇಶನಾಲಯ ತನಿಖೆ ನಡೆಸಿ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದೆ.

**ವರ್ತಮಾನ**
**ಜಾಹಿರಾತಿಗೆ ಉತ್ತಮ ಮಾಧ್ಯಮ**

### ಮೂರು ದಿನಗಳ ಅವನಿ ಸಿಲ್ಕ್ ಮೇಳಕ್ಕೆ ಚಾಲನೆ

ಮೈಸೂರು: ಮೈಸೂರಿಗರೇ ತಯಾರಿಸಿ ರಾಜ್ಯದ ಹಲವೆಡೆ ಮೇಳಗಳ ಮೂಲಕ ತಮ್ಮ ಉತ್ಕೃಷ್ಟ ಗುಣಮಟ್ಟದ ಸೀರೆಗಳನ್ನು ಕಡಿಮೆ ಬೆಲೆಗೆ ನೀಡುತ್ತಿರುವ ಅವನಿ ಬ್ರಾಂಡ್ ತನ್ನ 11ನೇ ಮೇಳವನ್ನು ಮೈಸೂರಿನಲ್ಲಿ ಮತ್ತೆ ಪ್ರಾರಂಭಿಸಿದೆ.

ನಗರದ ಶಿವರಾಂಪೇಟೆ ರಸ್ತೆಯಲ್ಲಿರುವ ಆಲಮ್ಮ ಛತ್ರದಲ್ಲಿ ಮೂರು ದಿನಗಳ ಕಾಲ ನಡೆಯುವ ಮೇಳದಲ್ಲಿ ಅತಿಕಡಿಮೆ ಹಾಗೂ ಶೇ.50ರಷ್ಟು ರಿಯಾಯಿತಿ ದರದಲ್ಲಿಯೂ ಗುಣಮಟ್ಟದ ಸೀರೆ ಪ್ರದರ್ಶನ ಮತ್ತು ಮಾರಾಟಕ್ಕಿರಿಸಿದೆ. 500ರಿಂದ 4000 ಸಾವಿರದವರೆಗಿನ ಸೀರೆಗಳನ್ನು ಪ್ರದರ್ಶನಕ್ಕೆ ಇರಿಸಿದ್ದು, ಇದರ ಸದುಪಯೋಗವನ್ನು ಪಡೆದುಕೊಳ್ಳುವಂತೆ ಅವನಿ ಸಿಲ್ಕ್ ಸ್ಯಾರಿ ತಂಡ ಕೋರಿದ್ದಾರೆ.



# ವಿದ್ಯಾರ್ಥಿಗಳ ಗ್ರಹಿಕಾಶಕ್ತಿಯನ್ನು ಆಲಿಸಿ, ಪಾಠ ಪ್ರವಚನ ಮಾಡಿ



**ಅಂಕನಶೆಟ್ಟಿಪುರ ಪ್ರೇರಣಾ ವಿದ್ಯಾಸಂಸ್ಥೆಯಲ್ಲಿ ಶಿಕ್ಷಕರ ದಿನಾಚರಣೆ ಹಾಗೂ ಕೃಷ್ಣ ಜನ್ಮಾಷ್ಟಮಿ ಆಚರಣೆ**

ಚಾಮರಾಜನಗರ,ವಿದ್ಯಾರ್ಥಿಗಳ ಕಲಿಕಾ ಮತ್ತು ಅವರು ಗ್ರಹಿಸುವ ಶಕ್ತಿಯನ್ನು ಮನಗಂಡು ಶಿಕ್ಷಕರು ಪಾಠ ಪ್ರವಚನ ಮಾಡುವ ಮೂಲಕ ಭವ್ಯ ಭಾರತ ಸತ್ಪ್ರಜೆಗಳನ್ನು ರೂಪಿಸುವ ಜವಾಬ್ದಾರಿ ನಿಮ್ಮದಾಗಿದೆ ಎಂದು ನಿವೃತ್ತ ಶಿಕ್ಷಕ ಶ್ರೀಕಂಠಸ್ವಾಮಿ ತಿಳಿಸಿದರು.

ತಾಲೂಕಿನ ಅಂಕನಶೆಟ್ಟಿಪುರದಲ್ಲಿರುವ ಶ್ರೀ ಪ್ರೇರಣಾ ವಿದ್ಯಾಸಂಸ್ಥೆಯಲ್ಲಿ ನಡೆದ ಶಿಕ್ಷಕರ ದಿನಾಚರಣೆ ಹಾಗೂ ಶ್ರೀಕೃಷ್ಣಾ ಜನ್ಮಾಷ್ಟಾಮಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಹಿಂದಿನ ಶಿಕ್ಷಣ ಪದ್ದತಿಗೂ ಇತ್ತೀಚಿನ ಶಿಕ್ಷಣ ಪದ್ದತಿಗೂ ಬಹಳ ವ್ಯತ್ಯಾಸವಾಗಿದೆ. ಶಿಕ್ಷಕರು ಮೌಲ್ಯವನ್ನು ಉಳಿಸಿಕೊಂಡು ವಿದ್ಯಾರ್ಥಿಗಳಿಗೆ ಪ್ರೀತಿ ಪಾತ್ರರಾಗಿ ಭೋದನೆ ಮಾಡಬೇಕಾಗಿದೆ. ಮಕ್ಕಳಲ್ಲಿ ಕಲಿಯುವ ಆಸಕ್ತಿಯನ್ನು ಮೂಡಿಸಲು ಶಿಕ್ಷಕರು ಮುಂದಾಗಬೇಕು ಎಂದು ಸಲಹೆ ನೀಡಿದರು.

ಪ್ರೇರಣಾ ಟ್ರಸ್ಟ್ ಅಧ್ಯಕ್ಷ ಬಿ.ಪಿ. ಪ್ರಕಾಶ್ ಮಾತನಾಡಿ, ಅಕ್ಷರ ಹೇಳಿಕೊಟ್ಟ ಗುರುಗಳು ಸರ್ವ ಶ್ರೇಷ್ಟರು, ತಂದೆ, ತಾಯಿ ನಂತರ ಸ್ಥಾನವನ್ನು ಗುರುವಿಗೆ ನೀಡಲಾಗುತ್ತದೆ. ವಿದ್ಯಾರ್ಥಿಗಳು ಮುಂದೆ ಗುರಿ ಇಟ್ಟು ಹಿಂದೆ ಗುರುವಿನ ಮಾರ್ಗದರ್ಶನದಲ್ಲಿ ಮುನ್ನಡೆಬೇಕು ಎಂದರು.

ಶ್ರೀಕೃಷ್ಣ ಜನ್ಮಾಷ್ಟಾಮಿಯನ್ನು ಅಚರಣೆ ಮಾಡುವ ಜೊತೆಗೆ ಶ್ರೀಕೃಷ್ಣ ಹಾಗೂ ಮಹಾಭಾರತದಲ್ಲಿ ಬರುವ ಸನ್ನಿವೇಶಗಳು ಸಹ ನಮ್ಮ ಜೀವನಕ್ಕೆ ದಾರಿದೀಪವಾಗಿದೆ. ಶ್ರೀಕೃಷ್ಣ ಉಪದೇಶವು ಜಗತ್ತಿಗೆ ದಿವ್ಯಶಕ್ತಿಯಾಗಿದೆ. ಶಾಲೆ ನಡೆದು ಬಂದ ಹಾದಿ, ಶಿಕ್ಷಕರ ಪಾತ್ರ ಮತ್ತು ಮಹತ್ವದ ಬಗ್ಗೆ ಮಾತನಾಡಿ, ಮುಂದಿನ ದಿನಗಳಲ್ಲಿ ಶಿಕ್ಷಕ ವೃಂದವರಿಗೆ ಒಳ್ಳೆಯದಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳಿಗೆ ಕೃಷ್ಣ ವೇಷಭೂಷಣ ಸ್ಪರ್ಧೆಯನ್ನು ಆಯೋಜನೆ ಮಾಡಲಾಗಿತ್ತು. ಶಾಲೆಯ ಮಕ್ಕಳು ಕೃಷ್ಣ, ರುಕ್ಷ್ಮಿಣಿ , ರಾಧೆ ವೇಷ ಉಡುಗೆಯನ್ನು ಧರಿಸಿ, ಸಂಭ್ರಮಿಸಿದರು.

ವೇದಿಕೆಯಲ್ಲಿ ಟ್ರಸ್ಟ್‌ನ ನಟರಾಜ್,ಶಾಲೆಯ ಮುಖ್ಯ ಶಿಕ್ಷಕ ಎಚ್.ಜಿ. ಮಹೇಶ್‌ಕುಮಾರ್, ತೀರ್ಪುಗಾರರಾಗಿ ಮಹದೇವಪ್ರಸಾದ್, ಕಾವ್ಯ, ಸಹ ಶಿಕ್ಷಕರು, ಪೋಷಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# 9ರಿಂದ ವಿಚಾರಸಂಕಿರಣ

ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಕನ್ನಡ ವಿಭಾಗದ ವತಿಯಿಂದ ಅಭಿನವ ಪ್ರಕಾಶನ ಮೊದಲಾದವುಗಳ ಸಂಯುಕ್ತಾಶ್ರಯದಲ್ಲಿ ಸೆ.10 ಮತ್ತು 11 ರಂದು ವಿದ್ಯಾಸಂಸ್ಥೆಯ ವಿವೇಕಾನಂದ ಸಭಾಂಗಣದಲ್ಲಿ ಕನ್ನಡ ವಿವೇಕ ಪರಂಪರೆ ಮತ್ತು ಕುವೆಂಪು ವಿಷಯ ಕುರಿತ 2 ದಿನಗಳ ಅಂತರ ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಪ್ರಾಚಾರ್ಯ ಡಾ.ಬಿ.ಆರ್. ಜಯಕುಮಾರಿ ತಿಳಿಸಿದರು.



ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸೆ. 10 ರ ಬೆಳಗ್ಗೆ 9 ಕ್ಕೆ ಕಾಲೇಜು ಬಳಿಯಿಂದ ಬೆಳ್ಳಿರಥದಲ್ಲಿ ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಕೃತಿ ಇರಿಸಿದ ಮೆರವಣಿಗೆ ವಿವಿಧ ರಸ್ತೆಗಳ ಮೂಲಕ ಸಾಗಿ ವಿಚಾರ ಸಂಕಿರಣ ನಡೆಯುವ ಸಭಾಂಗಣ ತಲುಪಲಿದೆ. ಅಲ್ಲಿ 10ಕ್ಕೆ ಡಾ. ಚಂದ್ರಶೇಖರ ಕಂಬಾರ ವಿಚಾರ ಸಂಕಿರಣಕ್ಕೆ ಚಾಲನೆ ನೀಡಲಿದ್ದಾರೆ. ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಪ್ರಾಸ್ತಾವಿಕ ನುಡಿ ಆಡಲಿದ್ದಾರೆ.

ಈ ವೇಳೆ ಬಾ. ಕುವೆಂಪು ದರ್ಶನಕೆ ಕೃತಿಯನ್ನು ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಟಿ. ಮುರಳೀಧರ್ ಭಾಗವತ್ ಲೋಕಾರ್ಪಣೆಗೊಳಿಸಿದ್ದಾರೆ. ಮಂದಾರ ವಾರ್ಷಿಕ ಸಂಚಿಕೆಯನ್ನು ಎಸ್.ಕೆ. ಸಂಜಯ್ ಬಿಡುಗಡೆಗೊಳಿಸುವರು, ಡಾ.ಟಿ. ವಿಜಯಲಕ್ಷ್ಮಿ ?ಮ ಮುರಳೀಧರ್ ಸಾಕ್ಷಿ ನುಡಿ ಆಡಲಿದ್ದಾರೆ. ತಾವು ಹಾಗೂ ಡಾ.ಎಸ್.ಆರ್. ರಮೇಶ್ ವೇದಿಕೆಯಲ್ಲಿರುವುದಾಗಿ ತಿಳಿಸಿದರು.

ನಂತರ ಹಾಗೂ ಮಾರನೇ ದಿನ ವಿವಿಧ ವಿಚಾರ ಸಂಕಿರಣ ನಡೆಯಲಿವೆ. ಮಾರನೇ ದಿನ ಸಂಜೆ 4.30ಕ್ಕೆ ಸಮಾರೋಪ ನಡೆಯಲಿದೆ ಎಂದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಮಾತನಾಡಿ, ಅಮೆರಿಕ ಮೊದಲಾದ ಕಡೆಗಳಿಂದಲೂ ವಿದ್ವಾಂಸರು ಆಗಮಿಸಿ ಪಾಲ್ಗೊಳ್ಳಲಿರುವುದು ವಿಶೇಷ. ಸುಮಾರು 300 ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದರು. ಅಭಿನವ ಪ್ರಕಾಶನದ ನ.ರವಿಕುಮಾರ್, ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್ ಇದ್ದರು.

## ಪಟ್ಟಣದ ಅಭಿವೃದ್ಧಿಗೆ ಮತ್ತಷ್ಟು ಅನುದಾನ: ಶಾಸಕ ಗಣೇಶ್ ಪ್ರಸಾದ್

**ಕೆಇಬಿ ರಸ್ತೆ, ಫುಡ್ ಸ್ಟ್ರೀಟ್, ವಾಲ್ಮೀಕಿ ಭವನ ಕಾಮಗಾರಿಗಳ ಪರಿಶೀಲನೆ**



ಗುಂಡ್ಲುಪೇಟೆ: ಪಟ್ಟಣದ ವಿವಿಧೆಡೆ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳನ್ನು ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಅವರು ಸೋಮವಾರ ವೀಕ್ಷಿಸಿ, ಕಾಮಗಾರಿಗಳ ಪ್ರಗತಿ ಹಾಗೂ ಗುಣಮಟ್ಟದ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

ಪಟ್ಟಣದ ಕೆಇಬಿ ಪಕ್ಕದ ರಸ್ತೆಯಲ್ಲಿ ಸುಮಾರು ?2.50 ಕೋಟಿ ವೆಚ್ಚದಲ್ಲಿ ನಡೆಯುತ್ತಿರುವ ರಸ್ತೆ ಹಾಗೂ ಬೃಹತ್ ಚರಂಡಿ ನಿರ್ಮಾಣ ಕಾಮಗಾರಿಯನ್ನು ಪರಿಶೀಲಿಸಿದ ಶಾಸಕರು, ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಇನ್ನಷ್ಟು ಅನುದಾನ ನೀಡಿದರೆ ಸಂಪೂರ್ಣವಾಗಿ ಅಭಿವೃದ್ಧಿಪಡಿಸಲು ಸಾಧ್ಯವಾಗಲಿದೆ ಎಂದರು. ವಾಲ್ಮೀಕಿ ಭವನದ ಕಾಮಗಾರಿಯನ್ನೂ ಪರಿಶೀಲಿಸಿದ ಅವರು, ಭವನಕ್ಕೆ ಸುತ್ತುಗೋಡೆ, ಶೌಚಾಲಯ ಹಾಗೂ ಇನ್ನೂ ಆರು ಕೊಠಡಿಗಳ ನಿರ್ಮಾಣ ಅಗತ್ಯವಿದೆ. ಮದುವೆ ಸೇರಿದಂತೆ ವಿವಿಧ ಕಾರ್ಯಕ್ರಮಗಳಿಗೆ ಆಗಮಿಸುವವರಿಗೆ ಉಳಿದುಕೊಳ್ಳಲು ಕೊಠಡಿಗಳು ಅನುಕೂಲವಾಗಲಿದೆ ಎಂದರು.

### ಫುಟ್‌ಪಾತ್ ಅಭಿವೃದ್ಧಿಗೆ ಆದ್ಯತೆ

ಪಟ್ಟಣದ ಅಭಿವೃದ್ಧಿಗಾಗಿ ಈಗಾಗಲೇ 5 ಕೋಟಿ ಅನುದಾನ ನೀಡಲಾಗಿದೆ. ಯುಜಿಡಿ ಕಾಮಗಾರಿಗೆ ತಾಂತ್ರಿಕ ಅನುಮೋದನೆ ದೊರೆತಿದ್ದು, ಬೋರ್ಡ್ ಸಭೆಯಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಶಾಸಕ ಗಣೇಶ್ ಪ್ರಸಾದ್ ತಿಳಿಸಿದರು. ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ಸುರಭಿಯಿಂದ ಹಳೆ ಪ್ರವಾಸಿ ಮಂದಿರದವರೆಗೆ ಟೈಲ್ಸ್ ಅಳವಡಿಸಿ ಫುಟ್ಪಾತ್ ಅಭಿವೃದ್ಧಿಪಡಿಸಲಾಗುವುದು. ಮುಂದಿನ ಹಂತದಲ್ಲಿ ಹೆಚ್ಚಿನ ಅನುದಾನ ಒದಗಿಸಿ ಎರಡೂ ಬದಿಯಲ್ಲಿ ಕಬ್ಬಿಣದ ಬ್ಯಾರಿಕೇಡ್ ಅಳವಡಿಸಲಾಗುವುದು. ಎಲ್ಲಾ ರಸ್ತೆಯಲ್ಲಿರುವ ಫುಡ್ ಅಂಗಡಿಗಳನ್ನು ತೆರವುಗೊಳಿಸಿ, ಅವುಗಳಿಗೆ ಫುಡ್ ಸ್ಟ್ರೀಟ್‌ನಲ್ಲಿ ಅವಕಾಶ ಕಲ್ಪಿಸಲಾಗುವುದು ಎಂದರು.

### ಅರ್ಹ ಫಲಾನುಭವಿಗಳಿಗೆ ನಿವೇಶನ

ಶ್ರೀರಾಮಗುಡ್ಡದ ಬಳಿ ನಿವೇಶನ ಹಂಚಿಕೆ ವಿಚಾರದಲ್ಲಿ ಲೋಕಾಯುಕ್ತ ನ್ಯಾಯಾಲಯದ ತೀರ್ಪು ಬಂದಿದ್ದು, ಅರ್ಹ ಫಲಾನುಭವಿಗಳಿಗೆ ನಿವೇಶನ ನೀಡಲು ಕ್ರಮ ಕೈಗೊಳ್ಳಲಾಗುವುದು. ಯಾವುದೇ ನಿವೇಶನ ಹೊಂದಿರದ ಅರ್ಹ ಫಲಾನುಭವಿಗಳಿಗೆ ಜಾಗ ಕಲ್ಪಿಸುವುದು ಉದ್ದೇಶವಾಗಿದೆ ಎಂದರು. ಫುಟ್ಪಾತ್‌ನಲ್ಲಿ ವ್ಯಾಪಾರ ಮಾಡುತ್ತಿರುವವರು ಕೂಡ ನಮ್ಮವರೇ ಆಗಿದ್ದು, ಅವರಿಗೆ ಮನವರಿಕೆ ಮಾಡಿ ಫುಟ್ಪಾತ್ ತೆರವುಗೊಳಿಸಿ ಸಾರ್ವಜನಿಕರ ಓಡಾಟಕ್ಕೆ ಅನುಕೂಲ ಮಾಡಿಕೊಡಲಾಗುವುದು ಎಂದರು.

### 20 ದಿನ ಕೆರೆಗಳಿಗೆ ನೀರು ಹರಿಸಲು ಮನವಿ

ತಾಲೂಕಿನ ಕೆರೆಗಳನ್ನು ತುಂಬಿಸುವ ವಿಚಾರವಾಗಿ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಲಾಗಿದ್ದು, 20 ದಿನಗಳ ಕಾಲ ತಾಲೂಕಿನ ಕೆರೆಗಳಿಗೆ ನೀರು ಹರಿಸಲು ಒಪ್ಪಿಗೆ ದೊರೆತಿದೆ ಎಂದು ಶಾಸಕ ಗಣೇಶ್ ಪ್ರಸಾದ್ ಹೇಳಿದರು. ಪೈಪ್ಲೈನ್ ಮೂಲಕ ಕೆರೆಗಳಿಗೆ ನೀರು ತುಂಬಿಸುವ ವ್ಯವಸ್ಥೆ ಮಾಡಿದರೆ ಸಮಸ್ಯೆ ಇರುವುದಿಲ್ಲ. ಪ್ರಸ್ತುತ ಕೆರೆಗಳಲ್ಲಿ ನೀರಿನ ಮಟ್ಟ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಉತ್ತೂರು–ವಡ್ಡಗೆರೆ ಕೆರೆಯಿಂದ ನೀರು ಹರಿಸುವಲ್ಲಿ ತೊಂದರೆ ಎದುರಾಗಬಹುದು. ಆದ್ದರಿಂದ 110 ಕೆರೆಗಳ ಪೈಪ್ಲೈನ್ ಕಾಮಗಾರಿ ನಡೆಯುವ ಸಂದರ್ಭದಲ್ಲಿ ಕಲ್ಕಟ್ಟ ಕೆರೆಗೂ ಪೈಪ್ಲೈನ್ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ಕೆರೆಗಳಿಗೆ ನೀರು ತುಂಬಿಸುವ ವಿಚಾರದಲ್ಲಿ ಬಿಜೆಪಿ ರಾಜಕೀಯ ಮಾಡುತ್ತಿದೆ ಸ್ವಂತ ಶಕ್ತಿ ಇಲ್ಲದೆ ಹೊರಗಿನವರನ್ನು ಕರಸಿ ಮಾಜಿ ಶಾಸಕರು ಪ್ರತಿಭಟನೆ ಮಾಡಿದ್ದರು ಎಂದು ಆರೋಪಿಸಿದರು, ರೈತರ ಹಿತದ ಹೆಸರಿನಲ್ಲಿ ಪ್ರತಿಭಟನೆ ನಡೆಸುವುದಕ್ಕಿಂತ ಕೆರೆಗಳಿಗೆ ಶಾಶ್ವತವಾಗಿ ನೀರು ಒದಗಿಸುವ ಯೋಜನೆಗಳತ್ತ ಗಮನಹರಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜಶೇಖರ್, ಪುರಸಭೆ ಮಾಜಿ ಅಧ್ಯಕ್ಷ ಶಶಿಧರ್ ದೀಪು, ಮಧುಸೂದನ್, ಕಿರಣ್, ಮಾಜಿ ಉಪಾಧ್ಯಕ್ಷರಾದ ಕಣ್ಣಪ್ಪ, ಅಣ್ಣಯ್ಯಸ್ವಾಮಿ, ಮುಖಂಡರಾದ ನವೀದ್, ಬಸವರಾಜು, ಎಸ್.ಆರ್. ರಾಜಶೇಖರ್, ಪ್ರದೀಪ್, ಕಾರ್ಗಳ್ಳಿ ಸುರೇಶ್, ಮಂಜುನಾಥ್, ಮೋಹನ್ ದಾಸ್, ಚಂದ್ರು, ಚುಟುಕು ಮಾಧು, ಪುರಸಭೆ ಮುಖ್ಯಾಧಿಕಾರಿ ಶರವಣ, ಕೆಆರ್ಡಿಎಲ್ ಎಇಇ ಪ್ರಸನ್ನ ಕುಮಾರ್, ಎಂಜಿನಿಯರ್ಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಶಾಂತಿ, ಶಿಸ್ತಿನಿಂದ ಬರಮಾಡಿಕೊಳ್ಳಿ

## ಶಾಸಕ ದರ್ಶನ್ ಧ್ರುವನಾರಾಯಣ್ ಹೇಳಿಕೆ । ಧಮ್ಮ ಪಯಣ: ಪೂರ್ವಭಾವಿ ಸಭೆ



ಚಾಮರಾಜನಗರ: ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನ ನಿಮಿತ್ತವಾಗಿ ಗ್ರಾಮಗಳಿಗೆ ಬರುವ 'ಧಮ್ಮ ಪಯಣ' ಜಾಗೃತಿ ಜಾಥಾ ಟ್ಯಾಬ್ಲೊಗಳನ್ನು ಗ್ರಾಮಸ್ಥರು ಶಾಂತಿ ಹಾಗೂ ಶಿಸ್ತಿನಿಂದ ಸ್ವಾಗತಿಸಿ ಬರಮಾಡಿಕೊಳ್ಳಬೇಕು ಎಂದು ನಂಜನಗೂಡು ಕ್ಷೇತ್ರದ ಶಾಸಕ ದರ್ಶನ್ ಧ್ರುವನಾರಾಯಣ್ ಮನವಿ ಮಾಡಿದರು. ತಾಲೂಕಿನ ಹೆಗ್ಗವಾಡಿ ಗ್ರಾಮದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆದ ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನದ ಹರವೆ ಹೋಬಳಿ ಮಟ್ಟದ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

**ಅಕ್ಟೋಬರ್‌ನಲ್ಲಿ ಸಮ್ಮೇಳನ ಹಾಗೂ ಧಮ್ಮ ಪಯಣದ ಸಂಚಾರ**

ಅಕ್ಟೋಬರ್ 24 ಮತ್ತು 25ರಂದು ಚಾಮರಾಜನಗರದ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನ ನಡೆಯಲಿದೆ. ಈ ನಿಟ್ಟಿನಲ್ಲಿ ಪ್ರಚಾರ ಸಮಿತಿ ವತಿಯಿಂದ ಪ್ರತಿ ಹೋಬಳಿಯ ಗ್ರಾಮಗಳಲ್ಲೂ ಪ್ರಚಾರ ಕಾರ್ಯ ಹಮ್ಮಿಕೊಳ್ಳಲಾಗಿದ್ದು, ವಿಶೇಷವಾಗಿ ಧಮ್ಮ ಪಯಣ ಕಾರ್ಯಕ್ರಮವನ್ನು ಕೂಡ ಆಯೋಜನೆ ಮಾಡಲಾಗಿದೆ. ಈ ಧಮ್ಮ ಪಯಣವು ಪ್ರತಿ ಹಳ್ಳಿಗೂ ಸಂಚರಿಸಲಿದ್ದು, ಗ್ರಾಮಸ್ಥರು ಇದನ್ನು ಶಿಸ್ತಿನಿಂದ ಹಾಗೂ ಅದ್ದೂರಿಯಾಗಿ ಬರಮಾಡಿಕೊಳ್ಳಬೇಕು ಎಂದು ಅವರು ಮನವಿ ಮಾಡಿದರು. ಈ ಸಭೆಯಲ್ಲಿ ಕೆರೆಹಳ್ಳಿ ಮಹದೇವಸ್ವಾಮಿ, ಮುಕ್ಕಡಹಳ್ಳಿ ಪುಟ್ಟ ಅರಸ್, ಸಾಹಿತಿ ಬಸವಣ್ಣ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಹೆಗ್ಗವಾಡಿ ಕೆಂಪರಾಜು, ಕೆರೆಹಳ್ಳಿ ರಾಜ್ ಕುಮಾರ್, ಅಜಯ್ ಶಂಭು, ನಿವೃತ್ತ ಶಿಕ್ಷಕ ಲಾಲಿಂಗಸ್ವಾಮಿ, ಹೊಸಹಳ್ಳಿ ಜಯಪ್ರಕಾಶ್, ಗೋಪಿ, ಕೆ. ರೇವಣ್ಣ, ಹೊಸಹಳ್ಳಿ ಶಿವರಾಜ್, ಹೆಗ್ಗವಾಡಿ ನಂದೀಶ್, ಹೊಸಹಳ್ಳಿ ಅವಿನ್ ಕುಮಾರ್ ಸೇರಿದಂತೆ ಇತರರು ಭಾಗವಹಿಸಿದ್ದರು.

### ನಳಂದ ವಿವಿ ಅಭಿವೃದ್ಧಿಗೆ ಅನುದಾನದ ಭರವಸೆ

ತಮ್ಮ ತಂದೆ ಧ್ರುವನಾರಾಯಣ್ ಅವರ ದೂರದೃಷ್ಟಿಯಿಂದ ಚಾಮರಾಜನಗರ ಜಿಲ್ಲೆಯಲ್ಲಿ ನಳಂದ ವಿಶ್ವವಿದ್ಯಾಲಯ ನಿರ್ಮಾಣಗೊಂಡು ಕಾರ್ಯರೂಪಕ್ಕೆ ಬಂದಿದೆ. ಸುತ್ತುಗೋಡೆ ಸೇರಿದಂತೆ ಇನ್ನು ಹೆಚ್ಚಿನ ಕೆಲಸಗಳು ಅಲ್ಲಿ ಆಗಬೇಕಿದೆ. ನಾವು, ಬಂತೇಜಿ ಹಾಗೂ ಸಚಿವರಾದ ಪುಟ್ಟರಂಗಶೆಟ್ಟಿ ಅವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅವಧಿಯಲ್ಲಿ ಹೆಚ್ಚಿನ ಅನುದಾನ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದೆವು. ಇದೀಗ ಮತ್ತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಲ್ಲಿ ಈ ಬಗ್ಗೆ ಮನವಿ ಮಾಡಲಾಗುವುದು ಎಂದು ಶಾಸಕರು ತಿಳಿಸಿದರು.

### ಸಮ್ಮೇಳನದ ಯಶಸ್ವಿಗೆ ಮುಖಂಡರ ಕರೆ

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಅವರು ಮಾತನಾಡಿ, ಎಲ್ಲಾ ಸಮಿತಿಗಳು ಅಚ್ಚುಕಟ್ಟಾಗಿ ಕೆಲಸ ನಿರ್ವಹಿಸುವ ಮೂಲಕ ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನವನ್ನು ಬಹಳ ಅರ್ಥಪೂರ್ಣವಾಗಿ ಯಶಸ್ವಿಗೊಳಿಸಬೇಕು ಎಂದರು. ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನದ ಸ್ವಾಗತ ಸಮಿತಿಯ ಜಿಲ್ಲಾ ಸಂಚಾಲಕ ವೆಂಕಟರಮಣಸ್ವಾಮಿ ಪಾಪು ಮಾತನಾಡಿ, ಮೈಸೂರಿನಲ್ಲಿ ಸಮ್ಮೇಳನ ನಡೆದ ಸಂದರ್ಭದಲ್ಲಿ ಸಚಿವ ಸತೀಶ್ ಜಾರಕಿಹೊಳಿ ಅವರು ಬೆಳಗಾವಿಯಲ್ಲಿ ಮಾಡಲು ಕೇಳಿದ್ದರು. ಜೊತೆಗೆ ಇನ್ನೂ 5 ಜಿಲ್ಲೆಯವರೂ ಮನವಿ ಮಾಡಿದ್ದರು. ಆದರೆ, ಚಾಮರಾಜನಗರ ಜಿಲ್ಲೆಗೆ ಈ ಅವಕಾಶ ಸಿಕ್ಕಿರುವುದು ನಮ್ಮೆಲ್ಲರ ಪುಣ್ಯವಾಗಿದೆ. ಆದ್ದರಿಂದ ಎಲ್ಲರ ಸಹಕಾರದೊಂದಿಗೆ ಸಮ್ಮೇಳನವನ್ನು ಯಶಸ್ವಿಗೊಳಿಸೋಣ ಎಂದರು. ಮಧುಸೂದನ್ ಅವರು ಮಾತನಾಡಿ, ಹರವೆ ಹೋಬಳಿಯ ಗ್ರಾಮಸ್ಥರು ಧಮ್ಮ ಪಯಣವನ್ನು ಅದ್ದೂರಿಯಿಂದ ಸ್ವಾಗತಿಸಬೇಕು ಎಂದು ಕೋರಿದರು. ಮೂಡ್ನಾಕೂಡು ಪ್ರಕಾಶ್ ಅವರು ಮಾತನಾಡಿ, ಈ ಸಮ್ಮೇಳನವನ್ನು 56ಕ್ಕೂ ಹೆಚ್ಚು ರಾಷ್ಟ್ರಗಳು ವೀಕ್ಷಣೆ ಮಾಡುವುದರಿಂದ ಜಿಲ್ಲೆಯಲ್ಲಿ ಇದರ ಯಶಸ್ಸಿಗೆ ನಾವೆಲ್ಲರೂ ಶ್ರಮಿಸೋಣ ಎಂದರು.

### ಶಾಂತಿ ಮತ್ತು ಕರುಣೆಯ ಸಂಕೇತ ಭಗವಾನ್ ಬುದ್ಧ

ಕಳೆದ ವರ್ಷ ಮೈಸೂರಿನಲ್ಲಿ ಬೌದ್ಧ ಸಮ್ಮೇಳನ ಯಶಸ್ವಿಯಾಗಿ ನಡೆದಿದ್ದು, ಚಾಮರಾಜನಗರದಲ್ಲೂ ಈ ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನ ಯಶಸ್ವಿಯಾಗಲಿದೆ. ಎಲ್ಲರೂ ಒಗ್ಗಟ್ಟಿನಿಂದ ಸೇರಿ ಇದನ್ನು ಬಹಳ ಅರ್ಥಪೂರ್ಣವಾಗಿ ಆಚರಿಸಬೇಕು ಹಾಗೂ ಹೆಚ್ಚಿನ ಮಟ್ಟದಲ್ಲಿ ಪ್ರಚಾರ ಆಗಬೇಕು. ಬೌದ್ಧ ಧರ್ಮ ಇಂದು ಕೇವಲ ಒಂದು ಧರ್ಮಕ್ಕೆ ಸೀಮಿತವಾಗಿಲ್ಲ. ಭಗವಾನ್ ಬುದ್ಧರು ಶಾಂತಿ, ಕರುಣೆ ಹಾಗೂ ಪ್ರೀತಿಯ ಸಂಕೇತವಾಗಿದ್ದಾರೆ. ಹಾಗಾಗಿ ನಾವೆಲ್ಲರೂ ಅಂಬೇಡ್ಕರ್ ಮತ್ತು ಬುದ್ಧರ ಮೂಲ ತತ್ವ ಹಾಗೂ ಸಿದ್ಧಾಂತಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

# ಮೂಲಸೌಕರ್ಯಕ್ಕಾಗಿ ಡಿಸಿಗೆ ಮನವಿ



ಚಾಮರಾಜನಗರ, ನಗರಸಭೆ ವ್ಯಾಪ್ತಿಯ ಎಲ್ಲಾ ವಾರ್ಡ್ಗಳಿಗೂ ಕುಡಿಯುವ ನೀರಿಗೆ ಹಾಗೂ ಕುಂದುಕೊರತೆಗಳು ಬಹಳಷ್ಟು ಸಮಸ್ಯೆಯಾಗಿದೆ ಎಂದು ಕರ್ನಾಟಕ ಅಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ ಕೆ.ವೀರಭದ್ರಸ್ವಾಮಿ ಹಾಗೂ ವಾರ್ಡ್ನ ಮುಖಂಡರು ಜಿಲ್ಲಾಧಿಕಾರಿಗೆ ಮನವಿ ಮಾಡಿದರು.

ಈಬಾರಿ ಮಳೆಯು ಕೈ ಕೊಟ್ಟ ಕಾರಣ ಭೂಮಿ ಯಲ್ಲಿ ಅಂತರ್‌ಜಲ ಇಲ್ಲದ ಕಾರಣ ಬೋರ್ ವೇಲ್‌ಗಳಲ್ಲಿ ನೀರು ಕಡಿಮೆಯಾದ ಕಾರಣ ಎಲ್ಲ ನಗರಸಭೆ ವಾರ್ಡ್ಗಳಲ್ಲಿ ನೀರಿನ ತೊಂದರೆಯಾಗಿದೆ ಎಂದು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದರು. ನಗರದ ಎಲ್ಲಾ ವಾರ್ಡ್ಗಳಲ್ಲಿ ಹಲವಾರು ತೊಂದರೆಗಳು ಇದ್ದರು ಅದನ್ನು ಸರಿಪಡಿಸಲು ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಸಾರ್ವಜನಿಕರ ಕೆಲಸವನ್ನು ಮಾಡಲು ನಗರಸಭೆಯ ಅಧಿಕಾರಿಗಳು ಪೋನ್ ಕರೆಗಳನ್ನು ಸ್ವೀಕರಿಸುತ್ತಿಲ್ಲ ಅವರಿಗೆ ಸೂಚನೆ ನೀಡಬೇಕೆಂದು ಮನವಿ ಮಾಡಿದರು.

ಜಿಲ್ಲಾಧಿಕಾರಿಗಳ ಕರೆಗೆ ಅಗಮಿಸಿದ ನಗರ ಸಭೆಯ ಜಿಲ್ಲಾ ನಗರಾಭಿವೃದ್ಧಿ ಕೋಶಧಿಕಾರಿ ಮತ್ತು ಪೌರಯುಕ್ತ, ಇಂಜಿನೀಯರ್‌ಗಳು ಸೋಮವಾರಪೇಟೆಯ 1 ಮತ್ತು 2ನೇ ವಾರ್ಡ್ಗಳಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಕುಡಿಯುವ ನೀರಿಗಾಗಿ ಹೊಸದಾಗಿ 2ಬೋರ್‌ವೆಲ್ ಮತ್ತು ಹಳೆಯ ಬೋರ್‌ಗಳು ರಸ್ತೆ, ಚರಂಡಿಗಳನ್ನು ಸರಿಪಡಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಅಭಿವೃದ್ಧಿ ಹೋರಾಟ ಸಮಿತಿ ಕಾನೂನು ಸಲಹೆಗಾರರಾದ ಮಹದೇವಸ್ವಾಮಿ, ಉಪಾಧ್ಯಕ್ಷರಾದ ರಾಜಪ್ಪ, ವೃಷಭೇಂದ್ರಪ್ಪ, ಕೋಶಾಧ್ಯಕ್ಷರಾದ ಎಂ.ನಂಜುಂಡಸ್ವಾಮಿ, ಕಾರ್ಯದರ್ಶಿಗಳಾದ ಉಡಿಗಾಲ ಮಲ್ಲೇಶ್, ಬೂದಂಬಳ್ಳಿ ವೀರಭದ್ರಸ್ವಾಮಿ, ಮರಿಯಾಲ ಚಂದ್ರು, ಕುದೇರು ಪುಟ್ಟಸ್ವಾಮಿ, ಸಂತೇಮರಳ್ಳಿ ಮಹದೇವಪ್ರಸಾದ್, ಗ್ರಾಮಸ್ಥರಾದ ನಾಗರಾಜು, ಸಿದ್ದರಾಜು, ಮಹದೇವಪ್ಪ, ರಾಚಯ್ಯ ಇನ್ನು ಮುಂತಾದವರು ಹಾಜರಿದ್ದರು.

# ಶೂನ್ಯ ಶಕ್ತಿಯ ಶೀತಲೀಕರಣ ಕೊಠಡಿ



ಚಾಮರಾಜನಗರ : ಮಂಡ್ಯ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಅಧೀನದ ಚಾಮರಾಜನಗರ ಕೃಷಿ ಮಹಾವಿದ್ಯಾಲಯದ ಅಂತಿಮ ವರ್ಷದ ಬಿ.ಎಸ್ಸಿ. (ಕೃಷಿ) ವಿದ್ಯಾರ್ಥಿಗಳು ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮ 2026?27ರ ಅಂಗವಾಗಿ ಉಮ್ಮತ್ತೂರು ಗ್ರಾಮದಲ್ಲಿ ರೈತರಿಗೆ ಶೂನ್ಯ ಶಕ್ತಿಯ ಶೀತಲೀಕರಣ ಕೊಠಡಿ ಕುರಿತು ಪ್ರಾತ್ಯಕ್ಷಿಕೆ ನಡೆಸಿದರು.

ವಿದ್ಯಾರ್ಥಿಗಳಾದ ಮುತ್ತಪ್ಪ ಮತ್ತು ಮಹೇಶ್ ಅವರು ಜೆಡ್ ಇ ಸಿಸಿಯ ನಿರ್ಮಾಣ ವಿಧಾನ, ಉಪಯೋಗಗಳು ಹಾಗೂ ಪ್ರಯೋಜನಗಳನ್ನು ರೈತರಿಗೆ ವಿವರಿಸಿದರು. ಇಟ್ಟಿಗೆ, ಮರಳು ಮತ್ತು ನೀರಿನ ಆವಿಯಾಗುವಿಕೆಯ ತಂಪು ಪರಿಣಾಮದ ಮೂಲಕ ವಿದ್ಯುತ್ ಬಳಕೆಯಿಲ್ಲದೆ ಹಣ್ಣು ಮತ್ತು ತರಕಾರಿಗಳನ್ನು ತಾಜಾವಾಗಿ ಸಂರಕ್ಷಿಸಲು ಜೆಡ್ ಇ ಸಿಸಿಸಹಕಾರಿಯಾಗಿದೆ ಎಂದು ತಿಳಿಸಿದರು.

ಕಡಿಮೆ ವೆಚ್ಚ, ಸರಳ ನಿರ್ಮಾಣ, ಕಡಿಮೆ ನಿರ್ವಹಣೆ ಹಾಗೂ ಕೊಯ್ಲಿನ ನಂತರದ ನಷ್ಟವನ್ನು ಕಡಿಮೆ ಮಾಡುವಲ್ಲಿ ಜೆಡ್ ಇಸಿಸಿ ಮಹತ್ವವನ್ನು ವಿದ್ಯಾರ್ಥಿಗಳು ವಿವರಿಸಿದರು. ರೈತರು ಸಕ್ರಿಯವಾಗಿ ಭಾಗವಹಿಸಿ ತಮ್ಮ ಪ್ರಶ್ನೆ ಹಾಗೂ ಸಂದೇಹಗಳನ್ನು ಕೇಳಿ, ವಿದ್ಯಾರ್ಥಿಗಳಿಂದ ಪರಿಹಾರ ಪಡೆದರು. ಕಾರ್ಯಕ್ರಮವು ರೈತರಿಗೆ ಉಪಯುಕ್ತ ಹಾಗೂ ಯಶಸ್ವಿಯಾಗಿ ನಡೆಯಿತು.

**ಶಿಕ್ಷಕ ದಿನಾಚರಣೆ ಸಮಾರಂಭ**

# ಸಮಾಜದಲ್ಲಿ ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠವಾದದ್ದು: ಕಾಡಾಧ್ಯಕ್ಷ ಪಿ.ಮರಿಸ್ವಾಮಿ



ಚಾಮರಾಜನಗರ: ವಿದ್ಯಾರ್ಥಿಗಳಲ್ಲಿ ಅಜ್ಞಾನದ ಕತ್ತಲೆಯನ್ನು ದೂರಮಾಡಿ ಜ್ಞಾನದ ಬೆಳಕು ಮೂಡಿಸುವ ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠವಾಗಿದೆ ಎಂದು ಕಾಡಾಧ್ಯಕ್ಷ ಪಿ.ಮರಿಸ್ವಾಮಿ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ, ಜಿ.ಪಂ., ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಛೇರಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಾಗೂ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳ ಕಚೇರಿ ವತಿಯಿಂದ ನಡೆದ ಶಿಕ್ಷಕ ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಡಾ.ಸರ್ವೇಪಲ್ಲಿ ರಾಧಾಕೃಷ್ಣನ್ ಅವರು ಭಾರತ ಎರಡನೇ ರಾಷ್ಟ್ರಪತಿಯಾಗಿ, ಪ್ರಸಿದ್ಧ ತತ್ವಜ್ಞಾನಿ ವಹಾನ್ ಶಿಕ್ಷಣ ತಜ್ಞರಾಗಿದ್ದರು. ಅವರ ಜನ್ಮದಿನ ಸೆಪ್ಟೆಂಬರ್ 5 ರಂದು ದೇಶದಲ್ಲಿ ಶಿಕ್ಷಕರ ದಿನಚರಣೆಯನ್ನು ಆಚರಿಸಲಾಗುತ್ತದೆ. ಸಾವಿತ್ರಿಬಾಯಿಸುಲೆ ಅವರು ದೇಶ ಮೊದಲ ಮಹಿಳಾ ಶಿಕ್ಷಕಿಯಾಗಿ 18ಕ್ಕೂ ಹೆಚ್ಚು ಶಾಲೆಗಳನ್ನು ಸ್ಥಾಪಿಸಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿದರು ಎಂದರು.

ದೇಶ ಒಬ್ಬ ಉತ್ತಮ ಪ್ರಜೆಯನ್ನುನಿರ್ಮಾಣ ಮಾಡುವವರು ಶಿಕ್ಷಕರು. ದೇಶವು ಪ್ರಗತಿಯಲ್ಲಿ ಸಾಗಬೇಕಾದರೆ, ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಗಳಿಸಬೇಕಾದರೆ ಶಿಕ್ಷಕರ ಪರಿಶ್ರಮವೇ ಕಾರಣವಾಗಿದೆ. ಶಿಕ್ಷಣಕ್ಕೆ ಒತ್ತು ಕೊಡುವ ದೇಶವು ಉತ್ತಮ ಸ್ಥಿತಿಯಲ್ಲಿರುತ್ತದೆ. ಅಂತಹ ಒಬ್ಬ ಶಿಕ್ಷಕ ಮಕ್ಕಳ ಭವಿಷ್ಯಕ್ಕೆ ಬೆಳಕು ಚೆಲ್ಲಿ ಸುಂದರನಾಡು ಕಟ್ಟುವ ಶಿಲ್ಪಿಗಳೇ ಶಿಕ್ಷಕರಾಗಿದ್ದಾರೆ. ಎಲ್ಲರಿಗೂ ಈ ಮೂಲಕ ಶಿಕ್ಷಕರ ದಿನಾಚರಣೆ ಶುಭಾಶಯಗಳನ್ನು ಕೋರಿದರು.

ಶಾಲಾ ಇಲಾ ಖೆಯ ಉಪನಿರ್ದೇಶಕ ಚಂದ್ರಪಾಟೀಲ್ ಮಾತನಾಡಿದರು

**ಜಿಲ್ಲಾ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿ ಪ್ರದಾನ:** ಚಿನ್ನಸ್ವಾಮಿ. ಎಸ್. ಸಹ ಶಿಕ್ಷಕರು, ಸರ್ಕಾರಿ ಕಿರಿಯ ಪಾಥಮಿಕ ಶಾಲೆ ಹಲ್ಲೇಪುರ ಚಾಮರಾಜನಗರ ತಾಲೂಕು, ನಾಗಮಲ್ಲೇಶ್ ಸಹ ಶಿಕ್ಷಕರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮಲ್ಲಹಳ್ಳಿಮಾಳ ಕೊಳ್ಳೇಗಾಲ ತಾಲ್ಲೂಕು, ಮುರುಗ. ಜಿ ಸಹ ಶಿಕ್ಷಕರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಯರಂಬಾಡಿ, ಹನೂರು ತಾಲ್ಲೂಕು, ಸಿದ್ದರಾಜು ಸಹ ಶಿಕ್ಷಕರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮದ್ದೂರು, ಗುಂಡ್ಲುಪೇಟೆ ತಾಲ್ಲೂಕು, ವಿಜಯಲಕ್ಷ್ಮಿ ಸಹ ಶಿಕ್ಷಕರು ಸರ್ಕಾರಿ ಕಿರಿಯ ಉರ್ದು ಪ್ರಾಥಮಿಕ ಶಾಲೆ ಗುಂಬಳ್ಳಿ, ಯಳಂದೂರು ತಾಲ್ಲೂಕು.

ಹಿರಿಯ ಪ್ರಾಥಮಿಕ ಶಾಲಾ ವಿಭಾಗದಲ್ಲಿ ಪ್ರಸಾದ್ ಸಹ ಶಿಕ್ಷಕರು ಸರ್ಕಾರಿ ಹಿರಿಯ ಪಾಥಮಿಕ ಶಾಲೆ ಉಡಿಗಾಲ ಚಾಮರಾಜನಗರ ತಾಲ್ಲೂಕು, ಮಹದೇವ ಎನ್. ಮುಖ್ಯ ಶಿಕ್ಷಕರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕುಣಗಳ್ಳಿ, ಕೊಳ್ಳೇಗಾಲ ತಾಲ್ಲೂಕು ರಂಗಸ್ವಾಮಿ, ಎನ್. ಸಹ ಶಿಕ್ಷಕರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗೊರೆಸಾಣೆ ಹನೂರು ತಾಲ್ಲೂಕು, ನಂದೀಶ್, ಜಿ ಸಹ ಶಿಕ್ಷಕರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ದೇಶಿಪುರ ಗುಂಡ್ಲುಪೇಟೆ ತಾಲ್ಲೂಕು, ಜಯಪ್ರಕಾಶ್.ಪಿ ಸಹ ಶಿಕ್ಷಕರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಯರಿಯೂರು–1 ಯಳಂದೂರು ತಾಲ್ಲೂಕು,

ಪ್ರೌಢಶಾಲಾ ವಿಭಾಗದಲ್ಲಿ ಗುರುಸಿದ್ದಾಚಾರಿ. ಜಿ.ಕೆ ಸಹ ಶಿಕ್ಷಕರು ಜಿ.ಎಸ್ ಎಸ್. ಪ್ರೌಢಶಾಲೆ ಉಮ್ಮತ್ತೂರು ಚಾಮರಾಜನಗರ ತಾಲ್ಲೂಕು, ಪ್ರದೀಪ್ ಕುಮಾರ. ಎಸ್, ಆದರ್ಶ ವಿದ್ಯಾಲಯ ಮುಡಿಗುಂಡ, ಕೊಳ್ಳೇಗಾಲ ತಾಲೂಕು, ಮಲ್ಲೇಶ.ಕೆ.ವಿ. ಸರ್ಕಾರಿ ಪ್ರೌಢಶಾಲೆ ಶಾಗ್ಯ, ಹನೂರು ತಾಲೂಕು. ಜೆ.ಎಸ್. ಹರೀಶ್ ಕುಮಾರ್, ಸರ್ಕಾರಿ ಪ್ರೌಢಶಾಲೆ, ಭೀಮನಬೀಡು, ಗುಂಡ್ಲುಪೇಟೆ ತಾಲೂಕು, ಲಕ್ಷ್ಮಿ. ಎಲ್.ಎನ್, ಸರ್ಕಾರಿ ಪ್ರೌಢಶಾಲೆ, ಗುಂಬಳ್ಳಿ, ಯಳಂದೂರು ತಾಲ್ಲೂಕು ಅವರಿಗೆ ಪ್ರದಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ. ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಶೆಟ್ಟಿ, ಬಿಆರ್ ಸಿ ರಾಜೀವ್, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಮಹದೇವಸ್ವಾಮಿ, ಜಿಲ್ಲಾ ಉಪಾಧ್ಯಕ್ಷೆ ಭವಾನಿದೇವಿ, ನೌಕರ ಸಂಘದ ಖಜಾಂಚಿ ಶಿವಕುಮಾರಯ್ಯ, ತಾಲೂಕು ಅಧ್ಯಕ್ಷ ಸಿ.ಕೆ.ರಾಮಸ್ವಾಮಿ, ಕಾರ್ಯದರ್ಶಿ ಸುಧಾ, ಉಪಾಧ್ಯಕ್ಷ ಹೆಚ್.ಎಂ. ಧನಂಜಯ್, ಸಿ.ಎಂ. ಸುಶೀಲ ಖಜಾಂಚಿ ಸಮೀವುಲ್ಲಾ, ಸಂಘಟನಾ ಕಾರ್ಯದರ್ಶಿ ಶ್ವೇತ, ಬಿ.ಎಸ್.ಲತಾ, ಜಿಲ್ಲಾ ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ವೀರಭದ್ರಸ್ವಾಮಿ, ಕಾರ್ಯದರ್ಶಿ ಕಿರಣ್ ರಾಜು, ಕಾರ್ಯದರ್ಶಿ ಶಂಕರ್, ಸರ್ಕಾರಿ ನೌಕರರ ಸಂಘದ ಹಿರಿಯ ಉಪಾಧ್ಯಕ್ಷ ಎಂ.ಡಿ.ಮಹದೇವಯ್ಯ, ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ತಮ್ಮಯ್ಯ, ತಾಲೂಕು ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಶೇಖರ್, ನಿರ್ದೇಶಕ ಮಲ್ಲಿಕಾರ್ಜುನ, ಆನಂದ್. ನಟರಾಜು, ಮಹೇಶ್, ಸ್ಯಮನ್, ದೊಡ್ಡರಾಜು, ನಂಜುಂಡಸ್ವಾಮಿ, ಮುರುಗೇಶ್, ಶಬಾನ ಅಂಜುಂ, ಶಾಂತರಾಜು ಹಾಗೂ ಶಿಕ್ಷಕರ ಸಂಘಗಳ ಅಧ್ಯಕ್ಷ ರು, ಪದಾಧಿಕಾರಿಗಳು ಭಾಗವಹಿಸಿದ್ದರು.

# ಶಿಕ್ಷಕರು ಜ್ಞಾನದ ಬೆಳಕು ನೀಡಿ ಜೀವನ ರೂಪಿಸುತ್ತಾರೆ



ರಾಮನಗರ: ಜ್ಞಾನವನ್ನು ತುಂಬುವ ಕೆಲಸವನ್ನು ಶಿಕ್ಷಕರು ನಿಸ್ವಾರ್ಥವಾಗಿ ಮಾಡಿದ್ದರಿಂದಲೇ ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತಿದೆ. ವಿದ್ಯಾರ್ಥಿಗಳ ಜೀವನವನ್ನು ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವವಾದದ್ದು ಎಂದು ಶಾಸಕ ಹೆಚ್.ಎ. ಇಕ್ಬಾಲ್ ಹುಸೇನ್ ತಿಳಿಸಿದರು.

ನಗರದ ಕೃ?ಸ್ಮೃತಿ ಕಲ್ಯಾಣ ಮಂಟಪದಲ್ಲಿ ಶನಿವಾರ ತಾಲ್ಲೂಕು ಆಡಳಿತ ಮತ್ತು ಪ್ರಾಥಮಿಕ ಶಿಕ್ಷಕರ ಸಂಘ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆಯನ್ನು ಉದ್ಘಾಟಿಸಿ, ನಿವೃತ್ತ ಶಿಕ್ಷಕರನ್ನು ಸನ್ಮಾನಿಸಿ ಅವರು ಮಾತನಾಡಿದರು. ನಮ್ಮ ಸಂಸ್ಕೃತಿಯಲ್ಲಿ ಗುರುವಿಗೆ ದೇವರ ಸ್ಥಾನವನ್ನು ನೀಡಲಾಗಿದೆ. ಹೆತ್ತವರು ನಮಗೆ ಜನ್ಮ ನೀಡಿದರೆ, ಶಿಕ್ಷಕರು ನಮಗೆ ಜ್ಞಾನದ ಬೆಳಕನ್ನು ನೀಡಿ ಜೀವನವನ್ನು ರೂಪಿಸುತ್ತಾರೆ ಎಂದು ಹೇಳಿದರು.

ಕೇವಲ ಪಠ್ಯಪುಸ್ತಕದ ಜ್ಞಾನವನ್ನ?ೕ ಅಲ್ಲದೆ, ಸಮಾಜದಲ್ಲಿ ಉತ್ತಮ ಪ್ರಜೆಯಾಗಿ ಬದುಕಲು ಬೇಕಾದ ನೈತಿಕ ಮೌಲ್ಯಗಳು, ಶಿಸ್ತು ಮತ್ತು ಸಂಸ್ಕಾರವನ್ನು ಶಿಕ್ಷಕರು ಕಲಿಸುತ್ತಾರೆ. ಮಣ್ಣಿನ ಮುದ್ದೆಯಂತಿರುವ ಮಗುವನ್ನು ಸುಂದರ ಮೂರ್ತಿಯನ್ನಾಗಿ ಕೆತ್ತುವ ಶಿಲ್ಪಿ ಶಿಕ್ಷಕ. ನಮ್ಮ ಯಶಸ್ಸಿನ ಹಿಂದೆ ಸದಾ ಶ್ರಮಿಸುವ, ನಮ್ಮ ತಪ್ಪುಗಳನ್ನು ತಿದ್ದಿ ಸರಿಯಾದ ದಾರಿ ತೋರಿಸುವ ಎಲ್ಲಾ ಗುರುಗಳ ಋಣವನ್ನು ತೀರಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಶಿಕ್ಷಕರ ಸೇವೆಯನ್ನು ಸ್ಮರಿಸಿದರು.

**ಶಿಕ್ಷಕರನ್ನು ಗೌರವಿಸಿ – ಕೆ.ಶೇಷಾದ್ರಿ**

ನಗರಸಭಾಧ್ಯಕ್ಷ ಕೆ.ಶೇ?ಾದ್ರಿ ಮಾತನಾಡಿ, ಭಾರತೀಯ ಸಂಸ್ಕೃತಿಯಲ್ಲಿ ಶಿಕ್ಷಕರಿಗೆ ಅತ್ಯುನ್ನತ ಗೌರವ ಸ್ಥಾನ ನೀಡಲಾಗಿದೆ. ಶಿಕ್ಷಕರು ಒಂದು ಮಗುವಿಗೆ ಕೇವಲ ಅಕ್ಷರ ಮಾತ್ರ ಕಲಿಸುವುದಲ್ಲ. ತಮ್ಮಲ್ಲಿರುವ ಜ್ಞಾನವನ್ನು ತುಂಬಿ ಸಮಾಜದ ಆಸ್ತಿಯನ್ನಾಗಿ, ದೇಶದ ಭವಿ?ದ ಪ್ರಜೆಯನ್ನಾಗಿ ರೂಪಿಸುವ ಬಹು ದೊಡ್ಡ ಜವಾಬ್ದಾರಿ ಶಿಕ್ಷಕರದ್ದಾಗಿದೆ. ವಿದ್ಯೆ ಕಲಿಸಿದ ಗುರುಗಳನ್ನು ಗೌರವಿಸಬೇಕಾದ ಕರ್ತವ್ಯ ನಮ್ಮೆಲ್ಲರದ್ದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಕೆ.ರಾಜು, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಾಣಕಲ್ ನಟರಾಜ್, ರಾಮನಗರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಲಿಂಗಯ್ಯ, ನಗರಸಭಾ ಸದಸ್ಯ ಬೈರೇಗೌಡ, ಶಿಕ್ಷಕರುಗಳಾದ ನೀಲಕಂಠ ಸ್ವಾಮಿ, ವಿಜಯ್ ಕುಮಾರ್, ಸುರೇಶ್, ಪ್ರಸನ್ನ, ಎಚ್.ಪಿ. ಮಹಾಲಿಂಗಯ್ಯ , ಮುನಿಯಪ್ಪ ಮುಂತಾದವರಿದ್ದರು.

## ಬೋಧನೇತರ ಕೆಲಸಗಳೇ ಹೆಚ್ಚು: ಹನುಮಯ್ಯ

ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷ ಹನುಮಯ್ಯ ಮಾತನಾಡಿ, ಸರ್ಕಾರಿ ಶಾಲೆಯ ಶಿಕ್ಷಕರು ಕೆಲಸದ ಒತ್ತಡದಿಂದ ಸಂಕ?ೆ ಅನುಭವಿಸುತ್ತಿದ್ದಾರೆ. ಮಕ್ಕಳಿಗೆ ಪಾಠ ಮಾಡುವ ಬದಲಾಗಿ ಬೋಧನೇತರ ಕೆಲಸಗಳ ಹೊರೆಯಿಂದ ಪರಿತಪಿಸುತ್ತಿದ್ದಾರೆ. ಜನಗಣತಿ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ, ಎಸ್‌ಐಆರ್ ಇತ್ಯಾದಿ ಕೆಲಸಗಳು ಶಿಕ್ಷಕರನ್ನು ಹೈರಾಣ ಮಾಡಿವೆ. ಈಗಾಗಲೇ ಶಿಕ್ಷಕರ ಒತ್ತಡವನ್ನು ತಗ್ಗಿಸಲು ಸರ್ಕಾರಕ್ಕೆ ಮನವಿ ಮಾಡಲಾಗಿದ್ದು, ವಿಧಾನ ಪರಿ?ತ್ ಸದಸ್ಯರಾದ ಪುಟ್ಟಣ್ಣ, ರಾಮೋಜಿಗೌಡ ಶಿಕ್ಷಕರ ಧ್ವನಿಯಾಗಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಜಿಲ್ಲೆಯವರಾದ ಸಿಎಂ ಡಿ.ಕೆ.ಶಿವಕುಮಾರ್ ಶಿಕ್ಷಕರ ಮೇಲಿನ ಒತ್ತಡವನ್ನು ಕಡಿಮೆ ಮಾಡಿ ಅನುಕೂಲ ಮಾಡಿಕೊಡುವ ವಿಶ್ವಾಸ ಇದೆ ಎಂದರು.

# ಮಡ್ಡಿಕೆರೆ ನಿಧನಕ್ಕೆ ಒಡನಾಡಿಗಳ ನುಡಿ ನಮನ



ಮೈಸೂರು: ಈಚೆಗೆ ನಿಧನರಾದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಗೆ ವಿವಿಧ ಸಂಘ, ಸಂಘಟನೆಗಳು ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಪ್ರತ್ಯೇಕ ಸಭೆಗಳ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದವು.

ಮೈಸೂರು ಕನ್ನಡ ವೇದಿಕೆ ವತಿಯಿಂದ ನಡೆದ ಸಭೆಯಲ್ಲಿ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಮಾತನಾಡಿ, ಸದಾ ಚಟುವಟಿಕೆಯಿಂದಿರುತ್ತಿದ್ದ ಮಡ್ಡೀಕೆರೆ ಗೋಪಾಲ್ ನಿಧನರಾಗಿದ್ದಾರೆಂಬುದನ್ನೇ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅವರು ಸದಾ ಕನ್ನಡ ಸೇವೆಯಲ್ಲಿ ತೊಡಗಿ ಕನ್ನಡದ ತೇರನ್ನು ಎಳೆಯುತ್ತಿದ್ದರು. ತಮಗೆ ಎರಡನೇ ಬಾರಿಯೂ ದೊರೆತಿದ್ದ ಕಸಾಪ ಅಧ್ಯಕ್ಷ ಸ್ಥಾನಕ್ಕೆ ನ್ಯಾಯ ದೊರಕಿಸಿಕೊಡುತ್ತಿದ್ದರೆಂದರು. ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, ಮಡ್ಡೀಕೆರೆ ಗೋಪಾಲ್ ಸತತ 4 ದಶಕಗಳಿಂದ ಮೈಸೂರಿನಲ್ಲಿ ಕನ್ನಡದ ಕೆಲಸದಲ್ಲಿ ತೊಡಗಿದ್ದರು, ಕನ್ನಡದ ವಿಷಯ ಬಂದಾಗ ನಡೆಯುವ ಹೋರಾಟಗಳಲ್ಲಿ ಮುಂಚೂಣಿಯಲ್ಲಿರುತ್ತಿದ್ದರು. ರಾಜ್ಯದಲ್ಲಿನ ಯಾವುದೇ ತಾಲ್ಲೂಕು ಘಟಕ ಮಾಡಲು ಸಾಧ್ಯವಾಗದಷ್ಟು ಕೆಲಸ ಮೈಸೂರು ತಾಲ್ಲೂಕು ಕಸಾಪ ಮಾಡುವಂತೆ ನೋಡಿಕೊಂಡರೆಂದರು. ಮತ್ತೋರ್ವ ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ ಮಾತನಾಡಿ, ಮಡ್ಡೀಕೆರೆ ಗೋಪಾಲ್ ಅವರಿಗಿದ್ದ ಕನ್ನಡ ಪ್ರೇಮ ಅನನ್ಯ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನಕ್ಕಾಗಿ, ಕಾವೇರಿ ನೀರಿನ ವಿಷಯ ಬಂದಾಗ ನಡೆದ ಹೋರಾಟಗಳಲ್ಲೂ ಸಕ್ರಿಯವಾಗಿದ್ದರೆಂದು ಸ್ಮರಿಸಿದರು. ಮೋಹನ್‌ಕುಮಾರ್ ಗೌಡ, ಎಸ್.ಬಾಲಕೃಷ್ಣ, ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ ಮೊದಲಾದವರು ಇದ್ದರು.

**▸▸ ಮೈಸೂರು ಕನ್ನಡ ವೇದಿಕೆ ವತಿಯಿಂದ ಸಭೆ**

ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಮತ್ತೊಂದು ಸಭೆಯಲ್ಲಿ ಹಿರಿಯ ಕವಿ ಜಯಪ್ಪ ಹೊನ್ನಾಳಿ ಮಾತನಾಡಿ, ಮಡ್ಡೀಕೆರೆ ಗೋಪಾಲ್ ಪರಿಷತ್ ಕಾರ್ಯಕ್ರಮಗಳನ್ನ ಗ್ರಾಮೀಣ ಪ್ರದೇಶಕ್ಕೂ ಕೊಂಡೊಯ್ದರು. ಕನ್ನಡ ಪ್ರೇಮ ಹೊಂದಿರುವ ಕನ್ನಡೇತರರೂ ಪರಿಷತ್ ಚಟುವಟಿಕೆಗಳಲ್ಲಿ ತೊಡಗುವಂತೆ ನೋಡಿಕೊಂಡರೆಂದು ಸ್ಮರಿಸಿದರು. ಹಿರಿಯ ರಂಗಕರ್ಮಿ ರಾಜೇಶೇಖರ ಕದಂಬ ಮಾತನಾಡಿದರು. ಟ್ರಸ್ಟ್ ಅಧ್ಯಕ್ಷ ಬಿಎಸ್.ಜಯರಾಮರಾಜು, ಡಾ.ವೈ.ಡಿ.ರಾಜಣ್ಣ, ಎಂ.ಚಂದ್ರಶೇಖರ್, ಲತಾ ಬಾಲಕೃಷ್ಣ ಇದ್ದರು.

# ಆಹಾರ ಮೇಳ ಮಳಿಗೆ: ಲಾಟರಿ ಆಯ್ಕೆಗೆ ವಿರೋಧ



ಮೈಸೂರು: ಈ ಬಾರಿಯ ದಸರಾ ಮಹೋತ್ಸವ ವೇಳೆಯ ಆಹಾರ ಮೇಳದಲ್ಲಿ ಲಾಟರಿ ಮೂಲಕ ಮಳಿಗೆ ನೀಡುವುದಾಗಿ ಜಿಲ್ಲಾಡಳಿತ ಪಟ್ಟು ಹಿಡಿದಿರುವುದು ಸರಿಯಲ್ಲ. ಏಕೆಂದರೆ ಈಗಾಗಲೇ ಸುಮಾರು 700 ಅರ್ಜಿಗಳು ಬಂದಿವೆ. ಒಬ್ಬೊಬ್ಬರೇ 10 ರಿಂದ 15 ಅರ್ಜಿ ಹಾಕಿದ್ದು, ಇವರಿಗೆ ತಲಾ ಮರ ನಾಲ್ಕು ಮಳಿಗೆ ಸಿಕ್ಕಿದಲ್ಲಿ ಇವರು ಇತರರಿಗೆ ಮಾರಿಕೊಳ್ಳುವ ಸಾಧ್ಯತೆ ಇದೆ. ಹೀಗಾಗಿ ಕಳೆದ ಬಾರಿಯಂತೆ ಮಳಿಗೆ ನೀಡುವ ಪದ್ಧತಿ ಅನುಸರಿಸಲಿ ಎಂದು ದಸರಾ ಆಹಾರ ಮೇಳ ತಿಂಡಿ ತಿನಿಸುಗಳ ಮಾರಾಟಗಾರರ ಸಂಘದ ಅಧ್ಯಕ್ಷ ಎಸ್.ನಾಗರಾಜು ಮನವಿ ಮಾಡಿದರು.

**▸▸ ಈಗಾಗಲೇ ಸುಮಾರು 700 ಅರ್ಜಿಗಳು ಬಂದಿವೆ**
**▸▸ ಒಬ್ಬೊಬ್ಬರೇ 10 ರಿಂದ 15 ಅರ್ಜಿ ಹಾಕಿದ್ದು,**

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕೆಲ ದಿನಗಳ ಹಿಂದೆ ಇದೇ ರೀತಿ ಮನವಿ ಮಾಡಿಕೊಂಡಿದ್ದರೂ ಜಿಲ್ಲಾಡಳಿತ ಸ್ಪಂದಿಸದಿರುವುದು ಬೇಸರದ ಸಂಗತಿಯಾಗಿದೆ. ಏಕ ವ್ಯಕ್ತಿಗಳಿಂದಲೇ ಹಲವಾರು ಅರ್ಜಿ ಹಾಕಿ, ಲಾಟರಿ ಮೂಲಕ ಅವರಿಗೆ ತಲಾ ಮರ?ನಾಲ್ಕು ಮಳಿಗೆ ಬಂದಲ್ಲಿ ಅವರು ಅದನ್ನು ಮಾರಿಕೊಳ್ಳುವ ಸಾಧ್ಯತೆಯಿದೆ. ಇದರಿಂದಾಗಿ ದಸರಾ ಆಹಾರ ಮೇಳವನ್ನೇ ನಂಬಿಕೊಂಡಿರುವವರಿಗೆ ದೊಡ್ಡ ಹೊಡೆತ ಬೀಳುತ್ತದೆ. ಹೀಗಾಗಿ ಕಾರ್ಯಾಧ್ಯಕ್ಷರೇ ಮಂಜೂರು ಮಾಡುವ ಹಿಂದಿನ ಪದ್ಧತಿ ಮುಂದುವರಿಯಲಿ. ಜೊತೆಗೆ ಶುಲ್ಕ ಸಹಾ ಹಿಂದಿನ ವರ್ಷದಷ್ಟೇ ಇರಲಿ. ಈ ಬಾರಿ ಹೆಚ್ಚಳ ಮಾಡಲಾಗುವ ಚಿಂತನೆ ನಡೆದಿರುವುದು ಸರಿಯಲ್ಲ ಎಂದರು. ಕಳೆದ 10– 15 ವರ್ಷಗಳಿಂದ ದಸರಾ ಆಹಾರ ಮೇಳದಲ್ಲಿ ಮಳಿಗೆ ಹಾಕುತ್ತಿರುವವರಿಗೆ ಪ್ರಾಧಾನ್ಯತೆ ನೀಡಲಿ, ಫೈವ್ ಸ್ಟಾರ್ ಹೋಟೆಲ್, ದೊಡ್ಡ ದೊಡ್ಡ ಉದ್ಯಮಿಗಳಿಗೆ ಅವಕಾಶ ನೀಡಿದಲ್ಲಿ ದರ ಹೆಚ್ಚು ಮಾಡಿ ಜನಸಾಮಾನ್ಯರಿಗೆ ಹೊರೆಯಾಗುತ್ತದೆ ಎಂದು ಎಚ್ಚರಿಸಿದರು. ಇನ್ನಿತರ ಪದಾಧಿಕಾರಿಗಳಾದ ಶಾಂತಮ್ಮ, ಸಂತೋಷ್, ಶಿವಸಿದ್ದು, ಶಿವಸ್ವಾಮಿ ಇದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ನಿಘಂಟು ಯೋಜನೆ ಮುಂದುವರೆಸುವೆ

## ಕಸಾಪ ಚುನಾವಣೆ, ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಜಾಣಗೆರೆ ವೆಂಕಟರಾಮಯ್ಯ



ರಾಮನಗರ: ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ತಾವು ಆಯ್ಕೆಯಾದರೆ, ದಶಕಗಳ ಹಿಂದೆ ನಿಂತು ಹೋಗಿರುವ ಕನ್ನಡ–ಕನ್ನಡ ನಿಘಂಟು ಯೋಜನೆಯನ್ನು ಮುಂದುವರೆಸುವುದು, ಜಿಲ್ಲಾಮಟ್ಟದಲ್ಲಿ ಪುಸ್ತಕ ಸಂತೆಗೆ ಮರುಜೀವ ಮುಂತಾದ ಕನ್ನಡ ಪರ ಕಾರ್ಯಕ್ರಮಗಳನ್ನು ರೂಪಿಸುವುದಾಗಿ ಕೇಂದ್ರ ಕಸಾಪ ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಜಾಣಗೆರೆ ವೆಂಕಟರಾಮಯ್ಯ ತಿಳಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ನೆಲ, ಜಲ, ಭಾಷೆಯ ಉಳಿವಿಗಾಗಿ ಪರಿಷತ್ತಿನಿಂದ ಹೋರಾಟ ರೂಪಿಸುವುದು ಸೇರಿದಂತೆ ಹಲವು ಆಶಯಗಳನ್ನು ಮುಂದಿಟ್ಟುಕೊಂಡು ಚುನಾವಣೆಯಲ್ಲಿ ಸ್ಪರ್ಧೆ ನಡೆಸುತ್ತಿರುವುದಾಗಿ ಹೇಳಿದರು.

ಇಂದು ಕನ್ನಡ ಸಾಹಿತ್ಯ ಪರಿಷತ್ತನ್ನು ಇಂದು ಪುನರ್ ನಿರ್ಮಾಣ ಮಾಡಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ, ಅದರ ಗೌರವ ಕಾಪಾಡಬೇಕಾಗಿದೆ. ಕಳೆದ ಹತ್ತು ವರ್ಷಗಳಿಂದ ಪರಿಷತ್ತಿಗೆ ಅಂಟಿಕೊಂಡಿರುವ ಕೊಳೆಯನ್ನು ತೊಳೆಯಬೇಕಾಗಿದೆ. ಪರಿಷತ್ತಿನಲ್ಲಿ 6.5 ಕೋಟಿ ರೂ ಅವ್ಯವಹಾರ ಸೇರಿದಂತೆ ಹಲವಾರು ಹಗರಣಗಳ ಪ್ರಕರಣಗಳು ನ್ಯಾಯಾಲಯದ ಮುಂದೆ ಇದೆ. ಕಸಾಪಕ್ಕೆ ಜಿಡ್ಡು ಹಿಡಿದಿದೆ. ಪರಿಷತ್ತಿಗೆ ಹೊಸ ರೂಪ ನೀಡಲು ಎಲ್ಲರ ಸಹಕಾರದಲ್ಲಿ ಮುಂದಾಗಿರುವುದಾಗಿ ತಿಳಿಸಿದರು.

ನೆಲ, ಜಲ, ಭಾಷೆಗೆ ದುಡಿದವರು ಹಲವು ಹೋರಾಟಗಾರರನ್ನು ಅಧ್ಯಕ್ಷರನ್ನಾಗಿ ಪಡೆದ ಕನ್ನಡ ಸಾಹಿತ್ಯ ಪರಿಷತ್ ಇಂದು ಅತ್ಯಂತ ಸಂಕಷ್ಟ ಪರಿಸ್ಥಿತಿಯಲ್ಲಿದ್ದು ಅದಕ್ಕೆ ಮತ್ತೆ ಜೀವ ತುಂಬುವ ಕೆಲಸ ಆಗಬೇಕಾಗಿದೆ. ಕಸಾಪ ಮತದಾನದ ಸಂದರ್ಭದಲ್ಲಿ ಎಲ್ಲಾ ಸದಸ್ಯರು ಹೆಚ್ಚು ಸೂಕ್ಷ್ಮವಾಗಿ ಕೆಲಸ ಮಾಡಬೇಕು. ಎಲ್ಲರೂ ಭಾಷೆಯ ಉಳಿವಿಗಾಗಿ ಹೋರಾಟ ನಡೆಸಬೇಕು ಎಂದರು.

ಕಸಾಪ ಜಿಲ್ಲಾಧ್ಯಕ್ಷ ಬಿ.ಟಿ. ನಾಗೇಶ್, ಹಿರಿಯ ಪತ್ರಕರ್ತ ಸು.ತ. ರಾಮೇಗೌಡ, ಕಸಾಪ ನಿಕಟಪೂರ್ವ ಕೋಶಾಧ್ಯಕ್ಷ ಎಚ್.ಪಿ. ನಂಜೇಗೌಡ, ನಿಕಟಪೂರ್ವ ಜಿಲ್ಲಾಧ್ಯಕ್ಷ ಬಿ.ಟಿ. ಚಿಕ್ಕಪುಟ್ಟೇಗೌಡ, ಕಸಾಪ ಮಂಜೇಶ್‌ಬಾಬು, ಜಾಲಮಂಗಲ ನಾಗಭೂಷಣ್, ತುಂಬೇನಹಳ್ಳಿ ಯಕ್ಷರಾಜು, ಹುಣಸನಹಳ್ಳಿ ಕೆಂಪರಾಜು, ರೈತ ಸಂಘದ ಶಿವಕುಮಾರ್, ಜಯಕುಮಾರ್, ರಂಗಾಯಣ ಸುಮಂಗಲ ಸಿದ್ಧರಾಜು, ಕಲಾವಿದ ದೊಡ್ಡಲಿಂಗಪ್ಪ, ಸ್ವಾಮಿಆನಂದ, ಲಕ್ಕಸಂದ್ರ ಮಹದೇವ್, ಮತ್ತಿಕೆರೆ ಚಲುವರಾಜು ಇದ್ದರು.

### ಕಸಾಪದಲ್ಲಿ ಜಾತಿ, ಪಕ್ಷಕ್ಕೆ ಅವಕಾಶ ಬೇಡ

**▸▸ ಸಿ.ಕೆ.ರಾಮೇಗೌಡ**

**ಕನ್ನಡಪರ ಹೋರಾಟಗಾರ ಸಿ.ಕೆ. ರಾಮೇಗೌಡ ಮಾತನಾಡಿ ಜಾತ್ಯಾತೀತ, ಪಕ್ಷಾತೀತವಾಗಿ ಕೆಲಸ ಮಾಡಬೇಕಾದ ಕಸಾಪದಲ್ಲಿ ಇಂದು ಜಾತಿ, ಪಕ್ಷದ ನೆಲೆ ಗಟ್ಟಿಯಾಗುತ್ತಿರುವುದು ಉತ್ತಮ ಬೆಳವಣಿಗೆಯಲ್ಲ. ಇಂತಹ ಸಂದರ್ಭದಲ್ಲಿ ಹೋರಾಟಗಾರ ಹಾಗೂ ಪತ್ರಕರ್ತ ಜಾಣಗೆರೆ ವೆಂಕಟರಾಮಯ್ಯ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವ ಮೂಲಕ ಪರಿಷತ್ತಿಗೆ ಹೊಸರೂಪ ನೀಡಬೇಕಾಗಿದೆ ಎಂದರು.**

### ಸಂದಿಗ್ಧ ಪರಿಸ್ಥಿತಿ– ಡಾ.ಬಂಜಗೆರೆ ಜಯಪ್ರಕಾಶ್

**ಸಾಹಿತಿ ಡಾ. ಬಂಜಗೆರೆ ಜಯಪ್ರಕಾಶ್ ಮಾತನಾಡಿ ಕಸಾಪ ಚುನಾವಣೆ ಇಂದು ಬದಲಾದ ಸ್ವರೂಪ ಪಡೆದುಕೊಂಡಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸರಿಯಾದ ಕಾರ್ಯಸೂಚಿಯನ್ನು ಮುಂದಿಟ್ಟುಕೊಂಡು ಕಸಾಪ ಸದಸ್ಯರನ್ನು ತಲುಪಬೇಕಾಗಿದೆ. ಜಾಣಗೆರೆ ವೆಂಕಟರಾಮಯ್ಯ ಅವರಿಗೆ ತಮ್ಮದೆ ಆದ ವರ್ಚಸ್ಸು ಇದ್ದು ಇದನ್ನು ಮತಗಳಾಗಿ ಪರಿವರ್ತಿಸುವ ಕಡೆಗೆ ಗಮನನೀಡಬೇಕು ಎಂದು ಕಿವಿಮಾತು ಹೇಳಿದರು.**

### ಜಾಣಗೆರೆಯವರದ್ದು ಪಾರದರ್ಶಕ ವ್ಯಕ್ತಿತ್ವ

**ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಜಿ. ಸಿದ್ಧರಾಮಯ್ಯ ಮಾತನಾಡಿ ಪರಿಷತ್ತು ಇಂದು ಭ್ರಷ್ಟಾಚಾರದಿಂದ ತುಂಬಿ ತುಳುಕುತ್ತಿದೆ. ರಾಜಕೀಯ ಪಕ್ಷಗಳ ರೀತಿಯಲ್ಲಿ ಇಂದು ಕಸಾಪ ಚುನಾವಣೆಗಳು ನಡೆಯುತ್ತಿರುವುದು ಆತಂಕ ಸೃಷ್ಟಿಸಿದೆ. ಇಂತಹ ಸನ್ನಿವೇಶದಲ್ಲಿ ಪಾರದರ್ಶಕ ವ್ಯಕ್ತಿತ್ವದ ಜಾಣಗೆರೆ ವೆಂಕಟರಾಮಯ್ಯ ಅವರು ಸೂಕ್ತ ವ್ಯಕ್ತಿ. ಕಸಾಪದಲ್ಲಿ ಕಳೆದ ಹತ್ತು ವರ್ಷಗಳಿಂದ ಸರ್ವಾಧಿಕಾರಿ ಧೋರಣೆ ಹೆಚ್ಚಾಗುತ್ತಿದೆ. ಪರಿಷತ್ತಿನ ಕಾರ್ಯವೈಖರಿ ಪ್ರಶ್ನೆ ಮಾಡುವವರ ಹೆಸರನ್ನೆ ಸದಸ್ಯತ್ವದ ಪಟ್ಟಿಯಿಂದ ಕೈಬಿಡಲಾಗಿದೆ. ಪರಿಷತ್ತಿನ ಉಳಿವಿಗೆ ಇಂದು ಪಣತೊಡದಿದ್ದರೆ ಮುಂದಿನ ಕೆಲವೇ ವರ್ಷಗಳಲ್ಲಿ ಪರಿಷತ್ತು ನಿರ್ನಾಮವಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.**

### ಕನ್ನಡ ಶಾಲೆಗಳ ಉಳಿವಿಗೆ ಆದ್ಯತೆ ಬೇಕು

**ರಾಮನಗರದ ಪ್ರೊಫೆಸರ್ ವಿ.ಎಚ್. ರಾಜಶೇಖರ್ ಮಾತನಾಡಿ ಇಂದು ಗ್ರಾಮೀಣ ಭಾಗದಲ್ಲಿ ಸರ್ಕಾರಿ ಶಾಲೆಗಳು ಮಕ್ಕಳಿಲ್ಲದೆ ಮುಚ್ಚಿ ಹೋಗುತ್ತಿವೆ. ಇಂತಹ ಸಂದರ್ಭದಲ್ಲಿ ಕನ್ನಡ ನೆಲ, ಜಲ, ಭಾಷೆಗಾಗಿ ಹೋರಾಟ ನಡೆಸುವುದರ ಜೊತೆಗೆ ಕನ್ನಡ ಶಾಲೆಗಳ ಉಳಿವಿಗೂ ಸಹ ಹೋರಾಟ ನಡೆಸಬೇಕಾಗಿದೆ. ಇಡೀ ವಿಶ್ವದಲ್ಲಿ ಸುಂದರ ಲಿಪಿಯನ್ನು ಹೊಂದಿರುವ ಏಕೈಕ ಭಾಷೆಯ ಸ್ಥಾನಮಾನ ಹೊಂದಿರುವ ಕನ್ನಡ ಭಾಷೆ ನಮ್ಮದು ಎಂದು ಹೇಳಿಕೊಳ್ಳುವುದೇ ಒಂದು ಹೆಮ್ಮೆಯ ವಿಷಯ ಎಂದು ಅಭಿಪ್ರಾಯಪಟ್ಟರು.**



**ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಪಟ್ಟಣ ಸಹಕಾರಿ ಬ್ಯಾಂಕುಗಳ ಒಕ್ಕೂಟದ 50ನೇ ವಾರ್ಷಿಕ ಮಹಾಸಭೆಯಲ್ಲಿ ರಾಷ್ಟ್ರೀಯ ನಗರ ಸಹಕಾರಿ ಬ್ಯಾಂಕುಗಳು ಮತ್ತು ಸಾಲ ಸಂಘಗಳ ಒಕ್ಕೂಟ ಲಿಮಿಟೆಡ್ ಅಧ್ಯಕ್ಷ ಹಾಗೂ ಮಾಜಿ ಸಚಿವ ಹೆಚ್.ಕೆ.ಪಾಟೀಲರನ್ನು ಭೇಟಿಯಾದ ಮೈಸೂರಿನ ದಿ ಮೈಸೂರು ಕೋಅಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿ ಅಭಿನಂದಿಸಿತು. ಚಿತ್ರದಲ್ಲಿ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ನಿರ್ದೇಶಕರಾದ ಎನ್. ಯೋಗಾನಂದ್, ಆರ್.ಸೋಮಣ್ಣ, ಪಡುವಾರಹಳ್ಳಿ ಎಂ.ರಾಮಕೃಷ್ಣ ಭಾಗವಹಿಸಿದ್ದರು.**

# ಪ್ರತಿಯೊಬ್ಬರು ಮಹನೀಯರನ್ನು ಸ್ಮರಿಸಲು ಸಲಹೆ



ಚಾಮರಾಜನಗರ: ಸಮಾಜಮುಖಿ ಕೆಲಸಗಳನ್ನು ಮಾಡಿದ ಮಹನೀಯರನ್ನು ಪ್ರತಿಯೊಬ್ಬರು ಸ್ಮರಿಸಬೇಕು ಎಂದು ಜಿಲ್ಲಾ ಕುಂಬಾರರ ಸಂಘದ ಜಿಲ್ಲಾಧ್ಯಕ್ಷ ಹಾಗೂರಾಜ್ಯ ಅಸಂಘಟಿತ ಸಣ್ಣ ಕಾಯಕ ಸಮಾಜಗಳ ಜಾಗೃತಿ ವೇದಿಕೆಯ ಅಧ್ಯಕ್ಷರಾದ ಮದ್ದೂರು ವಿರೂಪಾಕ್ಷ ಅವರು ತಿಳಿಸಿದರು.

ನಗರದ ದೇವಾಂಗ ಬೀದಿಯ 2ನೇ ತಿರುವಿನಲ್ಲಿರುವ ಚೌಡೇಶ್ವರಿ ದೇವಾಲಯದ ಸಭಾಂಗಣದಲ್ಲಿ ಜಿಲ್ಲಾ ಕುಂಬಾರರ ಸಂಘದಿಂದ ಏರ್ಪಡಿಸಿದ್ದ ಶಿಕ್ಷಕರ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿದರು.

ರಾಷ್ಟ್ರಪತಿ, ತತ್ವಶಾಸ್ತ್ರಜ್ಞ, ಕುಲಪತಿ, ಪ್ರಾಧ್ಯಾಪಕರಾಗಿದ್ದ ರಾಧಾಕೃಷ್ಣನ್ ಅವರು ಶೈಕ್ಷಣಿಕ ಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದ್ದರು. ಆದ್ದರಿಂದಲೇ ಅವರ ಹುಟ್ಟಿದ ದಿನವನ್ನು ಶಿಕ್ಷಕರ ದಿನವಾಗಿ ಆಚರಿಸ ಲಾಗುತ್ತಿದೆ ಎಂದು ತಿಳಿಸಿದರು. ಶಿಕ್ಷಕರು ಇಲ್ಲದಿದ್ದರೆ ವೈದ್ಯರು, ವಿಜ್ಞಾನಿಗಳು ಸೇರಿದಂತೆ ಯಾರೂ ಇರುವುದಿಲ್ಲ. ಶಿಕ್ಷಕರು ಮಕ್ಕಳಿಗೆ ಮನಸ್ಸಿನಿಂದ ಹಾಗೂ ಹೃದಯದಿಂದ ಮಾತನಾಡುವುದನ್ನು ಕಲಿಸಬೇಕು. ಓದಿನ ಜೊತೆಗೆ ಸಂಸ್ಕಾರ ಕಲಿಸಬೇಕು ಎಂದು ಸಲಹೆ ನೀಡಿದರು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಸಿದ್ದಲಿಂಗಸ್ವಾಮಿ ಅವರು, ಶಿಕ್ಷಕ ವೃತ್ತಿಗೆ ತನ್ನದೆ ಆದ ಗೌರವವಿದೆ. ಒಬ್ಬ ವಿದ್ಯಾರ್ಥಿ ಒಳ್ಳೆಯವನಾಗಲು ಅಥವಾ ಕೆಟ್ಟವನಾಗಲು ಶಿಕ್ಷಕರು ಕೂಡ ಕಾರಣರು ಎಂದು ತಿಳಿಸಿದರು.

ಅಂದಿನ ಹಾಗೂ ಇಂದಿನ ಶಿಕ್ಷಣಕ್ಕೆ ವ್ಯತ್ಯಾಸವಿದೆ. ಹಿಂದೆ ವಿದ್ಯಾರ್ಥಿಗಳು ಗಮನವಿಟ್ಟು ಕಲಿಯುತ್ತಿದ್ದರು. ಈಗ ಅಂತಹ ವಾತಾವರಣವಿಲ್ಲ. ಆದರೂ ಶಿಕ್ಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು ಎಂದು ತಿಳಿಸಿದರು. ಸಮಾರಂಭದಲ್ಲಿ ಶಿಕ್ಷಕರಾದ ಪುಟ್ಟರಾಜು, ಎನ್. ರಾಘವೇಂದ್ರ, ಡಿ.ಸಿ.ಛಾಯಾ, ಎ.ಬಿ.ರಾಘವೇಂದ್ರ ಅವರನ್ನು ಶಾಲು ಹೊದಿಸಿ ನೆನಪಿ ಕಾಣಿಕೆ ನೀಡಿ ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಸಾದ್ ಎಸ್.ಲಕ್ಕೂರು, ಜಿಲ್ಲಾ ಕುಂಬಾರರ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷರಾದ ರಾಜೇಂದ್ರ, ಉಪಾಧ್ಯಕ್ಷ ಶಿವಣ್ಣ ಶೆಟ್ಟಿ, ಕಾರ್ಯದರ್ಶಿ ಶಿವಣ್ಣ, ಜಿಲ್ಲಾ ಕುಂಬಾರರ ಸಂಘದ ಗೌರವಾಧ್ಯಕ್ಷ ಚಾಮರಾಜು, ಉಪಾಧ್ಯಕ್ಷರಾದ ರಮೇಶ್, ಬಿಸಲವಾಡಿ ಸಿದ್ದಮಲ್ಲು, ಮಾದಲವಾಡಿ ಮಹದೇವಶೆಟ್ಟಿ ಇತರರಿದ್ದರು.

# ತೆರಿಗೆ ಬಾಕಿದಾರರ ವಿರುದ್ಧ ಕ್ರಮಕ್ಕೆ ಸೂಚನೆ




**ಮೈಸೂರು:** ಮೂರನೇ ನೋಟಿಸ್ ಜಾರಿಗೊಳಿಸದ ಬಳಿಕವೂ ಬಾಕಿ ತೆರಿಗೆ ಪಾವತಿಸದಿದ್ದಲ್ಲಿ ಕಾನೂನು ಅನ್ವ ಜಪ್ತಿ ಮಾಡುವುದು ಸೇರಿ ಕಾನೂನು ರೀತಿ ಕ್ರಮಕ್ಕೆ ನಗರಪಾಲಿಕೆ ಆಯುಕ್ತೆ ಸವಿತಾ ಸೂಚಿಸಿದರು.

ಮಹಾನಗರ ಪಾಲಿಕೆ ವ್ಯಾಪ್ತಿಯ ತೆರಿಗೆ ಬಾಕಿದಾರರ ಕುರಿತ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಪಾಲಿಕೆ ವ್ಯಾಪ್ತಿಯ ಪ್ರತಿಯೊಂದು ವಾರ್ಡ್ನ ತೆರಿಗೆ ಬಾಕಿದಾರರ ವಿವರಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಿ, ದೀರ್ಘಕಾಲದಿಂದ ತೆರಿಗೆ ಪಾವತಿಸದೆ ಬಾಕಿ ಉಳಿಸಿಕೊಂಡಿರುವ ಆಸ್ತಿಗಳ ಕುರಿತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು. ಸರ್ಕಾರದ ನಿಯಮಗಳು ಹಾಗೂ 2025ರ ರಾಜ್ಯಪತ್ರ ಅಧಿಸೂಚನೆಯನ್ವಯ, ತೆರಿಗೆ ಬಾಕಿದಾರರಿಗೆ ನಿಗದಿತ ಕಾನೂನು ಪ್ರಕ್ರಿಯೆಯಂತೆ ಮೊದಲನೇ ನೋಟಿಸ್, ಎರಡನೇ ನೋಟಿಸ್ ಹಾಗೂ ಮೂರನೇ ನೋಟಿಸ್ ಜಾರಿಗೊಳಿಸಬೇಕು. ಈ ನೋಟಿಸ್‌ಗಳನ್ನು ಜಾರಿಗೊಳಿಸಿದ ನಂತರವೂ ಬಾಕಿ ತೆರಿಗೆಯನ್ನು ಪಾವತಿಸದಿದ್ದಲ್ಲಿ, ಅನ್ವಯಿಸುವ ಕಾನೂನು ನಿಯಮಗಳನ್ವಯ ಆಸ್ತಿಯನ್ನು ಜಪ್ತಿ ಮಾಡುವುದೂ ಸೇರಿದಂತೆ ಮುಂದಿನ ಕಾನೂನು ಕ್ರಮಗಳನ್ನು ಕೈಗೊಳ್ಳಲು ಅವಕಾಶವಿದೆ ಎಂದರು.

ಈ ಹಿನ್ನೆಲೆಯಲ್ಲಿ, ತೆರಿಗೆ ಬಾಕಿ ಇರುವ ಪ್ರಕರಣಗಳಲ್ಲಿ ನೋಟಿಸ್ ಜಾರಿ ಪ್ರಕ್ರಿಯೆಯನ್ನು ಇದೇ ತಿಂಗಳ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ನಿಗದಿತ ಅವಧಿಯಲ್ಲಿಯೂ ತೆರಿಗೆ ಪಾವತಿಸದ ಪ್ರಕರಣಗಳಲ್ಲಿ ನಿಯಮಾನುಸಾರ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು. ಹೆಚ್ಚುವರಿ ಆಯುಕ್ತೆ ವೀಣಾ, ಉಪ ಆಯುಕ್ತ (ಕಂದಾಯ) ಸೋಮಶೇಖರ್ ಇತರರು ಸಭೆಯಲ್ಲಿದ್ದರು.

## ಅಬ್ದುಲ್ ಅಜೀಜ್ ದೀನಾ ಹೇಳಿಕೆ | ರೋಟರಿ ಸಂಸ್ಥೆಯಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ

# ಕಣ್ಣಿನ ಆರೋಗ್ಯದತ್ತ ಗಮನಹರಿಸಿ



ಚಾಮರಾಜನಗರ: ರೋಟರಿ ಸಂಸ್ಥೆ ವತಿಯಿಂದ ನಗರದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು.

ನಗರದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿರುವ ರೋಟರಿ ಭವನದಲ್ಲಿ ರೋಟರಿ ಸಂಸ್ಥೆ, ಅರವಿಂದ ಕಣ್ಣಿನ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣೆ ಶಿಬಿರದಲ್ಲಿ 230 ಮಂದಿ ತಪಾಸಣೆ ಮಾಡಿಸಿಕೊಂಡರು. 89 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದು, ಅವರನ್ನು ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಶಿಬಿರದಲ್ಲಿ ವ್ಯವಸ್ಥೆ ಮಾಡಲಾಯಿತು. ರೋಟರಿ ಅಧ್ಯಕ್ಷ ಅಬ್ದುಲ್ ಅಜೀಜ್ ದೀನಾ ಮಾತನಾಡಿ, ದೇಹದ ಮುಖ್ಯ ಅಂಗವಾದ ಕಣ್ಣಿನ ಆರೋಗ್ಯದ ಕಡೆಗೆ ಪ್ರತಿಯೊಬ್ಬರೂ ಗಮನ ನೀಡಬೇಕು ಕಣ್ಣಿನ ಆರೋಗ್ಯದ ಕಡೆ ಗಮನಹರಿಸುವುದು ಇಂದಿನ ಡಿಜಿಟಲ್ ಯುಗದಲ್ಲಿ ಅತ್ಯಗತ್ಯವಾಗಿದೆ. ಈ ಶಿಬಿರಕ್ಕೆ ಹೊರ ಜಿಲ್ಲೆಗಳಿಂದ ಜನತೆ ಬರುತ್ತಿದ್ದು, ಶಿಬಿರದ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ. ಪ್ರತಿ ತಿಂಗಳು ಮೊದಲನೆಯ ಭಾನುವಾರ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಅಯೋಜಿಸುತ್ತಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶಿಬಿರದ ಪ್ರಯೋಜನ ಪಡೆಯುತ್ತಿರುವುದು ತುಂಬಾ ಸಂತಸವಾಗಿದ್ದು,ಮುಂದಿನ ಶಿಬಿರದ ಸದುಪಯೋಗವನ್ನು ಜನತೆ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಕಾರ್ಯದರ್ಶಿ ಜಿ.ಅಂಕಶೆಟ್ಟಿ, ಖಜಾಂಚಿ ಆರ್.ಎಂ.ಸ್ವಾಮಿ, ಸಂಸ್ಥಾಪಕ ಸದಸ್ಯರಾದ ಜಿ.ಆರ್.ಅಶ್ವಥ್ ನಾರಾಯಣ್, ನಿರ್ಗಮಿತ ಅಧ್ಯಕ್ಷ ಕಾಗಲವಾಡಿ ಚಂದ್ರು, ನೇಮಿರಾಜ್, ರೋಟರಿಯನ್ ಮೇರಿ ಅಲಿಸ್, ಮಾಜಿ ಅಧ್ಯಕ್ಷರಾದ ಎಂ.ಕಮಲ್ ರಾಜ್ , ವಿ. ಪ್ರಭಕರ್, ಶ್ರೀನಿವಾಸ್ ಎಸ್‌ಆರ್‌ಎಸ್,ಸಿ.ಎ. ನಾರಾಯಣ್, ಮೋಹನ್, ಎಲ್.ನಾಗರಾಜು, ಡಿ.ನಾಗರಾಜು, ಸದಸ್ಯರಾದ ಶ್ರೀನಿಧಿಕುದರ್, ಮಹಾದೇವಸ್ವಾಮಿ, ಮಾಜಿ ಸದಸ್ಯ ಪ್ರಭುರಾಮು, . ವೈದ್ಯರುಗಳಾದ ಡಾ.ಜಾರ್ಜ್,ಡಾ. ಡೆನ್ನಿ ಪ್ರಸಾದ್, ಡಾ.ಸಿಮ್ಮನ್ ಸುಸಾನ್, ಡಾ.ಕಾಜಲ್ ಪಾಟೀಲ್,ಪಿ ಆರ್ ಓ ವಿಜಯಕಾಂತ್, ಮನೋಜ್, ಸವಿತಾ ಇತರರು ಹಾಜರಿದ್ದರು.

# ಹಾರಂಗಿ ನಾಲೆಗಳಿಗೆ ನೀರು ಬಿಡುಗಡೆ

**ಮಡಿಕೇರಿ :** ಕೃಷಿ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಪಿ.ಎಂ.ನರೇಂದ್ರಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಹಾರಂಗಿ ಜಲಾಶಯ ನೀರಾವರಿ ಸಲಹಾ ಸಮಿತಿ ಸಭೆಯ ತೀರ್ಮಾನದಂತೆ ಖಾರೀಫ್ ಬೆಳೆಗಳಿಗೆ ನಾಲೆಗಳಲ್ಲಿ ನೀರು ಹರಿಸಲು ತಿರ್ಮಾನಿಸಲಾಗಿದೆ.

ಅದರಂತೆ ಹಾರಂಗಿ ಜಲಾಶಯದಲ್ಲಿ ಪ್ರಸ್ತುತ ಇರುವ ನೀರಿನ ಸಂಗ್ರಹಣೆ ಮತ್ತು ಸೆಪ್ಟೆಂಬರ್ ನಿಂದ ನವೆಂಬರ್ ವರೆಗೆ ಬರಬಹುದಾದ (ಕಳೆದ 20 ವರ್ಷಗಳ ಕನಿಷ್ಟ ಒಳಹರಿವಿನ ಪ್ರಮಾಣವನ್ನು ಆಧರಿಸಿ) ನಿರೀಕ್ಷಿತ ಒಳಹರಿವಿನ ಪರಿಮಾಣ ಪರಿಗಣಿಸಿ ನವೆಂಬರ್ 30 ರ ವರೆಗೆ ಹಾರಂಗಿ ಬಲದಂಡೆ ಮತ್ತು ಎಡದಂಡೆ ನಾಲೆಗಳಲ್ಲಿ ಕಟ್ಟು ನೀರಿನ ಪದ್ಧತಿಯಲ್ಲಿ (ಮಾಹೆಯಲ್ಲಿ 20 ದಿನ ನೀರನ್ನು ಹರಿಸುವುದು ಉಳಿದ 10 ದಿನ ನೀರನ್ನು ನಿಲ್ಲಿಸುವುದು) ಕೇವಲ ಖಾರೀಫ್ ಅರೆ-ಖುಷ್ಕಿ ಬೆಳೆಗಳಿಗೆ ಮಾತ್ರ ನೀರು ಹರಿಸಲಾಗುವುದು ಎಂದು ಹಾರಂಗಿ ಜಲಾಶಯದ ಅಧೀಕ್ಷಕ ಎಂಜಿನಿಯರ್ ಸತೀಶ್ ಅವರು ತಿಳಿಸಿದ್ದಾರೆ.

ಜಲಾಶಯಕ್ಕೆ ನೀರಿನ ಒಳಹರಿವು ಕ್ಷೀಣಿಸಿದ್ದಲ್ಲಿ ಪರಿಷ್ಕರಣೆಗೆ ಒಳಪಡುತ್ತದೆ. ಹಾರಂಗಿ ಜಲಾಶಯದ ವ್ಯಾಪ್ತಿಗೆ ಬರುವ ಅಚ್ಚುಕಟ್ಟುದಾರರು ನೀರಾವರಿ ಅಧಿಕಾರಿಗಳೊಡನೆ ಸಹಕರಿಸುವಂತೆ ಅಧೀಕ್ಷಕ ಎಂಜಿನಿಯರ್ ಸತೀಶ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ವಿಶೇಷ ಮನವಿ: ಹಾರಂಗಿ ಜಲಾಶಯದ ನೀರಾವರಿ ಸಲಹಾ ಸಮಿತಿ ಸಭೆಯ ಆದೇಶ ಆಧರಿಸಿ ಯಾವುದೇ ದೀರ್ಘಾವಧಿ ಬೆಳೆಯಾದ ಭತ್ತ ಮತ್ತು ಕಬ್ಬು ಬೆಳೆ ಬೆಳೆಯದಂತೆ ರೈತ-ಬಾಂಧವರಲ್ಲಿ ವಿನಂತಿಸಲಾಗಿದೆ.

ಭತ್ತ ಮತ್ತು ಕಬ್ಬಿಗೆ ಬದಲಾಗಿ ಅರೆ-ಖುಷ್ಕಿ ಬೆಳೆಗಳಾದ ಕಡಿಮೆ ನೀರು ಬಳಸಿ ಬೆಳೆಯಬಹುದಾದ ಬೆಳೆಗಳನ್ನು ಬೆಳೆಯಲು ಈ ಮೂಲಕ ತಿಳಿಸಲಾಗಿದೆ.

# ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ದಸರಾ ಕ್ರೀಡಾ ಕೂಟ

**ಮಡಿಕೇರಿ:** ಪ್ರಸಕ್ತ ಸಾಲಿನಲ್ಲಿ ಪುರುಷ ಹಾಗೂ ಮಹಿಳೆಯರಿಗೆ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟ ಹಾಗೂ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ ಸ್ಪರ್ಧೆಯು ಸೆಪ್ಟೆಂಬರ್, 16 ರಿಂದ 24 ರವರೆಗೆ ಇಲಾಖಾ ವತಿಯಿಂದ ನಡೆಯಲಿದೆ.

ಮಡಿಕೇರಿ ತಾಲ್ಲೂಕಿಗೆ ಸೆಪ್ಟೆಂಬರ್, 16 ರಂದು ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ, ಕುಶಾಲನಗರ ತಾಲ್ಲೂಕಿಗೆ ಸೆಪ್ಟೆಂಬರ್, 17 ರಂದು ಕೂಡಿಗೆಯ ಸೈನಿಕ ಶಾಲೆ ಹಾಗೂ ಕ್ರೀಡಾ ಶಾಲೆ ಮೈದಾನದಲ್ಲಿ, ಸೋಮವಾರಪೇಟೆ ತಾಲ್ಲೂಕಿಗೆ ಸೆಪ್ಟೆಂಬರ್, 18 ರಂದು ಕೂಡಿಗೆಯ ಕ್ರೀಡಾ ಶಾಲೆಯ ಮೈದಾನ ಮತ್ತು ಸೈನಿಕ ಶಾಲೆಯಲ್ಲಿ ಸೆಪ್ಟೆಂಬರ್, 19 ರಂದು ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದ(ಫುಟ್‌ಬಾಲ್) ಹಾಗೂ ಜೂನಿಯರ್ ಕಾಲೇಜು ಆಟದ ಮೈದಾನದಲ್ಲಿ, ವಿರಾಜಪೇಟೆ ತಾಲ್ಲೂಕಿನಲ್ಲಿ ಸೆಪ್ಟೆಂಬರ್, 20 ರಂದು ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದ (ಫುಟ್‌ಬಾಲ್) ಹಾಗೂ ಜೂನಿಯರ್ ಕಾಲೇಜು ಆಟದ ಮೈದಾನದಲ್ಲಿ ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟ ನಡೆಯಲಿದೆ.

ಸೆಪ್ಟೆಂಬರ್, 24 ರಂದು ಕೂಡಿಗೆ ಕ್ರೀಡಾ ಶಾಲೆ ಮೈದಾನದಲ್ಲಿ ಹಾಗೂ ಕೂಡಿಗೆ ಸೈನಿಕ ಶಾಲೆ ಮತ್ತು ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ ನಡೆಯಲಿದೆ. ಈ ಕ್ರೀಡಾಕೂಟಗಳಲ್ಲಿ ಜಿಲ್ಲೆಯ ಆಯಾಯ ತಾಲ್ಲೂಕಿನ ಕ್ರೀಡಾಪಟುಗಳು ಭಾಗವಹಿಸಬಹುದು.

ಜಿಲ್ಲೆಯ ಆಸಕ್ತ ಪುರುಷ ಹಾಗೂ ಮಹಿಳಾ ಹಾಕಿಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ತಾಲ್ಲೂಕು ಮಟ್ಟದ ದಸರಾ ಹಾಗೂ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸುವಂತೆ ಕೋರಿದೆ.

ಹೆಚ್ಚಿನ ಮಾಹಿತಿಗೆ ಮಡಿಕೇರಿ ತಾಲ್ಲೂಕು ಮಹಾಬಲ 9980887499. ಮನು 9480032712, ಸೋಮವಾರಪೇಟೆ ಮತ್ತು ಕುಶಾಲನಗರ ತಾಲ್ಲೂಕು ವೆಂಕಟೇಶ್ 9844326007, ಸುರೇಶ್ 8892272972, ಪ್ರದೀಪ್ 9342563014, ಪೊನ್ನಂಪೇಟೆ ಮತ್ತು ವಿರಾಜಪೇಟೆ ಸುಬ್ಬಯ್ಯ 8197790350, ಗಣಪತಿ 8951287301 ನ್ನು ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿ.ಟಿ.ವಿಸ್ಮಯಿ ಅವರು ತಿಳಿಸಿದ್ದಾರೆ.

ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟಕ್ಕೆ ಆನ್‌ಲೈನ್ ನೋಂದಣಿ ಕಡ್ಡಾಯ ಪೋರ್ಟಲ್ (ಜಛಿಚಿಡಿಚಿಛಿಟಛಿಣಿಟಿಟ) ಆಯಾಯ ತಾಲ್ಲೂಕಿನ ಕ್ರೀಡಾಪಟುಗಳು ತಮ್ಮ ತಾಲ್ಲೂಕಿನ ಕ್ರೀಡಾ ಕೂಟದಲ್ಲಿ ಮಾತ್ರ ಭಾಗವಹಿಸಬಹುದು. ಒಂದು ತಾಲ್ಲೂಕಿನಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಮತ್ತೊಂದು ತಾಲ್ಲೂಕಿನಲ್ಲಿ ಭಾಗವಹಿಸಲು ಅವಕಾಶ ಇಲ್ಲ. ಹಾಗೆ ಕಂಡುಬಂದಲ್ಲಿ ಅಂತಹ ಕ್ರೀಡಾಪಟುಗಳನ್ನು ಅನರ್ಹಗೊಳಿಸಲಾಗುತ್ತದೆ. ಆಧಾರ್ ಕಾರ್ಡ್ ಪ್ರತಿ ಕಡ್ಡಾಯವಾಗಿ ತರಬೇಕು. ಆಯಾಯ ದಿನದಂದು ಬೆಳಗ್ಗೆ 9.30 ರ ಒಳಗೆ ಕಡ್ಡಾಯವಾಗಿ ಸ್ಥಳದಲ್ಲಿ ನೋಂದಾಯಿಸಿಕೊಳ್ಳಬೇಕು, ತೀರ್ಪುಗಾರರ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.

# ಸೆ.08 ರಂದು ವಿದ್ಯುತ್ ವ್ಯತ್ಯಯ

**ಮಡಿಕೇರಿ:** 66/33/11 ಕೆ.ವಿ. ಎಂಯುಎಸ್‌ಎಸ್ ಮಗ್ಗುಲ ವಿದ್ಯುತ್ ವಿತರಣಾ ಉಪ ಕೇಂದ್ರದಿಂದ ಹೊರಹೊಮ್ಮುವ ಮಾರ್ಗದಲ್ಲಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿ ನಡೆಸಬೇಕಿರುವುದರಿಂದ ಸೆಪ್ಟೆಂಬರ್, 08 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ವಿರಾಜಪೇಟೆ ಪಟ್ಟಣ, ಬಿಟ್ಟಂಗಾಲ, ಬಿ.ಶೆಟ್ಟಿಗೇರಿ, ಆರ್ಜಿ, ಬೇಟೋಳಿ, ಕದನೂರು, ಕಾಕೋಟುಪರಂಬು, ಕೆದಮುಳ್ಳೂರು, ಅಮ್ಮತ್ತಿ, ಕಾರ್ಮಾಡು, ಸಿದ್ದಾಪುರ, ಮಾಲ್ದಾರೆ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಸೆಸ್ಕ್ ಇಇ ರಾಮಚಂದ್ರ ಅವರು ಕೋರಿದ್ದಾರೆ.

# ಸೆ.09 ರಂದು ಲೋಕಾಯುಕ್ತದಿಂದ ದೂರು ಅರ್ಜಿ ಸ್ವೀಕಾರ

**ಮಡಿಕೇರಿ:** ಕರ್ನಾಟಕ ಲೋಕಾಯುಕ್ತ ಮಡಿಕೇರಿಯ ಲೋಕಾಯುಕ್ತ ಅಧಿಕಾರಿಗಳು ಸೆಪ್ಟೆಂಬರ್, 09 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಮಡಿಕೇರಿ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಲೋಕಾಯುಕ್ತ ಕಾಯಿದೆಯಡಿ ದೂರು ಅರ್ಜಿ ಸ್ವೀಕರಿಸಲಿದ್ದಾರೆ. ಭರ್ತಿ ಮಾಡಿದ ಮತ್ತು ನೋಟರಿಯಿಂದ ಅಫಿಡವಿಟ್ ಮಾಡಿಸಿದ ಅರ್ಜಿ ಸ್ವೀಕರಿಸಲಿದ್ದಾರೆ.

ಸರ್ಕಾರಿ ಕಚೇರಿಗಳಲ್ಲಿ ಅಧಿಕೃತ ಕೆಲಸಗಳಲ್ಲಿ ವಿಳಂಬ ಹಾಗೂ ಇನ್ನಿತರ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ/ ನೌಕರರ ವಿರುದ್ಧ ಸಾರ್ವಜನಿಕರು ದೂರುಗಳನ್ನು ನಿಗದಿತ ಪತ್ರದಲ್ಲಿ ನೀಡಬಹುದಾಗಿದೆ. ಸಾರ್ವಜನಿಕರು ಈ ಅವಕಾಶ ಸದುಪಯೋಗಪಡಿಸಿಕೊಳ್ಳಲು ಕೋರಿದೆ. ಹೆಚ್ಚಿನ ವಿವರಗಳಿಗೆ ಮಡಿಕೇರಿ ಲೋಕಾಯುಕ್ತ ಪೊಲೀಸ್ ಕಚೇರಿ, ಗೌಳಿಬೀದಿ, ಮಡಿಕೇರಿ ದೂ.ಸಂ.08272-295297 ನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ತಿಳಿಸಿದ್ದಾರೆ.

# ಸೆ.09 ರಂದು ವಿದ್ಯುತ್ ವ್ಯತ್ಯಯ



**ಮಡಿಕೇರಿ:** 66/11 ಕೆ.ವಿ ಮಡಿಕೇರಿ ವಿದ್ಯುತ್ ವಿತರಣಾ ಉಪಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ನಡೆಸಬೇಕಿರುವುದರಿಂದ ಸೆಪ್ಟೆಂಬರ್, 09 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಈ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ ಮಾರ್ಗಗಳಿಂದ ವಿದ್ಯುತ್ ಸರಬರಾಜಾಗುವ ಮಡಿಕೇರಿ ನಗರ, ರಾಜಾಸೀಟ್, ಗದ್ದಿಗೆ, ಕೋಟೆ, ಕುಂಡಾ ಮೇಸ್ತ್ರಿ, ಓಂಕಾರೇಶ್ವರ, ಜಿ.ಟಿ.ರಸ್ತೆ, ಕೆಎಸ್‌ಆರ್‌ಟಿಸಿ, ಮೇಕೇರಿ, ಭಾಗಮಂಡಲ, ಬೋಯಿಕೇರಿ, ಸಂಪಾಜೆ, ಗಾಳಿಬೀಡು, ಮಕ್ಕಂದೂರು, ಹೆಬ್ಬೆಟ್ಟಗೇರಿ, ಕೆ.ಬಾಡಗ, ತಾಳತ್ತಮನೆ, ಬೆಟ್ಟಗೇರಿ, ಚೆಟ್ಟಿಮಾನಿ, ಚೇರಂಬಾಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಸೆಸ್ಕ್ ಇಇ ರಾಮಚಂದ್ರ ಅವರು ಕೋರಿದ್ದಾರೆ.

## ಗೌರಿ-ಗಣೇಶ ಮೂರ್ತಿಗಳ ಪ್ರತಿಷ್ಠಾಪನೆ ಮತ್ತು ವಿಸರ್ಜನೆ

# ಸೆ.13 ರೊಳಗೆ ಅನುಮತಿ ಪಡೆಯಿರಿ: ಜಿಲ್ಲಾಧಿಕಾರಿ ಸೋಮಶೇಖರ್

**ಮಡಿಕೇರಿ:** ಮುಂದಿನ ದಿನಗಳಲ್ಲಿ ವಿವಿಧ ಧಾರ್ಮಿಕ ಹಬ್ಬಗಳು ಮತ್ತು ಆಚರಣೆಗಳು ಬರಲಿದ್ದು, ಈ ಸಂದರ್ಭದಲ್ಲಿ ಶಾಂತಿ, ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ವಹಿಸಬೇಕಾದ ಕ್ರಮಗಳ ಕುರಿತು ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ ಅವರ ನೇತೃತ್ವದಲ್ಲಿ ಸಭೆ ನಡೆಯಿತು.

ನಗರದ ಜಿಲ್ಲಾಧಿಕಾರಿ ಅವರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಅವರು ಗೌರಿ ಗಣೇಶ ಹಬ್ಬ ಸಂಬಂಧ ಜಿಲ್ಲೆಯ ಹಲವು ಕಡೆಗಳಲ್ಲಿ ಗೌರಿ-ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗುತಿದ್ದು, ವಿಸರ್ಜನೆ ಸಂದರ್ಭದಲ್ಲಿ ಸರ್ಕಾರದ ನಿಯಮ ಪಾಲಿಸುವಲ್ಲಿ ಸ್ಥಳೀಯ ಮಟ್ಟದಲ್ಲಿ ಅಧಿಕಾರಿಗಳು ಮತ್ತು ಪೊಲೀಸ್ ಇಲಾಖೆಯವರು ಮಾಹಿತಿ ನೀಡುವಂತಾಗಬೇಕು ಎಂದು ಜಿಲ್ಲಾಧಿಕಾರಿ ಎಸ್. ಜೆ.ಸೋಮಶೇಖರ್ ಅವರು ಸಲಹೆ ಮಾಡಿದ್ದಾರೆ.

ಈಗಾಗಲೇ ಏಕಗವಾಕ್ಷಿ ಸಮಿತಿ ರಚಿಸಲಾಗಿದ್ದು, ಗೌರಿ-ಗಣೇಶ ಮೂರ್ತಿಗಳ ಪ್ರತಿಷ್ಠಾಪನೆ ಮತ್ತು ವಿಸರ್ಜನೆ ಸಂಬಂಧ ಸೆಪ್ಟೆಂಬರ್ 13 ರೊಳಗೆ ಅರ್ಜಿ ಸಲ್ಲಿಸಿ ಅನುಮತಿ ಪಡೆಯಬೇಕು ಎಂದು ಜಿಲ್ಲಾಧಿಕಾರಿ ಅವರು ತಿಳಿಸಿದರು.

ಏಕಗವಾಕ್ಷಿ ಸಮಿತಿಯಲ್ಲಿ ಆಯಾಯ ತಾಲ್ಲೂಕಿನ ತಹಶೀಲ್ದಾರರು ಅಧ್ಯಕ್ಷರಾಗಿ, ಪರಿಸರ ಅಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ತಾಲ್ಲೂಕಿನ ಪೊಲೀಸ್ ಅಧಿಕಾರಿಗಳು, ಲೋಕೋಪಯೋಗಿ ಇಲಾಖೆ, ಸೆಸ್ಕ್ ಇಲಾಖೆಯ ಎಇಇಗಳು, ತಾ.ಪಂ.ಇಒ ಗಳು ಮತ್ತು ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು/ ಮುಖ್ಯಾಧಿಕಾರಿಗಳು ಸದಸ್ಯರಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಜಿಲ್ಲಾಧಿಕಾರಿ ಅವರು ವಿವರಿಸಿದರು.

ಗೌರಿ-ಗಣೇಶ ಮೂರ್ತಿಗಳ ವಿಸರ್ಜನೆ ಸಂದರ್ಭದಲ್ಲಿ ಡಿಜೆಯನ್ನು ಹೆಚ್ಚು ಬಳಸುತ್ತಿದ್ದು, ಈ ಸಂದರ್ಭದಲ್ಲಿ ಮಕ್ಕಳು, ಹಿರಿಯ ನಾಗರಿಕರು ಸೇರಿದಂತೆ ಸಾರ್ವಜನಿಕರಿಗೆ ತೊಂದರೆ ಆಗದಂತೆ ಎಚ್ಚರ ವಹಿಸುವುದು ಅತ್ಯಗತ್ಯ. ಆ ನಿಟ್ಟಿನಲ್ಲಿ ಸರ್ಕಾರದ ನಿಯಮಗಳ ಬಗ್ಗೆ ಮನವರಿಕೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಅವರು ಸಲಹೆ ಮಾಡಿದರು.



ಧಾರ್ಮಿಕ ಹಬ್ಬ ಹಾಗೂ ಆಚರಣೆಗಳನ್ನು ಶ್ರದ್ಧಾಭಕ್ತಿಯಿಂದ ಆಚರಿಸಬೇಕು. ಗೌರಿ-ಗಣೇಶ ಮೂರ್ತಿಗಳನ್ನು ಪರಿಸರ ಸ್ನೇಹಿಯಾಗಿ ಪ್ರತಿಷ್ಠಾಪಿಸಿ ಪೂಜಿಸುವಂತಾಗಬೇಕು ಎಂದು ಜಿಲ್ಲಾಧಿಕಾರಿ ಅವರು ಕೋರಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಎನ್.ಬಿಂದುಮಣಿ ಅವರು ಮಾತನಾಡಿ ಗೌರಿ ಗಣೇಶ ಮೂರ್ತಿ ಪ್ರತಿಷ್ಠಾಪನೆ ಮತ್ತು ವಿಸರ್ಜನೆ ಸಂಬಂಧ ಏಕಗವಾಕ್ಷಿ ಸಮಿತಿಯ ಅನುಮತಿ ಪಡೆಯುವುದು ಕಡ್ಡಾಯವಾಗಿದೆ ಎಂದು ಹೇಳಿದರು.

ಗೌರಿ ಗಣೇಶ ವಿಸರ್ಜನೆಯ ಮೆರವಣಿಗೆ ಸಂದರ್ಭದಲ್ಲಿ ಅಗತ್ಯವಿರುವ ಕಡೆಗಳಲ್ಲಿ ಸಿಸಿಟಿವಿ ಕಡ್ಡಾಯವಾಗಿ ಅಳವಡಿಸಬೇಕು. ಮೆರವಣಿಗೆ ಸಾಗುವ ಪ್ರದೇಶದಲ್ಲಿ ಹೆಚ್ಚಿನ ಬೆಳಕು ವ್ಯವಸ್ಥೆ ಇರಬೇಕು. ವಿಸರ್ಜನೆ ಸಂದರ್ಭದಲ್ಲಿ ಜೀವರಕ್ಷಕ ಜಾಕೆಟ್ ಬಳಸಬೇಕು. ಹೀಗೆ ಏಕಗವಾಕ್ಷಿ ಸಮಿತಿಯು ಈ ಎಲ್ಲಾ ಬಗ್ಗೆ ಗಮನಿಸಿ ಮೇಲುಸ್ತುವಾರಿ ವಹಿಸಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರು ನಿರ್ದೇಶನ ನೀಡಿದರು.

ಗಣೇಶ ಮೂರ್ತಿ ವಿಸರ್ಜನೆ ಸಂದರ್ಭದಲ್ಲಿ ಬೃಹತ್ ವಾಹನದಲ್ಲಿ ಮೆರವಣಿಗೆ ಕೈಗೊಳ್ಳಲಿದ್ದು, ಈ ಸಂಬಂಧ ವಾಹನಗಳ ಅನುಮತಿ ಬಗ್ಗೆ ಸಂಬಂಧಿಸಿದವರ ಜೊತೆ ಪ್ರಾದೇಶಿಕ ಸಾರಿಗೆ ಅಧಿಕಾರಿ ಅವರು ಸಭೆ ನಡೆಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರು ಸಲಹೆ ಮಾಡಿದರು.



ಜಿಲ್ಲಾ ಪರಿಸರ ಅಧಿಕಾರಿ ಕೀರ್ತಿ ಕುಮಾರ್ ಅವರು ಮಾತನಾಡಿ ಪ್ರತಿ ವರ್ಷದಂತೆ ಈ ಬಾರಿಯು ಸ್ವರ್ಣಗೌರಿ ಹಾಗೂ ವರಸಿದ್ಧಿ ವಿನಾಯಕ ಚತುರ್ಥಿ ಹಬ್ಬವು ಸಮೀಪಿಸುತ್ತಿದ್ದು, ಈ ಸಂದರ್ಭದಲ್ಲಿ ಸಾರ್ವಜನಿಕರು ಪ್ಲಾಸ್ಟರ್ ಆಫ್ ಪ್ಯಾರಿಸ್ ಮತ್ತು ಬಣ್ಣದ ವಿಗ್ರಹಗಳನ್ನು ಬಳಸದೆ, ಮಣ್ಣಿನ ಮೂರ್ತಿಗಳನ್ನು ಪ್ರತಿಷ್ಠಾಪಿಸಬೇಕು ಎಂದು ಮನವಿ ಮಾಡಿದರು.

ಬಣ್ಣದ ಮೂರ್ತಿಗಳನ್ನು ಕೆರೆ, ಬಾವಿ ಹಾಗೂ ಇನ್ನಿತರ ನೈಸರ್ಗಿಕ ಜಲಮೂಲಗಳಿಗೆ ವಿಸರ್ಜಿಸುವುದರಿಂದ ಜಲಮೂಲ ಕಲುಷಿತಗೊಂಡು ಅವುಗಳ ಭೌತಿಕ ಹಾಗೂ ರಾಸಾಯನಿಕ ಸ್ಥಿತಿಗಳ ಬದಲಾವಣೆಯಿಂದ ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗುವುದಲ್ಲದೇ ಪ್ರಾಣಿ, ಪಕ್ಷಿ ಹಾಗೂ ಇತರೇ ಜಲಚರಗಳ ಜೀವಕ್ಕೆ ಅಪಾಯವಾಗುತ್ತದೆ, ಅಲ್ಲದೇ ಇಂತಹ ಕಲುಷಿತ ನೀರಿನಿಂದ ಸಾರ್ವಜನಿಕ ಆರೋಗ್ಯಕ್ಕೂ ಹಾನಿ ಉಂಟಾಗುತ್ತದೆ. ಆದ್ದರಿಂದ ಪರಿಸರ ಸ್ನೇಹಿ ಮೂರ್ತಿಗಳನ್ನು ಪ್ರತಿಷ್ಠಾಪಿಸುವಂತಾಗಬೇಕು ಎಂದರು.

ನೈಸರ್ಗಿಕ ಜಲಮೂಲಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ ಮತ್ತು ಬಣ್ಣ ಲೇಪಿತವಾದ ಗೌರಿ ಮತ್ತು ಗಣೇಶ ವಿಗ್ರಹಗಳನ್ನು ಕೆರೆ, ಬಾವಿ, ಕಟ್ಟೆ ಮತ್ತು ಇತರೆ ಜಲಮೂಲಗಳಲ್ಲಿ ವಿಸರ್ಜಿಸುವುದನ್ನು ನಿಷೇಧಿಸಲಾಗಿದೆ ಎಂದು ಪರಿಸರ ಅಧಿಕಾರಿ ಅವರು ತಿಳಿಸಿದರು.

ಹಿರಿಯ ಪೊಲೀಸ್ ಅಧಿಕಾರಿಗಳಾದ ಸೂರಜ್ ಮತ್ತು ಮೇದಪ್ಪ ಅವರು ಮಾತನಾಡಿ ಪೊಲೀಸ್ ಇಲಾಖೆಯಿಂದ ನಿಯಮಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಆದರೆ ಪಾಲಿಸುತ್ತಿಲ್ಲ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಸಹನಾ ಎಸ್.ಹಾದಿಮನಿ, ಪ್ರಾದೇಶಿಕ ಸಾರಿಗೆ ಅಧಿಕಾರಿ ಎಸ್.ಟಿ.ಸತೀಶ್, ಸೆಸ್ಕ್ ಕಾರ್ಯಪಾಲಕ ಎಂಜಿನಿಯರ್ ರಾಮಚಂದ್ರ, ತಹಶೀಲ್ದಾರರಾದ ಪ್ರವೀಣ್ ಕುಮಾರ್, ಶ್ರೀಧರ, ಕೃಷ್ಣಮೂರ್ತಿ, ಸಂಜನಾ, ಪೌರಾಯುಕ್ತರಾದ ಎಚ್.ಆರ್.ರಮೇಶ್, ಕೃಷ್ಣ ಪ್ರಸಾದ್, ನಾಚಪ್ಪ, ಗೋಪಿ, ಗಿರೀಶ್, ತಾ.ಪಂ.ಇಒಗಳಾದ ಶೇಖರ್, ಅಪ್ಪಣ್ಣ, ರಾಜೇಶ್, ಇತರರು ಇದ್ದರು.

ಮತ್ತಷ್ಟು ಮಾಹಿತಿ: ಸಾರ್ವಜನಿಕರು ಪರಿಸರಸ್ನೇಹಿ ಗೌರಿಗಣೇಶ ಹಬ್ಬವನ್ನು ಆಚರಿಸಿ ನೈಸರ್ಗಿಕ ಜಲ ಸಂಪನ್ಮೂಲ ಸಂರಕ್ಷಿಸಲು ಸಹಕರಿಸಬೇಕಾಗಿ ಕೋರಿದೆ.

ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಪ್ಲಾಸ್ಟರ್ ಆಫ್ ಪ್ಯಾರಿಸ್ ವಿಗ್ರಹಗಳ ತಯಾರಿಕೆ ಹಾಗೂ ಮಾರಾಟ ನಿಷೇಧಿಸಲಾಗಿದೆ. ಅನಧಿಕೃತವಾಗಿ ತಯಾರಿ/ ಮಾರಾಟ ಮಾಡುವ ವ್ಯಕ್ತಿ/ ಸಂಸ್ಥೆಗಳ ಮೇಲೆ ಕಾನೂನು ಕ್ರಮವನ್ನು ತಕ್ಷಣ ಜರುಗಿಸಲಾಗುವುದು. ಪ್ಲಾಸ್ಟರ್ ಆಫ್ ಪ್ಯಾರಿಸ್ ಹಾಗೂ ಬಣ್ಣ ಲೇಪಿತ ವಿಗ್ರಹಗಳನ್ನು ಯಾವುದೇ ನದಿ, ಕಾಲುವೆ, ಬಾವಿ ಹಾಗೂ ಇತರೆ ಜಲಮೂಲಗಳಲ್ಲಿ ವಿಸರ್ಜಿಸುವುದನ್ನು ನಿಷೇಧಿಸಲಾಗಿದೆ.

ಗೌರಿ ಹಾಗೂ ಗಣೇಶ ಹಬ್ಬದ ಸಂದರ್ಭದಲ್ಲಿ ರಾಸಾಯನಿಕ ಬಣ್ಣಗಳಿಂದ ಮಾಡಿದ ಮೂರ್ತಿಗಳ ಬದಲಾಗಿ ನೈಸರ್ಗಿಕ ವಸ್ತುಗಳಿಂದ ತಯಾರಿಸಿದ ಹಾಗೂ ನೈಸರ್ಗಿಕ ಬಣ್ಣ ಲೇಪಿತ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ವೈಜ್ಞಾನಿಕ ರೀತಿಯಲ್ಲಿ ವಿಸರ್ಜಿಸುವುದು.

ಗಣೇಶ ಮೂರ್ತಿಗಳ ವಿಸರ್ಜನೆ ಸಂದರ್ಭದಲ್ಲಿ ಹಸಿಕಸ (ಹೂವು, ಹಣ್ಣು, ಬಾಳೆಕಂಬ, ಮಾವಿನ ತೋರಣ ಇತ್ಯಾದಿ) ಹಾಗೂ ಒಣಕಸವನ್ನು ಪ್ರತ್ಯೇಕಿಸಿ ಮೂರ್ತಿಗಳೊಂದಿಗೆ ನೀರಿಗೆ ವಿಸರ್ಜಿಸದೆ ಪ್ರತ್ಯೇಕವಾಗಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಕ್ರಮವಹಿಸುವುದು. ಸಾರ್ವಜನಿಕವಾಗಿ ಇಡಲಾಗುವ ಗಣೇಶ ವಿಗ್ರಹಗಳನ್ನು, ಪ್ರತಿ ಸಮಿತಿಯವರು ಕಡ್ಡಾಯವಾಗಿ ಸ್ಥಳೀಯ ಸಂಸ್ಥೆಗಳು ಮತ್ತು ಪೋಲೀಸ್ ಇಲಾಖೆಯಿಂದ ನಿಬಂಧನೆಗೊಳಪಟ್ಟ ಅನುಮತಿಗಳನ್ನು ಪಡೆದ ನಂತರವೇ ಸ್ಥಾಪಿಸುವುದು.

ಗಣೇಶೋತ್ಸವದ ಸಂದರ್ಭದಲ್ಲಿ ಏಕಬಳಕೆ ಪ್ಲಾಸ್ಟಿಕ್ ಉಪಯೋಗಿಸುವುದನ್ನು ಹಾಗೂ ರಾತ್ರಿ 10 ರಿಂದ ಬೆಳಗ್ಗೆ 6 ಗಂಟೆಯ ತನಕ ಧ್ವನಿವರ್ಧಕಗಳ ಬಳಕೆ ನಿಷೇಧಿಸಲಾಗಿದೆ. ಗಣೇಶ ವಿಗ್ರಹಗಳ ವಿಸರ್ಜನೆಯ ಸಂದರ್ಭದಲ್ಲಿ ಹಸಿರು ಪಟಾಕಿಗಳ ಹೊರತಾಗಿ ಇತರೆ ಯಾವುದೇ ಪಟಾಕಿ ಸುಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಪರಿಸರ ಅಧಿಕಾರಿ ಕೀರ್ತಿ ಕುಮಾರ್ ಅವರು ಕೋರಿದ್ದಾರೆ.



# ಗುರು-ಶಿಷ್ಯರ ಭಾವುಕ ಸಮ್ಮಿಲನ: ಶ್ರೀಧರ್ ರವರಿಗೆ ಶಿಷ್ಯರಿಂದ ಗೌರವ

**ಮಂಡ್ಯ:** 26 ವರ್ಷಗಳ ಹಿಂದೆ ಮಂಡ್ಯ ತಾಲೂಕು ವಿ.ಸಿ. ಫಾರಂ ಸರ್ಕಾರಿ ಪ್ರೌಢಶಾಲೆಯಲ್ಲಿ ಗಣಿತ-ವಿಜ್ಞಾನ ಶಿಕ್ಷಕರಾಗಿದ್ದ ಶ್ರೀಧರಮೂರ್ತಿ(MCS) ಸರ್ ಅವರನ್ನು ಅವರ ಹತ್ತಾರು ಹಳೆಯ ವಿದ್ಯಾರ್ಥಿಗಳು ಶಿಕ್ಷಕರ ದಿನಾಚರಣೆ ಪ್ರಯುಕ್ತ ಅವರ ಮಂಡ್ಯದ ನಿವಾಸದಲ್ಲಿ ಭೇಟಿಯಾಗಿ ಭಾವಪೂರ್ಣವಾಗಿ ಗೌರವಿಸಿದರು.

ವಿಸಿ ಫಾರಂ ಶಾಲೆಯಲ್ಲಿ ಓದಿದ ಹಳೆಯ ಹತ್ತಾರು ವಿದ್ಯಾರ್ಥಿಗಳು 26 ವರ್ಷಗಳ ನಂತರ ಒಟ್ಟಿಗೆ ಸೇರಿ ತಮ್ಮ ಶಾಲಾ ದಿನಗಳ ಕಷ್ಟ-ಸುಖ, ಹರಟೆಗಳನ್ನು ಹಂಚಿಕೊಂಡು ಸಂತಸಪಟ್ಟರು. ಈ ಸಂದರ್ಭದಲ್ಲಿ ತಮ್ಮ ನೆಚ್ಚಿನ ಗುರು ಶ್ರೀಧರ್ ಅವರನ್ನು ಸನ್ಮಾನಿಸಲಾಯಿತು.

ಸನ್ಮಾನಿಸಿ ಮಾತನಾಡಿದ ಹಳೆಯ ವಿದ್ಯಾರ್ಥಿ ಮೂರ್ತಿ ಅವರು, "ಶ್ರೀಧರ್ ನಮ್ಮ ಹೆಮ್ಮೆಯ ಸರ್ ಎಂದರೆ ತಪ್ಪಾಗಲಾರದು, ಅವರು ನಮಗೆ ರೇಖಾಗಣಿತ,ಭೌತಶಾಸ್ತ್ರ ಹೇಳಿಕೊಡುತ್ತಿದ್ದರು. ಎಲ್ಲರಿಗೂ ಪ್ರೀತಿ ಪಾತ್ರರಾಗಿದ್ದರು. ವಿದ್ಯಾರ್ಥಿಗಳು ಮುಂದೆ ಕಲಿಬೇಕು, ಒಳ್ಳೆ ವಿದ್ಯಾಭ್ಯಾಸ ಮಾಡಬೇಕು, ನಿಮ್ಮ ತಂದೆ-ತಾಯಿಯರನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎಂದು ಹೇಳಿ ಹುರಿದುಂಬಿಸಿ ಪಾಠ ಮಾಡುತ್ತಿದ್ದರು. ತಪ್ಪು ಮಾಡಿದರೆ ಶಿಕ್ಷೆ ಸಹ ನೀಡುತ್ತಿದ್ದರು.ಆದರೆ ಅದು ನಮ್ಮ ಒಳಿತಿಗಾಗಿಯೇ, ಕಷ್ಟಪಟ್ಟು ಓದಿಸುತ್ತಿದ್ದರು. ನಮ್ಮ ತಂದೆ-ತಾಯಿಯರು ಕಷ್ಟಪಟ್ಟು ನಮ್ಮನ್ನು ಓದಿಸುತ್ತಿದ್ದಾರೆ, ಚೆನ್ನಾಗಿ ಓದಬೇಕು ಎಂದು ಮನದಟ್ಟು ಮಾಡುತ್ತಿದ್ದರು. ಇವತ್ತು ನಮ್ಮೆಲ್ಲರ ಸ್ನೇಹ ಬಳಗದ ವತಿಯಿಂದ ಶಿಕ್ಷಕರ ದಿನಾಚರಣೆಯ ಅಂಗವಾಗಿ ಅವರಿಗೆ ಪ್ರೀತಿಯ ಸನ್ಮಾನ ಮಾಡುತ್ತಿದ್ದೇವೆ" ಎಂದರು. ನಿಮ್ಮಂತಹ ಗುರುಗಳ ಆಶೀರ್ವಾದ ನಮ್ಮ ಜೀವನದ ದೊಡ್ಡ ಭಾಗ್ಯ.ನಿವೃತ್ತಿಯ ನಂತರವೂ ಪತ್ರಕರ್ತರಾಗಿ ಸೇವೆ ಸಲ್ಲಿಸುತ್ತಿರುವ ನಿಮಗೆ ಸದಾ ಉತ್ತಮ ಆರೋಗ್ಯ, ಸಂತೋಷ ಮತ್ತು ನೆಮ್ಮದಿ ದೊರೆಯಲಿ ಎಂದರು.

ಗೌರವ ಸ್ವೀಕರಿಸಿ ಮಾತನಾಡಿದ ಹೊಳಲು ಶ್ರೀಧರ್ ಅವರು, ಶಿಷ್ಯಂದಿರ ಪ್ರೀತಿಗೆ ಕೃತಜ್ಞತೆ ಸಲ್ಲಿಸಿ, ವಿದ್ಯಾರ್ಥಿಗಳು ತಮ್ಮನ್ನು ಮರೆಯದೆ ನೆನಪಿಸಿಕೊಳ್ಳುವುದೇ ಶಿಕ್ಷಕ ವೃತ್ತಿಗೆ ಸಿಗುವ ದೊಡ್ಡ ಆಸ್ತಿ-ಪ್ರಶಸ್ತಿ ಎಂದರು.

ಹಳೆಯ ವಿದ್ಯಾರ್ಥಿಗಳಾದ ಚಂದ್ರ,ಮೂರ್ತಿ, ರವಿ, ಯೋಗಾನಂದ,ನಿಂಗೇಗೌಡ,ಪ್ರದೀಪ್, ತಾಯಮ್ಮ, ಲಕ್ಷ್ಮಿ.ಜೆ, ಶೀಲಾ, ಜ್ಯೋತಿ, ಭಾಗ್ಯ, ವತ್ಸಲ,ಪವಿತ್ರ.ಜೆ ಹಾಗೂ ಶ್ರೀಧರ್ ಅವರ ಪತ್ನಿ ಕಾಂತಾಮಣಿ ಇದ್ದರು.

# ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆಯಾದ ಸಿ ಎನ್ ಪ್ರಭು ರವರಿಗೆ ಸನ್ಮಾನ

**ಕೆ .ಆರ್. ನಗರ:** ತಾಲೂಕಿನ ಚನ್ನಂಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ 2026-27ನೇ ಸಾಲಿನ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆಯಾದ

ಸಿ ಎನ್ ಪ್ರಭು ರವರಿಗೆ ಸನ್ಮಾನ ಮಾಡಲಾಯಿತು. ಈ ಸಂದರ್ಭದಲ್ಲಿ

ಅಧ್ಯಕ್ಷರಾದ ಸಿ. ವೈ. ಅಭಿಲಾಶ್ ಮಾತನಾಡಿ

2026?27ನೇ ಸಾಲಿನ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆಯಾಗಿರುವ ಎರೆಮನುಗನಹಳ್ಳಿ ಶಾಲೆಯ ಗೌರವಾನ್ವಿತ ಶಿಕ್ಷಕರಾದ ಸಿ.ಎನ್. ಪ್ರಭು ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ತಮ್ಮ ಅತ್ಯುತ್ತಮ ಬೋಧನೆ, ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ನೀಡಿದ ಕೊಡುಗೆ, ಶಾಲೆಯ ಪ್ರಗತಿಗಾಗಿ ಸಲ್ಲಿಸಿದ ನಿಸ್ವಾರ್ಥ ಸೇವೆ ಹಾಗೂ ಶಿಕ್ಷಣ ಕ್ಷೇತ್ರದಲ್ಲಿನ ಅಪಾರ ಸಮರ್ಪಣೆಯನ್ನು ಗುರುತಿಸಿ ದೊರೆತಿರುವ ಈ ಪ್ರಶಸ್ತಿ ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ.

ಈ ಗೌರವವು ಎರೆಮನುಗನಹಳ್ಳಿ ಶಾಲೆಗೆ, ಗ್ರಾಮಕ್ಕೆ ಹಾಗೂ ಸಮಸ್ತ ಶಿಕ್ಷಣ ಪ್ರೇಮಿಗಳಿಗೆ ಸಂತಸ ತಂದಿದೆ.

ಮುಂದಿನ ದಿನಗಳಲ್ಲಿಯೂ ತಮ್ಮ ಸೇವೆಯ ಮೂಲಕ ಇನ್ನಷ್ಟು ವಿದ್ಯಾರ್ಥಿಗಳ ಭವಿಷ್ಯವನ್ನು ಉಜ್ವಲಗೊಳಿಸಲಿ ಎಂದು ಹಾರೈಸುತ್ತಾ, ಶ್ರೀ ಸಿ.ಎನ್. ಪ್ರಭು ಅವರಿಗೆ ಮತ್ತೊಮ್ಮೆ ಹೃತ್ಪೂರ್ವಕ ಅಭಿನಂದನೆಗಳು ತಿಳಿಸಿದರು ಈ ಸಂದರ್ಭದಲ್ಲಿ ಉಪಾಧ್ಯಕ್ಷರದ ಶಂಕರನಾಯಕ ನಿರ್ದೇಶಕರುಗಳಾದ ತಮ್ಮೇಗೌಡ. ಮಲ್ಲಿಕಾರ್ಜುನ್. ಕುಮಾರ್. ರಘುನಾಥ್. ಚೆಲುವಯ್ಯ. ಸೈಯದ್ ಇಸ್ರಾರ. ಉಷಾ ಸಂಜಯ್ ಕುಮಾರ್ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾದ ಸಿ ಪಿ ಪ್ರಕಾಶ್ ಮತ್ತು ನೌಕರರು ಗಳಾದ ಸಿ ಮಂಜು ರಾಜೇಶ್ ಧನಲಕ್ಷ್ಮಿ ಹಾಜರಿದ್ದರು




## ಡಾ.ಶುಭಶ್ರೀ ಪ್ರಸಾದ್ ಅವರ "ನೋಟಿನಾಚೆಯ ನೋಟ" ಕೃತಿ ಲೋಕಾರ್ಪಣೆ

# ಹಾಸ್ಯ ಇದ್ದರೆ ಕುಟುಂಬದಲ್ಲಿ ನೆಮ್ಮದಿ: ಎಂ.ಎಸ್.ನರಸಿಂಹಮೂರ್ತಿ

**ಮಂಡ್ಯ:** "ಭರತಮುನಿ ನಾಟ್ಯಶಾಸ್ತ್ರದಲ್ಲಿ ಶೃಂಗಾರದ ನಂತರ ಎರಡನೇ ಸ್ಥಾನವನ್ನು ಹಾಸ್ಯಕ್ಕೆ ನೀಡಿದ್ದಾರೆ. ಶೃಂಗಾರ ಇದ್ದರೆ ಜಗತ್ತು ಬೆಳೆಯುತ್ತದೆ, ಆದರೆ ಹಾಸ್ಯ ಇದ್ದರೆ ಕುಟುಂಬದಲ್ಲಿ ನೆಮ್ಮದಿ ಸಿಗುತ್ತದೆ. ಹಾಸ್ಯವಿಲ್ಲದಿದ್ದರೆ ಕುಟುಂಬ ನಡೆಯುವುದೇ ಕಷ್ಟ" ಎಂದು ಸುಪ್ರಸಿದ್ಧ ಹಾಸ್ಯ ಸಾಹಿತಿ ಎಂ.ಎಸ್. ನರಸಿಂಹಮೂರ್ತಿ ಅವರು ಹೇಳಿದರು.

ನಗರದ ಕರ್ನಾಟಕ ಸಂಘದ ಕೆ.ವಿ. ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಭಾನುವಾರ ಮೈಸೂರಿನ ಸಂವಹನ ಪ್ರಕಾಶನದ ವತಿಯಿಂದ ಆಯೋಜಿಸಿದ್ದ ಲೇಖಕಿ ಡಾ.ಶುಭಶ್ರೀ ಪ್ರಸಾದ್ ಅವರ "ನೋಟಿನಾಚೆಯ ನೋಟ" ಕೃತಿ ಲೋಕಾರ್ಪಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

"ಪ್ರತಿಯೊಬ್ಬರಿಗೂ ತಮ್ಮದೇ ಅನುಭವಗಳಿರುತ್ತವೆ, ಅದನ್ನು ಅವರೇ ಬರೆಯಬೇಕು, ಬೇರೆಯವರು ಬರೆಯಲು ಆಗುವುದಿಲ್ಲ. ಈ ಕೃತಿಯಲ್ಲಿಯೂ ಲೇಖಕಿಯ ಸ್ವಂತ ಅನುಭವಗಳಾದ ಬ್ಯಾಂಕಿನಲ್ಲಿ ಅಕೌಂಟ್ ಓಪನ್ ಮಾಡುವಾಗ ಆದ ತೊಂದರೆ, ಇಂಟರ್‌ಕಾಸ್ಟ್ ವಿವಾಹವನ್ನು ಮ್ಯಾನೇಜ್ ಮಾಡಿಕೊಂಡ ಬಗೆ ಇದೆ.

ಹಿಂದೆ ಮದುವೆ ಮನೆಗಳಲ್ಲಿ ಭಾವ-ನಾದಿನಿಯರನ್ನು ರೇಗಿಸುವುದು, ಬೀಗರ ಇತ್ಯರ್ಥ ಹಾಡುಗಳಂತಹ ಆರೋಗ್ಯಕರ ಪೈಪೋಟಿ ಇತ್ತು, ಈಗ ಅದು ಇಲ್ಲದಂತಾಗಿದೆ.ನಮ್ಮ ಮುಖ ಕನ್ನಡಿಯಿದ್ದ ಹಾಗೆ ನಾವು ಏನನ್ನು ಪ್ರದರ್ಶಿಸುತ್ತೇವೆಯೋ ಅದು ಇನ್ನೊಬ್ಬರ ಮುಖದಲ್ಲಿ ಪ್ರತಿಫಲಿಸುತ್ತದೆ.ನಗುವಾದರೆ ನಗು,ಅಳುವಾದರೆ ಅಳು,ಸಿಟ್ಟಾದರೆ ಸಿಟ್ಟು ಹೀಗೆ ಸಾಗುತ್ತದೆ. ಮನುಷ್ಯ-ಮನುಷ್ಯರ ನಡುವಿನ ಸಂಬಂಧಗಳು ಕಡಿಮೆ ಆಗುತ್ತಿವೆ. ಆದ್ದರಿಂದ ನಗುನಗುತ್ತಾ ಮಾತನಾಡಿ ಸಂತೋಷವಾಗಿರಬೇಕು. ನಡೆ-ನುಡಿ ಶುದ್ಧವಾಗಿದ್ದು ಸಂಸ್ಕಾರವಂತರಾಗಬೇಕು" ಎಂದರು



### "ನೋಟಿನಾಚೆಯ ನೋಟ" ಶೀರ್ಷಿಕೆ ಅದ್ಭುತ: ತ.ನಾ.ಶಿ

ಕೃತಿ ಕುರಿತು ಮಾತನಾಡಿದ ಕವಿ ಹಾಗೂ ಮಂಡ್ಯ ನ್ಯಾಯಾಲಯದ ನಿವೃತ್ತ ಮುಖ್ಯ ಆಡಳಿತಾಧಿಕಾರಿ ತ.ನಾ.ಶಿವಕುಮಾರ್ ಅವರು, "ನೋಟಿನಾಚೆಯ ನೋಟ ಎಂಬ ಶೀರ್ಷಿಕೆಯೇ ಅತ್ಯಂತ ಅದ್ಭುತವಾಗಿದೆ. ನೋಟು ಎಂದರೆ ಹಣ, ಹಣ ಬದುಕಿಗೆ ಅನಿವಾರ್ಯವಾದರೂ ಹಣದ ಹಿಂದಿರುವುದೇ ನಿಜವಾದ ಬದುಕು. ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಧರ್ಮ ಮಾರ್ಗದ ಸಂಪಾದನೆಯ ಸಂದೇಶವನ್ನು ಈ ಕೃತಿಯ ಪಾತ್ರಗಳು ನೀಡುತ್ತವೆ. ಈ ಪುಸ್ತಕದಲ್ಲಿ ನಿಮ್ಮದೇ ಒಂದು ಚಿತ್ರ ಸಿಗುತ್ತದೆ, ನಿಮ್ಮ ಗೆಳೆಯನ, ತಂದೆ-ತಾಯಿ, ಮಕ್ಕಳ, ಸಮಾಜದ ಚಿತ್ರ ಸಿಗುತ್ತದೆ. 'ಯದ್ಭಾವಂ ತದ್ಭವತಿ' ಎಂಬಂತೆ ಏನನ್ನು ಅಂದುಕೊಳ್ಳುತ್ತೇವೋ ಹಾಗೆ ಕಾಣುವಂತೆ ಈ ಪುಸ್ತಕ ಮನಸ್ಸನ್ನು ಸೆಳೆಯುತ್ತದೆ. ಕಥೆಯನ್ನು ಒಂದು ಪಾತ್ರವೇ ಹೇಳಿಕೊಂಡು ಹೋಗುವ ಶೈಲಿ ವಿಶೇಷವಾಗಿದೆ. ಕೃತಿಯಲ್ಲಿನ 'ನಾಳೆ ಎಂಬುದು ಸುಳ್ಳು' ಲೇಖನ ಹಾಗೂ ಕಮಲಾ ಪಾತ್ರ ಬಹಳ ಚೆಂದವಾಗಿ ಮೂಡಿಬಂದಿದೆ" ಎಂದರು.

**ಓದುವ ಹವ್ಯಾಸ ಬೆಳೆಯಬೇಕು: ಡಿ.ಎನ್. ಲೋಕಪ್ಪ**

ಸಂವಹನ ಪ್ರಕಾಶನದ ಡಿ.ಎನ್. ಲೋಕಪ್ಪ ಅವರು ಮಾತನಾಡಿ, "ನನಗೆ ಮಂಡ್ಯ ಜಿಲ್ಲೆ ತುಂಬಾ ಹತ್ತಿರ, 40 ವರ್ಷದಿಂದ ಸಾಹಿತ್ಯ ಕ್ಷೇತ್ರದ ಜೊತೆಯಲ್ಲಿ ಇದ್ದೇವೆ. ಇವತ್ತು ಪುಸ್ತಕಗಳು ಬೇಕಾದಷ್ಟು ಬರುತ್ತಿವೆ, ಬರೆಯುವವರು ಇದ್ದಾರೆ, ಆದರೆ ಓದುವವರ ಸಂಖ್ಯೆ ಕಡಿಮೆ ಆಗುತ್ತಿದೆ, ಓದುವ ಹವ್ಯಾಸ ಬೆಳೆಯಬೇಕು" ಎಂದು ಕರೆ ನೀಡಿದರು.

ಕೃತಿಯನ್ನು ಲೇಖಕಿಯ ತಾಯಿ ಸುವರ್ಣ ನಾಗರಾಜು ಅವರು ಲೋಕಾರ್ಪಣೆ ಮಾಡಿದರು. ಅನಿವಾರ್ಯ ಕಾರಣದಿಂದ ಗೈರಾದ ಡಾ. ಮಂಜುಳಾ ಹುಲ್ಲಹಳ್ಳಿ ಅವರ ಶುಭ ಸಂದೇಶದ ಧ್ವನಿಮುದ್ರಣವನ್ನು ಪ್ರಸಾರ ಮಾಡಲಾಯಿತು.

ಲೇಖಕಿ ಡಾ.ಶುಭಶ್ರೀಪ್ರಸಾದ್ ಅವರು ತಮ್ಮ ಅನಿಸಿಕೆ ಹಂಚಿಕೊಂಡರು.

ಸಮಾರಂಭದಲ್ಲಿ ಶುಭಶ್ರೀ ಅವರ ಪತಿ ಕ್ಯೂ.ಸ್ವಾ.ಪ್ರಸಾದ್,ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಎಸ್.ಶಿವಪ್ರಕಾಶ್ ಇದ್ದರು.

# ಇತರರ ಬದುಕು ನೋಡುತ್ತಾ; ನಮ್ಮ ಬದುಕನ್ನೇ ಮರೆತಿದ್ದೇವೆಯೇ?



| ಶಿವಬಸಪ್ಪ ಗು ಜಂಗಾಲಿ
ಲೇಖಕರು ಹಾಗೂ ಸಾಹಿತಿ

ಮನುಷ್ಯನ ಬದುಕು ತನ್ನದೇ ಆದ ಒಂದು ಸುಂದರ ಕಥೆ. ಪ್ರತಿಯೊಬ್ಬರಿಗೂ ವಿಭಿನ್ನ ಕನಸು, ವಿಭಿನ್ನ ಗುರಿ, ವಿಭಿನ್ನ ಹೋರಾಟ ಮತ್ತು ವಿಭಿನ್ನ ಯಶಸ್ಸಿನ ವ್ಯಾಖ್ಯಾನವಿದೆ. ಆದರೆ ಇಂದಿನ ಡಿಜಿಟಲ್ ಯುಗದಲ್ಲಿ ನಾವು ನಮ್ಮ ಬದುಕನ್ನು ಬದುಕುವುದಕ್ಕಿಂತ, ಇತರರ ಬದುಕನ್ನು ನೋಡುವುದರಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದೇವೆ. ಮೊಬೈಲ್ ಪರದೆ ತೆರೆದರೆ ಸಾಕು?ಯಾರೋ ಹೊಸ ಮನೆ ಕಟ್ಟಿದ್ದಾರೆ, ಮತ್ತೊಬ್ಬರು ವಿದೇಶ ಪ್ರವಾಸದಲ್ಲಿದ್ದಾರೆ, ಇನ್ನೊಬ್ಬರು ಹೊಸ ಕಾರು ಖರೀದಿಸಿದ್ದಾರೆ, ಯಾರೋ ಉದ್ಯೋಗದಲ್ಲಿ ಬಡ್ತಿ ಪಡೆದಿದ್ದಾರೆ. ಇಂತಹ ದೃಶ್ಯಗಳನ್ನು ನೋಡುತ್ತಾ, ನಮ್ಮ ಬದುಕಿನಲ್ಲಿ ಏನಿಲ್ಲ ಎಂಬುದನ್ನು ಲೆಕ್ಕ ಹಾಕಲು ಆರಂಭಿಸುತ್ತೇವೆ. ಆದರೆ ನಮ್ಮಲ್ಲಿರುವುದರ ಮೌಲ್ಯವನ್ನು ಎಷ್ಟು ಬಾರಿ ನೆನಪಿಸಿಕೊಳ್ಳುತ್ತೇವೆ?

ಸಾಮಾಜಿಕ ಜಾಲತಾಣಗಳು ಮನುಷ್ಯರನ್ನು ಹತ್ತಿರ ತಂದಿವೆ. ದೂರದಲ್ಲಿರುವವರೊಂದಿಗೆ ಸಂಪರ್ಕ ಬೆಳೆಸಲು, ಜ್ಞಾನ ಪಡೆಯಲು, ಪ್ರತಿಭೆ ಪ್ರದರ್ಶಿಸಲು ಮತ್ತು ಹೊಸ ಅವಕಾಶಗಳನ್ನು ಹುಡುಕಲು ಅವು ಉತ್ತಮ ವೇದಿಕೆಗಳಾಗಿವೆ. ಆದರೆ ಇದೇ ವೇದಿಕೆಗಳು ಕೆಲವೊಮ್ಮೆ ಹೋಲಿಕೆಯ ಕನ್ನಡಿಯಾಗುತ್ತವೆ. ಇತರರ ಬದುಕಿನ ಅತ್ಯುತ್ತಮ ಕ್ಷಣಗಳನ್ನು ನೋಡುತ್ತಾ, ನಮ್ಮ ಬದುಕಿನ ಸಾಮಾನ್ಯ ದಿನಗಳನ್ನು ಹೋಲಿಸುತ್ತೇವೆ. ಅವರ ಯಶಸ್ಸು ಕಾಣುತ್ತದೆ; ಅದರ ಹಿಂದೆ ಇದ್ದ ವರ್ಷಗಳ ಪರಿಶ್ರಮ ಕಾಣುವುದಿಲ್ಲ. ಅವರ ನಗು ಕಾಣುತ್ತದೆ; ಅದರ ಹಿಂದೆ ಮರೆಮಾಡಿರುವ ನೋವು ಕಾಣುವುದಿಲ್ಲ. ಅವರ ಪ್ರವಾಸದ ಚಿತ್ರ ಕಾಣುತ್ತದೆ; ಅದಕ್ಕಾಗಿ ಅವರು ಮಾಡಿದ ತ್ಯಾಗ ಕಾಣುವುದಿಲ್ಲ.

ಇದೇ ಕಾರಣಕ್ಕೆ ಸಾಮಾಜಿಕ ಜಾಲತಾಣದಲ್ಲಿ ಕಾಣಿಸುವ ಪ್ರತಿಯೊಂದು ಬದುಕೂ ಸಂಪೂರ್ಣ ಬದುಕಲ್ಲ ಎಂಬುದನ್ನು ಅರಿತುಕೊಳ್ಳಬೇಕು. ಅದು ಆಯ್ದ ಕ್ಷಣಗಳ ಪ್ರದರ್ಶನ. ಆದರೆ ನಾವು ಅದನ್ನೇ ನಿಜವಾದ ಜೀವನವೆಂದು ಭಾವಿಸಿ ನಮ್ಮನ್ನು ನಾವು ಕಡಿಮೆ ಎಂದುಕೊಳ್ಳುತ್ತೇವೆ. ?ಅವನಿಗೆ ಇದೆ, ನನಗೆ ಏಕೆ ಇಲ್ಲ??, ?ಅವಳು ಮುಂದೆ ಹೋಗಿದ್ದಾಳೆ, ನಾನು ಇನ್ನೂ ಇಲ್ಲೇ ಏಕೆ?? ಎಂಬ ಪ್ರಶ್ನೆಗಳು ಮನಸ್ಸಿನ ನೆಮ್ಮದಿಯನ್ನು ಕದಡುತ್ತವೆ. ಹೋಲಿಕೆಯ ಈ ಮನೋಭಾವ ನಿಧಾನವಾಗಿ ಆತ್ಮವಿಶ್ವಾಸವನ್ನು ಕುಗ್ಗಿಸುತ್ತದೆ.

ವಾಸ್ತವವಾಗಿ, ಜೀವನ ಒಂದು ಓಟವಲ್ಲ. ಎಲ್ಲರೂ ಒಂದೇ ಸಮಯದಲ್ಲಿ ಒಂದೇ ಗುರಿ ತಲುಪಬೇಕೆಂಬ ನಿಯಮವಿಲ್ಲ. ಕೆಲವರು ಬೇಗ ಯಶಸ್ಸು ಕಾಣಬಹುದು; ಇನ್ನೂ ಕೆಲವರು ತಡವಾಗಿ ತಮ್ಮ ದಾರಿಯನ್ನು ಕಂಡುಕೊಳ್ಳಬಹುದು. ತಡವಾಗಿ ಅರಳಿದ ಹೂವು ಕಡಿಮೆ ಸುಂದರವಲ್ಲ. ಹಾಗೆಯೇ ತಡವಾಗಿ ಬಂದ ಯಶಸ್ಸು ಕಡಿಮೆ ಮೌಲ್ಯದದ್ದಲ್ಲ. ಮತ್ತೊಬ್ಬರ ಗೆಲುವು ನಮ್ಮ ಸೋಲಿನ ಪ್ರಮಾಣಪತ್ರವಲ್ಲ. ಅವರ ದಾರಿ ಅವರದ್ದು; ನಮ್ಮ ದಾರಿ ನಮ್ಮದು.

ಇಂದು ನಾವು ಸಂತೋಷವನ್ನೂ ಲೈಕ್‌ಗಳು ಮತ್ತು ಕಾಮೆಂಟ್‌ಗಳ ಸಂಖ್ಯೆಯಲ್ಲಿ ಅಳೆಯುವ ಪರಿಸ್ಥಿತಿ ಬಂದಿದೆ. ಆದರೆ ನಿಜವಾದ ಸಂತೋಷಕ್ಕೆ ಪ್ರೇಕ್ಷಕರ ಅಗತ್ಯವಿಲ್ಲ. ತಾಯಿಯೊಂದಿಗೆ ಕುಳಿತು ಮಾತನಾಡಿದ ಕ್ಷಣ, ತಂದೆಯ ಕೈ ಹಿಡಿದ ಕ್ಷಣ, ಮಗುವಿನ ನಗು, ಸ್ನೇಹಿತನೊಂದಿಗೆ ಹಂಚಿಕೊಂಡ ಮಾತು, ಕುಟುಂಬದೊಂದಿಗೆ ಸೇವಿಸಿದ ಸರಳ ಊಟ?ಇವುಗಳಿಗೆ ಯಾವುದೇ ?ಲೈಕ್? ಅಗತ್ಯವಿಲ್ಲ. ಕೆಲವು ಅಮೂಲ್ಯ ಕ್ಷಣಗಳು ಕ್ಯಾಮೆರಾದಲ್ಲಿ ಸೆರೆಯಾಗದಿದ್ದರೂ ಹೃದಯದಲ್ಲಿ ಶಾಶ್ವತವಾಗಿ ಉಳಿಯುತ್ತವೆ.

ನಾವು ಬದುಕನ್ನು ಅನುಭವಿಸುವುದಕ್ಕಿಂತ ಅದನ್ನು ದಾಖಲಿಸುವುದಕ್ಕೆ ಹೆಚ್ಚು ಒತ್ತು ನೀಡುತ್ತಿದ್ದೇವೆಯೇ ಎಂಬ ಪ್ರಶ್ನೆಯೂ ಮುಖ್ಯ. ಪ್ರವಾಸಕ್ಕೆ ಹೋದಾಗ ಪ್ರಕೃತಿಯನ್ನು ನೋಡುವುದಕ್ಕಿಂತ ಮೊದಲು ಫೋಟೋ ತೆಗೆಯುತ್ತೇವೆ. ಸ್ನೇಹಿತರನ್ನು ಭೇಟಿಯಾದಾಗ ಮಾತುಕತೆಗಿಂತ ಮೊಬೈಲ್ ಪರದೆಗೆ ಹೆಚ್ಚು ಗಮನ ಕೊಡುತ್ತೇವೆ. ಮಕ್ಕಳೊಂದಿಗೆ ಆಟವಾಡುವ ಬದಲು ಅವರ ವಿಡಿಯೋ ಮಾಡುವುದರಲ್ಲಿ ತಲ್ಲೀನರಾಗುತ್ತೇವೆ. ಹೀಗೆ ಬದುಕಿನ ಕ್ಷಣಗಳನ್ನು ಬದುಕುವುದಕ್ಕಿಂತ ಅವುಗಳನ್ನು ತೋರಿಸುವುದು ಮುಖ್ಯವಾಗುತ್ತಿದೆ.

ಆದ್ದರಿಂದ ಇತರರ ಬದುಕನ್ನು ನೋಡುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕಿಲ್ಲ; ಆದರೆ ಅದನ್ನು ನಮ್ಮ ಬದುಕಿನ ಅಳತೆಗೋಲನ್ನಾಗಿ ಮಾಡಬಾರದು. ಅವರ ಯಶಸ್ಸಿನಿಂದ ಪ್ರೇರಣೆ ಪಡೆಯೋಣ, ಅವರ ಸಾಧನೆಯಿಂದ ಕಲಿಯೋಣ, ಆದರೆ ನಮ್ಮ ದಾರಿಯನ್ನು ಮರೆಯಬೇಡ. ?ನಿನ್ನೆಗಿಂತ ಇಂದು ನಾನು ಉತ್ತಮವಾಗಿದ್ದೀನೆಯೇ?? ಎಂಬ ಪ್ರಶ್ನೆ ?ಅವನಿಗಿಂತ ನಾನು ಎಲ್ಲಿ ಇದ್ದೇನೆ?? ಎನ್ನುವುದಕ್ಕಿಂತ ಬಹಳ ಮುಖ್ಯ.

ನಮ್ಮ ಬಳಿ ಇರುವುದನ್ನು ಅರಿತುಕೊಳ್ಳುವ ಮನಸ್ಸು ಬೆಳೆಸಿಕೊಳ್ಳಬೇಕು. ದೊಡ್ಡ ಮನೆ ಇಲ್ಲದಿದ್ದರೂ ಪ್ರೀತಿಯ ಕುಟುಂಬವಿರಬಹುದು. ಹೆಚ್ಚಿನ ಹಣ ಇಲ್ಲದಿದ್ದರೂ ನೆಮ್ಮದಿಯ ನಿದ್ರೆ ಇರಬಹುದು. ಪ್ರಸಿದ್ಧಿ ಇಲ್ಲದಿದ್ದರೂ ನಮ್ಮನ್ನು ನಿಜವಾಗಿ ಪ್ರೀತಿಸುವ ಕೆಲವರು ಇರಬಹುದು. ಇವುಗಳ ಮೌಲ್ಯವನ್ನು ಯಾವುದೇ ಪರದೆ ತೋರಿಸಲಾರದು.

ಕೊನೆಗೆ, ಜೀವನ ಮತ್ತೊಬ್ಬರ ಕಥೆಯನ್ನು ಅನುಸರಿಸುವ ಪ್ರಯಾಣವಲ್ಲ. ಅದು ನಮ್ಮದೇ ಕಥೆಯನ್ನು ಬರೆಯುವ ಅವಕಾಶ. ಇತರರ ಬೆಳಕನ್ನು ನೋಡಿ ಸಂತೋಷಪಡೋಣ; ಆದರೆ ನಮ್ಮ ದೀಪವನ್ನು ಆರಿಸಿಕೊಳ್ಳಬೇಡ. ಅವರ ದಾರಿಯನ್ನು ಗೌರವಿಸೋಣ; ಆದರೆ ನಮ್ಮ ದಾರಿಯಲ್ಲಿ ನಡೆಯುವುದನ್ನು ನಿಲ್ಲಿಸಬೇಡ. ಜೀವನವನ್ನು ಇತರರ ಕಣ್ಣಿನಿಂದ ನೋಡುವುದಕ್ಕಲ್ಲ; ನಮ್ಮ ಹೃದಯದಿಂದ ಅನುಭವಿಸುವುದಕ್ಕಾಗಿದೆ.

ಇತರರ ಬದುಕು ಎಷ್ಟೇ ಸುಂದರವಾಗಿ ಕಾಣಲಿ, ನಮ್ಮ ಬದುಕನ್ನು ಬದುಕುವುದನ್ನು ಮರೆತರೆ, ನಮ್ಮ ಕೈಯಲ್ಲಿರುವ ಅತ್ಯಂತ ಅಮೂಲ್ಯವಾದ ಉಡುಗೊರೆಯನ್ನೇ ಕಳೆದುಕೊಂಡಂತಾಗುತ್ತದೆ.



# ಸಂಭ್ರಮವಿಲ್ಲದ ಕಳೆದು ಹೋದ ಶ್ರಾವಣ



ಶ್ರಾವಣ ಬಂತು ನಾಡಿಗೆ ಎಂದು ವರಕವಿ ದ.ರಾ. ಬೇಂದ್ರೆಯವರು ಹಾಡಿದಾಗ, ಆ ಒಂದು ಸಾಲಿನಲ್ಲೇ ಮಳೆ, ಹಸಿರು, ಹಬ್ಬ, ಭಕ್ತಿ ಮತ್ತು ಬದುಕಿನ ಸಂಭ್ರಮವೆಲ್ಲವೂ ಕಣ್ಣ ಮುಂದೆ ಬರುತ್ತದೆ. ಶ್ರಾವಣವೆಂದರೆ ಪ್ರಕೃತಿಯೂ ಮನಸ್ಸೂ ಒಟ್ಟಿಗೆ ನವಿರಾಗುವ ಕಾಲ. ಆದರೆ ಈ ಬಾರಿ ಒಂದು ವಿಚಿತ್ರ ಅನುಭವ. ಶ್ರಾವಣದಲ್ಲಿ ಮಳೆಯೇ ಬರಲಿಲ್ಲ! ಮಳೆ ಬಾರದ ಶ್ರಾವಣ ಮಾತ್ರವಲ್ಲ, ಹಿಂದಿನ ಶ್ರಾವಣದ ಸಂಭ್ರಮವೂ ಕಾಣಿಸಲಿಲ್ಲ. ಶ್ರಾವಣ ಬಂದು ಹೋಯಿತು. ಪಂಚಾಂಗದ ಒಂದು ಪುಟ ತಿರುಗಿತು. ಆದರೆ ಮನಸ್ಸಿನಲ್ಲಿ ಉಳಿಯಬೇಕಾದ ಆ ಹಬ್ಬದ ಸದ್ದು, ಭಕ್ತಿಯ ವಾತಾವರಣ, ಜನರ ಓಡಾಟ, ಮನೆಯೊಳಗಿನ ಚಟುವಟಿಕೆ?ಎಲ್ಲವೂ ಯಾವುದೋ ಕಡೆ ಮಸುಕಾದಂತೆ ಅನಿಸಿತು.

ನಮ್ಮ ಬಾಲ್ಯದ ಶ್ರಾವಣ ಹೀಗಿರಲಿಲ್ಲ.. ಅದು ಬಿಟ್ಟು ಬಿಡದೆ ಹೊಯ್ಯುತ್ತಿದ್ದ ಜಡಿ ಮಳೆ. ಎಲ್ಲೆಲ್ಲೂ ಕೊಡೆ ಹಿಡಿದು ನಡೆಯುತ್ತಿದ್ದ ಜನ, ಮುಂಗಾರು ಮಳೆಯ ಸಿಂಚನದಿಂದ ಒಣಗಿದ ಭೂಮಿ ಹಸಿರು ಹೊದಿಕೆಯನ್ನು ಹೊದ್ದು ಕಂಗೊಳಿಸುತ್ತಿತ್ತು. ಜಲಪಾತಗಳು, ನದಿಗಳು ತುಂಬಿ ಹರಿಯುತ್ತಾ, ಪ್ರಕೃತಿಯು ದೈವಿಕ ಕಳೆಯನ್ನು ಪಡೆದುಕೊಳ್ಳುತ್ತಿತ್ತು . ಈ ಶ್ರಾವಣ ಮಳೆಯಿಲ್ಲದ ಶ್ರಾವಣವಾಯಿತು. ನದಿ ಕೆರೆಗಳು ನೀರಿಲ್ಲದೆ ಬಡವಾಗಿವೆ . ಶ್ರಾವಣದಲ್ಲೂ ಚೈತ್ರದ ಬಿಸಿಯಿದೆ .

ಶ್ರಾವಣವೆಂದರೆ ಸಾಲು ಸಾಲಿ ಹಬ್ಬಗಳ ಮಾಸ. ಬೆಳಗಿನ ಜಾವದಿಂದಲೇ ಮನೆಯ ಮುಂದೆ ರಂಗೋಲಿ. ದೇವರ ಮನೆಯಲ್ಲಿ ದೀಪ. ಅಡುಗೆ ಮನೆಯಲ್ಲಿ ಹಬ್ಬಕ್ಕಾಗಿ ವಿಶೇಷ ತಿನಿಸುಗಳ ಪರಿಮಳ. ಹೆಣ್ಣುಮಕ್ಕಳಿಗೆ ಹೂವು, ಬಳೆ, ಅರಿಶಿನ?ಕುಂಕುಮ. ಮಕ್ಕಳಿಗೆ ಹಬ್ಬದ ಉತ್ಸಾಹ. ಒಂದರ ಹಿಂದೆ ಒಂದರಂತೆ ಬರುವ ಹಬ್ಬಗಳು ಮನೆಯನ್ನಷ್ಟೇ ಅಲ್ಲ, ಇಡೀ ಊರನ್ನೇ ಚೈತನ್ಯಗೊಳಿಸುತ್ತಿದ್ದವು. ಅದು ಕೇವಲ ಪೂಜೆ?ಪುನಸ್ಕಾರಗಳ ತಿಂಗಳಾಗಿರಲಿಲ್ಲ. ಜನರನ್ನು ಒಂದೆಡೆ ಸೇರಿಸುವ ತಿಂಗಳಾಗಿತ್ತು.

ಶ್ರಾವಣದಲ್ಲಿ ನಡೆಯುತ್ತಿದ್ದ ಅನ್ನದಾನಗಳು ನೆನಪಾಗುತ್ತವೆ. ದೇವಾಲಯಗಳಲ್ಲೋ, ಮಠಗಳಲ್ಲೋ, ಮನೆಗಳಲ್ಲೋ ಊಟದ ವ್ಯವಸ್ಥೆ ಇರುತ್ತಿತ್ತು. ಹರಿಕಥೆ ನಡೆಯುತ್ತಿತ್ತು. ನಾಟಕಗಳು ನಡೆಯುತ್ತಿದ್ದವು. ಸಂಜೆ ಜನರು ಮನೆ ಬಿಟ್ಟು ಹೊರಬಂದು ಇಂತಹ ಕಾರ್ಯಕ್ರಮಗಳಲ್ಲಿ ಕುಳಿತುಕೊಳ್ಳುತ್ತಿದ್ದರು. ಕಥೆ ಕೇಳುತ್ತಿದ್ದರು, ನಾಟಕ ನೋಡುತ್ತಿದ್ದರು, ಪರಿಚಿತರನ್ನು ಭೇಟಿಯಾಗುತ್ತಿದ್ದರು. ಅಲ್ಲಿ ಮನರಂಜನೆಗಿಂತ ಹೆಚ್ಚಾಗಿ ಸಾಮೂಹಿಕ ಬದುಕಿನ ಅನುಭವ ಇತ್ತು.

ಶ್ರಾವಣ ಶನಿವಾರಗಳಂತೂ ವಿಶೇಷ. ಹಣೆಯ ಮೇಲೆ ನಾಮ ಧರಿಸಿಕೊಂಡು ಜನರು ಮನೆಮನೆಗೆ ಬರುತ್ತಿದ್ದರು. ಬಾಗಿಲ ಮುಂದೆ ನಿಂತು, ಭಕ್ತಿಭಾವದಿಂದ, ?ವೆಂಕಟೇಶಾಯ ಮಂಗಳಂ, ಶ್ರೀಮನ್ ನಾರಾಯಣ ಗೋವಿಂದ, ಗೋವಿಂದ??

ಎಂದು ಹೇಳುತ್ತಿದರು .

ಮನೆಯವರು ಒಳಗಿನಿಂದ ಅಕ್ಕಿ ತಂದು ಕೊಡುತ್ತಿದ್ದರು. ಕೆಲವರು ಹಣ ನೀಡುತ್ತಿದ್ದರು. ಅದು ದೊಡ್ಡ ಮೊತ್ತವಾಗಿರಲಿಲ್ಲ. ಆದರೆ ಆ ಕೊಡುಗೆಯಲ್ಲಿ ಭಕ್ತಿ ಇತ್ತು. ಕೊಡುವವರಲ್ಲೂ ಸಂತೋಷ, ಸ್ವೀಕರಿಸುವವರಲ್ಲೂ ಕೃತಜ್ಞತೆ. ಇಂದು ಆ ದೃಶ್ಯ ಅಪರೂಪ. ಇದು ಬಂಗಳೂರಿಂತಹ ಪಟ್ಟಣಗಳಲ್ಲಿ ಬಹುತೇಕ ಕಾಣೆಯಾಗಿದೆ .

ಕಾಲ ಬದಲಾಗಿದೆ. ಬದುಕಿನ ವೇಗ ಹೆಚ್ಚಾಗಿದೆ. ನಗರಗಳು ಬೆಳೆದಿವೆ. ಕುಟುಂಬಗಳು ಚದುರಿವೆ. ಉದ್ಯೋಗ, ಶಿಕ್ಷಣ, ಸಂಚಾರ, ಸಮಯದ ಅಭಾವ?ಎಲ್ಲವೂ ನಮ್ಮ ದಿನಚರಿಯನ್ನು ಬದಲಿಸಿವೆ. ಸರಳ ಮಾನವೀಯ ಆಚರಣೆಗಳು ದೂರವಾಗುತ್ತಿವೆ.

ಇದರ ನಡುವೆ ಹಬ್ಬಗಳ ಸ್ವರೂಪವೂ ಬದಲಾಗಿದೆ.

ಹಬ್ಬಗಳು ಈಗ ಹೆಚ್ಚು ಪ್ರದರ್ಶನದ ಅವಕಾಶಗಳಾಗುತ್ತಿವೆಯೇ? ಎಂಬ ಪ್ರಶ್ನೆ ಮೂಡುತ್ತದೆ. ಯಾರು ಎಷ್ಟು ಅದ್ದೂರಿಯಾಗಿ ಆಚರಿಸಿದರು, ಎಷ್ಟು ಅಲಂಕಾರ ಮಾಡಿದರು, ಏನು ಧರಿಸಿದರು, ಎಲ್ಲಿ ಹೋದರು ಎಂಬುದೇ ಮುಖ್ಯವಾಗುತ್ತಿರುವಂತೆ ಕಾಣುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ಹಬ್ಬದ ಚಿತ್ರಗಳು ತುಂಬುತ್ತವೆ. ಆದರೆ ಆ ಚಿತ್ರಗಳ ಹಿಂದೆ ನಿಜವಾದ ಸಂಭ್ರಮ ಎಷ್ಟಿದೆ ಎಂಬುದು ಮಾತ್ರ ಪ್ರಶ್ನೆ. ಹಿಂದೆ ಹಬ್ಬದ ಸಂತೋಷವನ್ನು ಹಂಚಿಕೊಳ್ಳಲಾಗುತ್ತಿತ್ತು. ಇಂದು ಅದನ್ನು ಹೆಚ್ಚಾಗಿ ತೋರಿಸಲಾಗುತ್ತಿದೆ. ಈ ವ್ಯತ್ಯಾಸ ಬಹಳ ಸೂಕ್ಷ್ಮವಾದದ್ದು.

ಹಬ್ಬಕ್ಕೆ ಹೊಸ ಬಟ್ಟೆ ತೊಡುವುದರಲ್ಲಿ ತಪ್ಪಿಲ್ಲ. ಮನೆಯನ್ನು ಅಲಂಕರಿಸುವುದರಲ್ಲಿ ತಪ್ಪಿಲ್ಲ. ಅದ್ದೂರಿಯಾಗಿ ಆಚರಿಸುವುದೂ ತಪ್ಪಲ್ಲ. ಆದರೆ ಆಚರಣೆಯ ಮಧ್ಯೆ ಅದರ ಆತ್ಮವೇ ಕಳೆದುಹೋಗಬಾರದು.

ಹಬ್ಬವೆಂದರೆ ಮನೆಯವರ ಜೊತೆ ಕುಳಿತು ಊಟ ಮಾಡುವುದು. ದೂರದ ಬಂಧುವಿಗೆ ಕರೆ ಮಾಡಿ ಮಾತನಾಡುವುದು. ಹಿರಿಯರ ಕಾಲಿಗೆ ನಮಸ್ಕರಿಸುವುದು. ಮಕ್ಕಳಿಗೆ ನಮ್ಮ ಆಚರಣೆಗಳ ಹಿಂದಿರುವ ಅರ್ಥವನ್ನು ತಿಳಿಸುವುದು. ನೆರೆಮನೆಯವರನ್ನು ಕರೆದು ಅರಿಶಿನ, ಕುಂಕುಮ, ತಾಂಬೂಲ, ಪ್ರಸಾದ ಹಂಚಿಕೊಳ್ಳುವುದು. ಅಗತ್ಯವಿರುವವರಿಗೆ ಅನ್ನ ನೀಡುವುದು. ಇಂತಹ ಸಣ್ಣ ಸಂಗತಿಗಳಲ್ಲೇ ಹಬ್ಬದ ದೊಡ್ಡ ಅರ್ಥ ಅಡಗಿದೆ. ಇದೆಲ್ಲ ಮರೆಯಾಗುತ್ತಿದೆ . ಹಾಗಾಗಿ ನನಗೆ ಅನಿಸಿದ್ದು ಶ್ರಾವಣ ತನ್ನ ಸಂಭ್ರಮವನ್ನು ಕಳೆದುಕೊಳ್ಳುತ್ತಿದೆಯೇನೋ!

ಬಹುಶಃ ಅದಕ್ಕಾಗಿಯೇ ಈ ವರ್ಷ ಶ್ರಾವಣ ಮನಸ್ಸಿಗೆ ಸ್ವಲ್ಪ ಖಾಲಿ ಖಾಲಿಯಾಗಿ ಅನಿಸಿತು.

ಮಳೆಯೂ ಬರಲಿಲ್ಲ. ಮನೆಮನೆಗೆ ಕೇಳಿಬರುತ್ತಿದ್ದ ಕೆಲವು ಹಳೆಯ ಭಕ್ತಿಗೀತೆಗಳೂ ಕೇಳಿಸಲಿಲ್ಲ. ಅನ್ನದಾನದ ಸಾಲುಗಳು ಕಡಿಮೆಯಾಗಿವೆ. ಹರಿಕಥೆ, ನಾಟಕಗಳಂತಹ ಕಾರ್ಯಕ್ರಮಗಳು ಅಪರೂಪವಾಗಿವೆ. ಶ್ರಾವಣ ಶನಿವಾರದಂದು ನಾಮ ಧರಿಸಿ ಮನೆಮನೆಗೆ ಬರುವ ಆ ದೃಶ್ಯವೂ ನಿಧಾನವಾಗಿ ನೆನಪಿನ ಭಾಗವಾಗುತ್ತಿದೆ.

ಶ್ರಾವಣ ನಮ್ಮಿಂದ ದೂರವಾಗುತ್ತಿದೆಯೇ?

ಖಂಡಿತ ಇಲ್ಲ ಎಂದುಕೊಳ್ಳೋಣ, ಶ್ರಾವಣ ಇನ್ನೂ ಬರುತ್ತದೆ. ಹಬ್ಬಗಳೂ ಬರುತ್ತವೆ. ಆದರೆ ಶ್ರಾವಣವನ್ನು ಶ್ರಾವಣವಾಗಿಸುವ ಕೆಲವು ಸರಳ ಸಂಭ್ರಮಗಳು ನಮ್ಮ ಬದುಕಿನಿಂದ ಜಾರಿಹೋಗುತ್ತಿವೆ. ಇದನ್ನು ಉಳಿಸಿಕೊಂಡು ಮುಂದಿನ ತಲೆಮಾರಿಗೆ ತಲುಪಿಸೋಣ .

ಮುಂದಿನ ಶ್ರಾವಣದಲ್ಲಿ ಮಳೆ ಬರಲಿ, ಬರದಿರಲಿ. ಆದರೆ ನಮ್ಮ ಮನೆಗಳ ಬಾಗಿಲುಗಳು ಮಾತ್ರ ಸ್ವಲ್ಪ ಹೆಚ್ಚು ತೆರೆದಿರಲಿ. ದೇವರ ಮುಂದೆ ದೀಪದ ಜೊತೆಗೆ ಸಂಬಂಧಗಳ ದೀಪವೂ ಬೆಳಗಲಿ. ಅನ್ನದಾನ, ಹರಿಕಥೆ, ನಾಟಕ, ಭಜನೆಗಳಂತಹ ಸಾಮೂಹಿಕ ಸಂಭ್ರಮಗಳಿಗೆ ಮತ್ತೆ ಜಾಗ ಸಿಗಲಿ. ಆಗ ಬೇಂದ್ರೆಯವರ ?ಶ್ರಾವಣ ಬಂತು ನಾಡಿಗೆ? ಎಂಬ ಸಾಲು ಕೇವಲ ಕವಿತೆಯ ಸಾಲಾಗಿರುವುದಿಲ್ಲ. ಅದು ಮತ್ತೆ ನಮ್ಮ ಬದುಕಿನ ಅನುಭವವಾಗುತ್ತದೆ.





| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

# ವಿಕಸಿತ ಭಾರತಕ್ಕೆ ಪೂರಕ ಕಾರ್ಯಾಗಾರ




**ಬೆಂಗಳೂರು:** ಎಲ್ಲ ಉತ್ಪಾದನಾ ವಲಯದಲ್ಲಿ ಉತ್ತಮ ಗುಣಮಟ್ಟ ಕಾಯ್ದುಕೊಳ್ಳುವುದು ಮುಖ್ಯ. ಇದಕ್ಕೆ ಸಂಬಂಧಿಸಿದ ಕಾಯಾಗಾರಗಳು ದೇಶಾದ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ನಡೆಯಬೇಕೆಂದು ಉತ್ತಮ ಗುಣಮಟ್ಟಕಾಯ್ದುಕೊಳ್ಳಲು ಕಾರ್ಯಾಗಾರ ನಡೆಯಬೇಕೆಂದು ಕ್ವಾಲಿಟಿ ಸರ್ಕಲ್ ಫೋರಂ ಆಫ್ ಇಂಡಿಯ ರಾಷ್ಟ್ರೀಯ ಅಧ್ಯಕ್ಷ ಅವಿನಾಶ್ ಮಿಶ್ರ ಹೇಳಿದ್ದಾರೆ.

ಅವರು ಕ್ವಾಲಿಟಿ ಸರ್ಕಲ್ ಫೋರಂ ಆಫ್ ಇಂಡಿಯ ಬೆಂಗಳೂರು ಶಾಖೆ ಬನ್ನೇರುಘಟ್ಟ ರಸ್ತೆಯಲ್ಲಿರುವ ಟಿ. ಜಾನ್ ಕಾಲೇಜಿನಲ್ಲಿ ಏರ್ಪಡಿಸಿದ್ದ ಒಂದು ದಿನ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಹೇಳಿದರು. ಬೆಂಗಳೂರು ಶಾಖೆಯ ಅಧ್ಯಕ್ಷ ತೇಜ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು.

585 ತಂಡಗಳು 108 ಸಂಸ್ಥೆಗಳನ್ನು ಪ್ರತಿನಿಧಿಸಿದ್ದವು. ಆಟೋಮೊಬೈಲ್‌ನಿಂದ ಹಿಡಿದು ಆಸ್ಪತ್ರೆ ಮತ್ತು ಏರ್‌ಪೋರ್ಟ್ ಆಡಳಿತವರ್ಗಗಳವರೆಗೆ ವಿವಿಧ ಉದ್ದಿಮೆಗಳಿಗೆ ಸೇರಿದ 2 ಸಾವಿರ ಜನ ಭಾಗವಹಿಸಿದ್ದರು.

ಉತ್ಪಾದನಾ ವಲಯದಲ್ಲಿ ಯಾವುದೇ ವಸ್ತು ತಯಾರಿಸಿದರೆ ಗ್ರಾಹಕರು ಮೊದಲು ನೋಡುವುದು ಅದರ ಗುಣಮಟ್ಟ. ಅದು ಎಷ್ಟು ದಿನ ಬಾಳಿಕೆ ಬರುತ್ತೆ? ಬಳಸಿರುವ ವಸ್ತುಗಳ ಗುಣಮಟ್ಟ, ಅದನ್ನು ತಯಾರಿಸಿರುವಾಗ ಗುಣಮಟ್ಟಕ್ಕೆ ಗಮನ ಕೊಟ್ಟಿದ್ದಾರೆಯೇ ಎಂಬುದನ್ನು ನೋಡುತ್ತಾರೆ. ಆಮೇಲೆ ಅದರ ಕಾರ್ಯಕ್ಷಮತೆಯನ್ನು ನೋಡುತ್ತಾರೆ. ಹೀಗಾಗಿ ಪ್ರತಿಯೊಂದು ಕೈಗಾರಿಕೆಯೂ ಗುಣಮಟ್ಟ ಕಾಯ್ದುಕೊಳ್ಳಲು ಗಮನ ಹರಿಸಲೇಬೇಕು. ಹಿಂದೆ ಪ್ರತಿ ಕೈಗಾರಿಕೆ ಮತ್ತು ಪ್ರತಿಯೊಂದು ಇಲಾಖೆಯಲ್ಲೂ ಗುಣಮಟ್ಟ ನಿಯಂತ್ರಣ ವಿಭಾಗ ಇರುತ್ತಿತ್ತು. ಈಗ ಇದು ಉಳಿದಿಲ್ಲ. ಜಪಾನ್ ತಂತ್ರಜ್ಞಾನದ ಪ್ರಕಾರ ಪ್ರತಿಯೊಬ್ಬರೂ ಗುಣಮಟ್ಟವನ್ನು ಪರಿಶೀಲಿಸಿ ಕೆಲಸ ಮಾಡಬೇಕು. ಒಂದು ವೇಳೆ ಅವರು ಬಳಸಿದ ಕಚ್ಚಾವಸ್ತುಗುಣಮಟ್ಟದ್ದಲ್ಲ ಎಂದರೆ ಅವರೇ ಅದನ್ನು ತಿರಸ್ಕರಿಸಬೇಕು. ಗುಣಮಟ್ಟ ನಿಯಂತ್ರಣ ವಿಭಾಗದ ಕೆಲಸ ಎನ್ನುವಂತಿಲ್ಲ. ಪ್ರತಿ ಹಂತದಲ್ಲೂ ಉತ್ತಮ ಗುಣಮಟ್ಟಕ್ಕೆ ಆದ್ಯತೆ ಕೊಡಲೇಬೇಕು. ಇದು ಎಲ್ಲ ಕೈಗಾರಿಕೆಗಳು ಅನುಸರಿಸುತ್ತಿರುವ ಮಾರ್ಗ. ಇದರ ಬಗ್ಗೆ ಕ್ವಾಲಿಟಿ ಸರ್ಕಲ್ ಫೋರಂ ಆಫ್ ಇಂಡಿಯ ಬೆಂಗಳೂರು ಶಾಖೆ ಪ್ರತಿ ವರ್ಷ ಕಾರ್ಯಾಗಾರ ನಡೆಸುತ್ತಿದೆ ಎಂದು ತೇಜ್ ಕುಮಾರ್ ತಿಳಿಸಿದರು.

# ಸಾವಿನ ಕಣ್ಣಿಗೆ ಮಣ್ಣೆರಚುವ ಶಿಸ್ತು!



ಅಲಾರಂ ಇಲ್ಲದೆ ಎಚ್ಚರವಾಗುವುದೇ ಶಿಸ್ತಿನ ಮೊದಲ ಗೆಲುವು. ಬ್ರಾಹ್ಮೀ ಮುಹೂರ್ತದ ಉಷಃಪಾನ ಜಠರದಲ್ಲಿ ಗ್ಯಾಸ್ಟ್ರಿನ್ ಎಂಬ ಜೀರ್ಣದ ಜ್ಯೋತಿಯನ್ನು ಹಚ್ಚುತ್ತದೆ, ರಾತ್ರಿಯ ವಿಷವನ್ನು ನದಿಯಂತೆ ಹೊರದೂಡುತ್ತದೆ. ಒಂದೇ ಗಂಟೆಗೆ ತಟ್ಟೆ ಮುಂದಿಡುವ ಹೊತ್ತಿಗೆ ಲೆಪ್ಟಿನ್–ಘ್ರೆಲಿನ್ ತಕ್ಕಡಿ ತಾನೇ ತಾನಾಗಿ ತೂಗುತ್ತದೆ, ಇನ್ನೊಂದಿಷ್ಟು ಎಂಬ ದುರಾಸೆ ಕರಗುತ್ತದೆ. ರಾತ್ರಿ ಹತ್ತಕ್ಕೆ ಕಣ್ಣು ಮುಚ್ಚಿ, ಬೆಳಗ್ಗೆ ಐದಕ್ಕೆ ಕಣ್ಣು ತೆರೆಯುವ ಈ ಸರಳ ಸೂತ್ರ, ಟೆಲೋಮಿಯರ್ ಎಂಬ ಆಯುಸ್ಸಿನ ದಾರವನ್ನು ಬಿಗಿಗೊಳಿಸಿ ಕೋಶಗಳಿಗೆ ಮತ್ತೆ ಹದಿಹರೆಯದ ಹೊಳಪು ನೀಡುತ್ತದೆ.

ಶಿಸ್ತು ಮನೆಯ ನಾಲ್ಕು ಗೋಡೆ ದಾಟಿ ಬೀದಿಗಿಳಿಯಬೇಕು. ಬಸ್ ನಿಲ್ದಾಣದಲ್ಲಿ ತಳ್ಳಾಟವಿಲ್ಲದ ಸರತಿ, ಆಸ್ಪತ್ರೆಯಲ್ಲಿ ಮೊಬೈಲ್ ಮೌನ, ಅಂಗಳದಲ್ಲಿ ಹಸಿ–ಒಣಸು ವಿಂಗಡಿಸಿದ ಎರಡು ಬುಟ್ಟಿ – ಇದೇ ನಾಗರಿಕತೆಯ ಆಧಾರ್ ಕಾರ್ಡ್! ಗಂಟೆ ಬಾರಿಸುವ ಮುನ್ನ ಬೆಂಚು ಹಿಡಿದ ಮಗು, ನೆನ್ನೆಯ ಫೈಲ್ ನೆನ್ನೆಯೇ ಮುಗಿಸಿದ ಗುಮಾಸ್ತ, ಗಡಿಯಾರ ನೋಡಿ ಬಂದ ಪೌರಕಾರ್ಮಿಕ – ಇವರು ಸೇರಿದರೆ ಊರಿನ ಹೃದಯ ಬಡಿತವೇ ಸರಿಯಾಗುತ್ತದೆ.

**ಮಂತ್ರ ಸರಳ:** ಬೆಳಗ್ಗೆ ಅಗಸೆ ಗಂಜಿ, ಮಧ್ಯಾಹ್ನ ಕಡಲೆ–ಬೀಟ್ರೂಟ್ ಬಣ್ಣದ ಪಲ್ಯ, ಸಂಜೆ ಇಂಗಿನ ಮಜ್ಜಿಗೆ. ಪ್ರತಿ ಗಂಟೆಗೊಮ್ಮೆ ಕುರ್ಚಿಗೆ ರಜೆ ಕೊಡಿ, ವಾರಕ್ಕೊಮ್ಮೆ ನಾಲಗೆಗೆ ಎರಡು ಗಂಟೆ ಮೌನ ವ್ರತ ಕೊಡಿ. ತಿಂಗಳ ಕೊನೆಗೆ ನಿಮ್ಮ ದಿನಚರಿಯನ್ನೇ ಕನ್ನಡಿಯಲ್ಲಿ ನೋಡಿಕೊಳ್ಳಿ.ಕ್ಷಣವನ್ನು ಕಟ್ಟಿದವನಿಗೆ ಸಾವು ಕೂಡ ಸಾಲ ಕೇಳುತ್ತದೆ – ಶಿಸ್ತೇ ಆ ಭದ್ರಕೋಟೆ.

ಅಂಕಣ-15
ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,